ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೪ ಮಾರ್ಚ್-೨೦೧೪ ಸಂಚಿಕೆ-೮

ಬಹುಮತ - ಅಲ್ಪಮತ ಚೆಲ್ಲಾಟ
ದೇಶಹಿತಕ್ಕೆ ಸಂಕಟ

*

ಪಂಚಾಯತ್‌ರಾಜ್ಯ :
ಮತ್ಸರದ ರಾಷ್ಟ್ರೀಕರಣ

*

ಭ್ರಷ್ಟಾಚಾರದ ವಿರುದ್ಧ ಸಮರ
ಏಕೆ-ಹೇಗೆ

*

ಹಳ್ಳಿ ಹಳ್ಳಿಯಾಗಿ ಉಳಿದಲ್ಲಿ
ಉಳಿದೆಲ್ಲ

ಜನಪದ ವಿಚಾರದಲ್ಲಿ

ಮಾರ್ಚ್ - ೨೦೧೪

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್ - ೨೦೧೪
ಸಂಪುಟ - ೧೪
ಸಂಚಿಕೆ - ೮

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ತುತ್ತಿನ ಚೀಲ

ಅನ್ನಬ್ರಹ್ಮದ ದೇಗುಲದಲ್ಲಿ
ಬೆಳಗೂ ಬೈಗೂ ಛಿಳಿ ಛಿಟಿ ಬೆಂಕಿ
ಡೊಂಬರ ಪೂಜೆಯು, ಕಾಗೆಯ ಮಂತ್ರ
ಗಾಳಿಯ ಎಡೆಯು, ಬೊಬ್ಬೆಯ ಗಂಟೆ-
ಅನ್ನಬ್ರಹ್ಮದ ದೇಗುಲದಲ್ಲಿ!

ದೈವುಳ್ಳವರಿಗೆ ದಯವೇ ಇಲ್ಲ!
ತಿತ್ತಿರಿ ತುಂಬಿದೆ ಕೂಳಿನ ಕೋಟೆ!
ಬಿಡುಗಣ್ಣವರಿಗೆ ಕಾಣುವುದಿಲ್ಲ
ಅಮೃತದ ತೇಗಿನ ಮದವಂತಹದು!
ಹಸಿದವ ಬಲ್ಲ ಹಸಿವೆಯ ಶೂಲಿ!

ಕಿಕ್ಕಿರಿ ತುಂಬಿದೆ ಭೂಮಿಯ ಕಣಜ
ಕಕ್ಕಸಬಡುತಿದೆ ಬೊಕ್ಕಸದೊಡಲು
ಬಾಳಿಗಿಂತಲೂ ಕೂಳೇ ಮೇಲೊ?
ಬರಿದೋ ಬರಿದು ತೆರವೋ ತೆರವೂ
ಬಡವರ ಬಗ್ಗರ ತುತ್ತಿನ ಚೀಲಾ.

ದೇವರದೊಂದು ಗೋರಿಯ ಕಟ್ಟಿ,
ಧರ್ಮದ ಧೂಪಕೆ ಬೆಂಕಿಯನಿಕ್ಕಿ,
ಗಣಗಣ ಬಾರಿಸಿ ಪ್ರಾಣದ ಗಂಟೆಯ,
ಸಾವಿನ ನೋವಿಗೆ ಕಲಮಲವೆದ್ದು
ನೆಲವನ್ನೆಲ್ಲಾ ತುತ್ತುವೆನೆಂದು
ಗದರುತ್ತಿಹುದು-ಗರ್ಜಿಸುತಿಹುದು
ಬಡವರ ಬಗ್ಗರ ತುತ್ತಿನ ಚೀಲದ
ಒಳಗಿನ ಒಳಗಿನ ಒಳದನಿಯೊಂದು!

- ಅಂಬಿಕಾತನಯ ದತ್ತ

ವಿಚಾರ ದೀಪ್ತಿ

೨೦೧೧ರಲ್ಲಿ ನಡೆದ ಕೈಮಗ್ಗ ಗಣತಿಯು ಮಗ್ಗಗಳ ಸಂಖ್ಯೆ ಮತ್ತು ನೇಕಾರರ ಸಂಖ್ಯೆ ಕಡಿಮೆಯಾಗಿರುವುದನ್ನು ಬಹಿರಂಗಪಡಿಸುತ್ತದೆ. ಸದ್ಯ ಕೈಮಗ್ಗದ ಉದ್ದಿಮೆಯಲ್ಲಿ ೪೨ಲಕ್ಷ ಜನರು ಕೆಲಸಮಾಡುತ್ತಿದ್ದಾರೆ. ಕೇಳಬೇಕಾದ ಕೆಲ ಪ್ರಶ್ನೆಗಳಿವೆ. ಈ ಕೆಗಾರಿಕೆಗೆ ಇಂದಿನ ಜಾಗತೀಕರಣದ ಸಮಯದಲ್ಲಿ ವಿನಾಶ ಹೊಂದುವ ಗತಿ ಬಂದಿದೆಯೆ? ವಿದ್ಯುತ್ ಮಗ್ಗಗಳ ಹೊಡೆತವನ್ನು ತಡೆಯಬಲ್ಲದೆ? ಈ ಪ್ರಾಚೀನ ಪರಂಪರೆಯು ತನ್ನ ನೇಕಾರರಿಗೆ ಹೆಚ್ಚಿನ ಸಂಪಾದನೆ ಕೊಡಲಾರದೆಂಬ ಕಾರಣಕ್ಕೆ ಅದನ್ನು ಸಾಯಲಿಕ್ಕೆ ಬಿಡಬೇಕೆ? ಬರಲಿರುವ ವರ್ಷಗಳಲ್ಲಿ ಅದು ವಸ್ತುಸಂಗ್ರಹಾಲಯದ ವಸ್ತು ಆಗುವುದೆ? ಜವಳಿ ಇಲಾಖೆ ಆಗಲೇ ಆಸೆಯನ್ನು ಬಿಟ್ಟಿರುವುದನ್ನು ತೋರುತ್ತದೆ. ಮಗ್ಗಗಳ ಮತ್ತು ನೇಯ್ಗೆಯವರ ಸಂಖ್ಯೆ ಗಣನೀಯವಾಗಿ ಕುಸಿದಿದೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಕಾರಣ ಕಡಿಮೆ ಆದಾಯ ತರುವ ಈ ಉದ್ಯಮಕ್ಕೆ ಮುಂದಿನ ತಲೆಮಾರಿನ ಜನ ಬರಲು ಆಸಕ್ತರಾಗಿಲ್ಲದೇ ಇರುವುದು. ಆ ಉದ್ಯಮದಲ್ಲಿರುವ ಕಠಿಣ ಪರಿಶ್ರಮದ ಕಾರಣದಿಂದಾಗಿ ಬಹಳಷ್ಟು ಸಂಖ್ಯೆಯ ನೇಕಾರರು ಕಡು ಬಡತನದಲ್ಲಿ ಜೀವಿಸುತ್ತಿದ್ದಾರೆ. ಭಾರತದ ಜವಳಿ ಉದ್ಯಮ ಮೂರು ವಿಭಾಗಗಳಲ್ಲಿ ಹಂಚಿ ಹೋಗಿದೆ: ಗಿರಣಿ, ವಿದ್ಯುತ್ ಮಗ್ಗ ಮತ್ತು ಕೈಮಗ್ಗ ದೇಶದ ಒಟ್ಟು ಜವಳಿ ಉತ್ಪಾದನೆಯಲ್ಲಿ ವಿದ್ಯುತ್ ಮಗ್ಗಗಳು ಶೇ.೬೧.೩೨ರಷ್ಟು, ಗಿರಣಿಗಳು ೩.೩೪ರಷ್ಟು ಮತ್ತು ಕೈಮಗ್ಗಗಳು ೧೧.೨೮ರಷ್ಟು ಜವಳಿ ಉತ್ಪಾದಿಸುತ್ತವೆ. ಗ್ರಾಮೀಣ ಉದ್ಯೋಗ ಸೃಷ್ಟಿಸುವಲ್ಲಿ ಕೈಮಗ್ಗಗಳು ಗಣನೀಯ ಪಾತ್ರವಹಿಸುತ್ತವೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದರೆ ಇತರ ಜವಳಿ ವಲಯಗಳು ಪ್ರಬಲವಾಗಿರುವುದರಿಂದ ಕೈಮಗ್ಗಗಳ ವಿಸ್ತರಣೆಗೆ ಅವಕಾಶವಿಲ್ಲವಾಗಿದೆ.

೨೦೧೧ರಲ್ಲಿ ವಿತ್ತಮಂತ್ರಿ ಮೂರುಸಾವಿರ ಕೋಟಿ ಹಣವನ್ನು ಕೈಮಗ್ಗಗಳ ಪುನರುಜ್ಜೀವನಕ್ಕಾಗಿ ಮಂಜೂರು ಮಾಡಿದರು. ಆದರೆ ದುರ್ದೈವದಿಂದ ಮೂರು ವರ್ಷಗಳ ತರುವಾಯವೂ ಹಣ ನೇಕಾರರನ್ನು ತಲುಪಿಲ್ಲ. ಪುನರುಜ್ಜೀವನವಾಗುವುದು ದೂರದ ಕನಸಿನಂತಾಗಿದೆ. ವಾಸ್ತವವಾಗಿ ಸಾಮಾನ್ಯ ಮನುಷ್ಯನು ಮೋಸ ಹೋಗುತ್ತಿದ್ದಾನೆ. ಏಕೆಂದರೆ ಅವನು ಖರೀದಿಸುವ ಕೈಮಗ್ಗದ ಉತ್ಪಾದನೆ ನೈಜವಾಗಿ ವಿದ್ಯುತ್ ಮಗ್ಗದ ಉತ್ಪಾದನೆಯೇ ಆಗಿರುತ್ತದೆ.

ಕೈಮಗ್ಗ ಕೈಗಾರಿಕೆಯ ಕಷ್ಟವನ್ನು ಬಹಿರಂಗಗೊಳಿಸುವುದಕ್ಕಾಗಿ ನೇಕಾರರ ಎರಡುವಾರದ ಪಾದಯಾತ್ರೆಯನ್ನು ಉತ್ತರ ಕರ್ನಾಟಕದಲ್ಲಿ ಆಯೋಜಿಸಲಾಗಿತ್ತು. ಆ ಪಾದಯಾತ್ರೆಯ ೨೪೫ ಕಿಲೋಮೀಟರ್‌ನಷ್ಟು ಪ್ರದೇಶದಲ್ಲಿ ಗದಗ್ ಮತ್ತು ಬಾಗಲಕೋಟೆ ಜಿಲ್ಲೆಯಲ್ಲ ನಡೆಯಿತು. ಅವರ ಬೇಡಿಕೆ ಕೈಮಗ್ಗಗಳನ್ನು ವಿದ್ಯುತ್ ಮಗ್ಗಗಳನ್ನಾಗಿ ಪರಿವರ್ತಿಸಕೂಡದೆಂದು ಮತ್ತು ಕೈಮಗ್ಗ ಕಾನೂನನ್ನು ಅನುಷ್ಠಾನಗೊಳಿಸಬೇಕೆಂಬುದಾಗಿತ್ತು.

ಇಂಥ ವಿಪರೀತ ಹದಗೆಟ್ಟ ಪರಿಸ್ಥಿತಿಯಲ್ಲಿಯೂ ದೇಶದಲ್ಲಿ ೩೪ ಲಕ್ಷ ಕೈಮಗ್ಗಗಳು ಕೆಲಸಮಾಡುತ್ತಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಪ್ರಪಂಚದಲ್ಲಿಯ ಎಲ್ಲಾ ಮಗ್ಗಗಳ ಸಂಖ್ಯೆಯನ್ನು ಕೂಡಿದರೂ ಈ ಸಂಖ್ಯೆ ದೊಡ್ಡದಾಗಿದೆ. ಕೈಮಗ್ಗಗಳಿಗೆ ಬೇಕಿರುವುದು ಕೊಂಚ ಬೆಂಬಲ ಮತ್ತು ಮಾನ್ಯತೆ. ಆಗ ಕೈಮಗ್ಗ ಉದ್ದಿಮೆ ಐಟಿ ಉದ್ಯಮಕ್ಕೆ ಸರಿಸಾಟಿಯಾಗಿ ಹೊರಹೊಮ್ಮಬಲ್ಲದು. ಜಾಗತೀಕವಾಗಿ ಎದುರಾಳಿ ಇಲ್ಲದ ಒಂದು ಜೀವಂತ ಕಲೆ ಎಂದು ನಾವು ಪರಿಗಣಿಸಿದರೆ ಅದು ಸಾಧ್ಯವಾದೀತು.

– ಪಾಂಡುರಂಗ ಹೆಗಡೆ

ಬಹುಮತ – ಅಲ್ಪಮತದ ಚೆಲ್ಲಾಟ ದೇಶದ ಹಿತಕ್ಕೆ ಸಂಕಟ

– ಸುರೇಂದ್ರ ಕೌಲಗಿ

ಜನರ, ಜನರಿಂದ ಮತ್ತು ಜನರಿಗಾಗಿ ಪ್ರಜಾಪ್ರಭುತ್ವ ಎಂದು ತಿಳಿಯಲಾಗಿದೆ. ಅದರಂತೆ ದೇಶದ ರಾಜಕಾರಣವನ್ನು ರೂಪಿಸಲಾಗಿದೆ. ಸಂವಿಧಾನ ಅದಕ್ಕೆ ತನ್ನ ಅಧಿಕೃತತೆಯ ಮುದ್ರೆಯನ್ನು ಒತ್ತಿದೆ. ವಾಸ್ತವದಲ್ಲಿ ಆಗಿರುವುದು ಪಕ್ಷಗಳ, ಪಕ್ಷಗಳಿಂದ, ಪಕ್ಷಗಳಿಗಾಗಿ ನಡೆಯುತ್ತಿರುವ ಪಕ್ಷಗಳ ಪ್ರಭುತ್ವ, ಪ್ರಜೆಗಳು ನೇಪಥ್ಯಕ್ಕೆ ಸರಿದಿದ್ದಾರೆ. ದೇಶದ ರಾಜಕಾರಣದ ವೇದಿಕೆಯ ಮೇಲೆ ರಾಜಕೀಯ ಪಕ್ಷಗಳ ಯಕ್ಷಗಾನ ನಡೆಯುತ್ತಿದೆ. ಪ್ರಜಾಪ್ರಭುತ್ವದ ಸ್ಥಾನವನ್ನು ರಾಜಕೀಯ ಪ್ರಭುತ್ವ ಆಕ್ರಮಿಸಿಕೊಂಡಿರುವುದಕ್ಕೆ ಕಾರಣ ಬಹುಮತ ಮತ್ತು ಅಲ್ಪಮತದ ಶನಿ ಸಂತಾನ. ಸ್ವತಂತ್ರ ಭಾರತ ಅನೇಕ ಬಗೆಯ ಆಂತರಿಕ ಗಲಭೆಗಳಿಂದ ತತ್ತರಿಸಿ ಹೋಗುವುದೆಂದೂ ಮತ್ತು ತನ್ನ ಸ್ವಾತಂತ್ರವನ್ನು ಉಳಿಸಿಕೊಳ್ಳಲು ಅಸಮರ್ಥವಾಗುವುದೆಂದೂ ಇಂಗ್ಲೆಂಡ್ ಪ್ರಧಾನಿಯಾಗಿದ್ದ ವಿನ್ಸೆಂಟ್ ಚರ್ಚಿಲ್ ಭಾರತ ದೇಶಕ್ಕೆ ಸ್ವಾತಂತ್ರ್ಯ ಕೊಡಬೇಕಾಗಿ ಬಂದ ಸಂದರ್ಭದಲ್ಲಿ ಭವಿಷ್ಯ ನುಡಿದಿದ್ದ ಮಾತನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಬಹುಮತ ಮತ್ತು ಅಲ್ಪಮತದ ಆಧಾರದ ಮೇಲೆ ರಾಜಕೀಯ ತೀರ್ಮಾನ ಕೈಗೊಳ್ಳಬೇಕೆಂಬ ರಾಜನೈತಿಕ ಸಿದ್ಧಾಂತದ ಕಾರಣದಿಂದಾಗಿಯೇ ದೇಶದಲ್ಲಿ ಆಂತರಿಕ ಗಲಭೆಗಳಾಗುತ್ತಿವೆ ಮತ್ತು ಪ್ರಜಾಪ್ರಭುತ್ವದ ಹೆಸರಿನಲ್ಲಿ ರಾಜಕೀಯ ಪಕ್ಷಗಳ ಪ್ರಭುತ್ವ ನಡೆಯುತ್ತಿದೆ! ಪ್ರಜಾಪ್ರಭುತ್ವದಲ್ಲಿ ಬಹುಮತ ಮತ್ತು ಅಲ್ಪಮತದ ಸಿದ್ಧಾಂತ ಬರುವುದಕ್ಕೆ ಪ್ರಜೆಗಳೇ ಮೂಲತಃ ಕಾರಣರಾಗಿದ್ದಾರೆ. ಏಕೆಂದರೆ ಪ್ರಜೆಗಳ ಮನಸ್ಸು ಚಂಚಲ. ಅವರಲ್ಲಿ ಅತಾರ್ಕಿಕತೆ ಇರುತ್ತದೆ ಮತ್ತು ಸಮಗ್ರ ತಿಳುವಳಿಕೆಯ ಅಭಾವ. ಎಲ್ಲಿಯವರೆಗೆ ಪ್ರಜಾಪ್ರಭುತ್ವದ ಮೂಲದ್ರವ್ಯ ಎನಿಸಿರುವ ಪ್ರಜೆ ಅಥವಾ ಜನಸಾಮಾನ್ಯರು ರಾಜಕೀಯ ವ್ಯವಸ್ಥೆ ತಮ್ಮ ದೈನಂದಿನ ಜೀವನದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಮತ್ತು ನಿಯಂತ್ರಿಸುತ್ತದೆ ಎಂಬುದನ್ನು ಅರಿಯುವುದಿಲ್ಲವೊ, ಅಲ್ಲಿಯವರಗೆ ಬಹುಮತ ಮತ್ತು ಅಲ್ಪಮತದ ಚೆಲ್ಲಾಟ ನಡೆಯುತ್ತಲೇ ಇರುವುದು. ಬಹುಮತದ ಸರ್ಕಾರ ಯಾವಾಗಲೂ ನ್ಯಾಯವಾಗಿಯೇ, ಸಮಾಜದ ಹಿತ ದೃಷ್ಟಿಯಿಂದಲೇ ಕೆಲಸಮಾಡುತ್ತದೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಅಂತೆಯೇ ಅಲ್ಪಮತದ ಸರ್ಕಾರ ಸಮಾಜ ಹಿತ ವಿರೋಧ ಕೆಲಸವನ್ನೇ ಮಾಡುತ್ತದೆಂದು ಹೇಳಲು ಸಾಧ್ಯವಿಲ್ಲ. ದೇಶದ ಆರು ದಶಕಗಳ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಾದ ನಾವು ಈ ಬಹುಮತ ಮತ್ತು ಅಲ್ಪಮತದ ಪರಿಣಾಮಗಳನ್ನು ಪ್ರತ್ಯಕ್ಷವಾಗಿ ಕಂಡಿದ್ದೇವೆ ಮತ್ತು ಅನುಭವಿಸಿದ್ದೇವೆ. ರಾಜ್ಯದಲ್ಲಿ ಕೂಡ ಅಲ್ಪಮತದ ಸರ್ಕಾರವೊಂದು ಬೇರೊಂದು ಪಕ್ಷದ ಬೆಂಬಲದೊಂದಿಗೆ ಸರ್ಕಾರ ರಚಿಸಿ ಮಾಡಿದ ಅವಾಂತರಗಳನ್ನು ಕಂಡಿದ್ದೇವೆ. ಕೇಂದ್ರದಲ್ಲಿ ಯಾವ ಪಕ್ಷಕ್ಕೂ ಬಹುಮತ ದೊರೆಯದಿದ್ದುದರಿಂದ ಹನ್ನೆರಡು ಪಕ್ಷಗಳು ಸೇರಿ ಸರ್ಕಾರವನ್ನು ರಚಿಸಿ ಹದಿನೈದು ವರ್ಷ ರಾಜ್ಯಭಾರ ನಡೆಸಿದವು. ಅನೇಕ ಅಡಿಗೆ

ಭಟ್ಟರು ಸೇರಿ ಅಡಿಗೆಯನ್ನು ಕಡಿಸಿದಂತೆ ಈಗಿನ ಕೇಂದ್ರ ಸರ್ಕಾರದ ಆಡಳಿತ ನಡೆದು ದೇಶ ಅನೇಕ ಬಗೆಯ ಸಮಸ್ಯೆಗಳಿಗೆ ತುತ್ತಾಯಿತು. ರಾಜಕೀಯ ವಿಷಚಕ್ರದಲ್ಲಿ ಸಿಲುಕಿ ಒಂದಾಗಿದ್ದ ರಾಜ್ಯವನ್ನು ತೆಲುಗರು ಎರಡು ಹೋಳಾಗಿಸಿಕೊಂಡಿದ್ದಾರೆ. ರಾಜ್ಯಗಳ ವಿಭಜನೆಯ ಪ್ರಕ್ರಿಯೆ ಇಲ್ಲಿಗೆ ನಿಲ್ಲದೆ ಇನ್ನೂ ಮುಂದುವರೆಯುವ ಎಲ್ಲ ಸೂಚನೆಗಳು ಕಂಡು ಬರುತ್ತಿವೆ. ಸುಮಾರು ಅರವತ್ತು ರಾಜ್ಯಗಳಾಗುವಷ್ಟು ಬೇಡಿಕೆಯಿದೆ. ಹೊಸ ರಾಜ್ಯಗಳನ್ನು ಬೇಡುವವರು ಬಹುಮತ ಮತ್ತು ಅಲ್ಪಮತ ಸಿದ್ಧಾಂತವನ್ನು ತಮ್ಮ ಅನುಕೂಲಕ್ಕೆ ಚೆನ್ನಾಗಿ ಬಳಸಿಕೊಳ್ಳುವರು. ರಾಜಕೀಯ ಪಕ್ಷಗಳು ಅಧಿಕಾರದ ಲಾಲಸೆಗಾಗಿ ಬಹುಮತ ಪ್ಡೆಯಲು ಪ್ರಯತ್ನಿಸುವವು. ಆಗ ಸಹಜವಾಗಿಯೇ ಸಮಾಜವು ಒಡೆಯುವುದು. ಪ್ರಜಾಪ್ರಭುತ್ವವು ಪ್ರತಿಯೊಬ್ಬ ಪ್ರಜೆಯಲ್ಲಿರುವ ಒಳ್ಳೆಯ ತನವು ಸಮಾಜಕ್ಕೆ ಅರ್ಪಿತವಾಗಬೇಕೆಂದು ಬಯಸುತ್ತದೆ. ಆದರೆ ಬಹುಮತ ಮತ್ತು ಅಲ್ಪಮತದ ಸಿದ್ಧಾಂತ ಅದಕ್ಕೆ ಅವಕಾಶ ಕೊಡುವುದಿಲ್ಲ. ಆದ್ದರಿಂದಲೇ ಸ್ವತಂತ್ರ ಭಾರತದಲ್ಲಿ ಇದುವರೆಗೆ ಸರ್ವರಿಗೂ ಮಾನ್ಯನಾದ ನಾಯಕ ಬರಲೇ ಇಲ್ಲ. ಎಲ್ಲಿಯವರೆಗೆ ಬಹುಮತ ಮತ್ತು ಅಲ್ಪಮತವೆಂಬ ಸಿದ್ಧಾಂತ ಕೆಲಸ ಮಾಡುತ್ತಿರುತ್ತದೊ ಅಲ್ಲಿಯವರೆಗೆ ಪ್ರಜಾಪ್ರಭುತ್ವ ಪರಿಪಕ್ವವಾಗಲಾರದು. ಪರಿಪಕ್ವತೆಯಿಲ್ಲದ ಪ್ರಜಾಪ್ರಭುತ್ವ ಕ್ರಮೇಣ (Mobarcy) ದುಷ್ಕರ್ಮಿಗಳ ಪ್ರಭುತ್ವವಾಗುವುದು. ಆಗ ಪ್ರಜಾಪ್ರಭುತ್ವ ಅತಿಕೆಟ್ಟ ರಾಜಕೀಯ ವ್ಯವಸ್ಥೆಯೆಂದು ಸಿದ್ಧವಾಗುವುದು. ಇದುವರೆಗೆ ಪ್ರಚಲಿತದಲ್ಲಿರುವ ಸಾಮ್ಯವಾದ, ಸಮಾಜವಾದ, ಬಂಡವಾಳಶಾಹಿವಾದ, ಸರ್ವಾಧಿಕಾರವಾದ, ಕೂಲಿಕಾರರವಾದ, ಮುಂತಾದ ಎಲ್ಲ ವಾದಗಳ ಪ್ರಭುತ್ವಕ್ಕಿಂತ ಪ್ರಜಾಪ್ರಭುತ್ವವೇ ಉತ್ತಮವಾದ ಆಡಳಿತ ಪದ್ಧತಿಯೆಂದು ಭಾವಿಸಲಾಗುತ್ತಿದೆ. ಆದರೆ ಬಹುಮತ ಮತ್ತು ಅಲ್ಪಮತದ ಕಾರಣದಿಂದಾಗಿ ಈ ಮಾತು ಸುಳ್ಳಾಗುತ್ತಿದೆ.

ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯ ಕಡೆಗೆ ಜಗತ್ತಿನ ಮನೋವೃತ್ತಿ ವಾಲುತ್ತಿದೆಯೆಂದು ರಾಜ್ಯಶಾಸ್ತ್ರಜ್ಞ ಚಾರ್ಲಸ್ ಇ ಮೆರಿಯಮ್ ೧೯೩೯ರಲ್ಲಿಯೇ ಹೇಳಿದ್ದರು. ಇದಕ್ಕೆ ಅವರು ಅನೇಕ ಕಾರಣಗಳನ್ನು ಕೊಟ್ಟಿದ್ದರು. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಯ ಸಾಮಾಜಿಕ ಪ್ರತಿಷ್ಠೆಗೆ ಕಡಿಮೆ ಮಹತ್ವವನ್ನು ಕೊಡಲಾಗುತ್ತದೆ ಮತ್ತು ಚುನಾಯಿತ ಸರ್ಕಾರವು ಎಷ್ಟೇ ಕೆಟ್ಟದಾಗಿದ್ದರೂ ದಬ್ಬಾಳಿಕೆಯ ಸರ್ಕಾರಕ್ಕಿಂತ ಉತ್ತಮವಾಗಿರುತ್ತದೆ. ಸಾರ್ವಜನಿಕ ಹಿತಾಸಕ್ತಿಯ ತೀರ್ಮಾನ ಕೈಗೊಳ್ಳಲು ಸಮ್ಮತ ಸಹಾಯ ಮಾಡುತ್ತದೆ. ಇ ಮೆರಿಯಮ್‌ರವರ ಪ್ರಕಾರ ಪ್ರಜಾಪ್ರಭುತ್ವ ಕಾಲಕ್ರಮೇಣ ವಿಶಾಲವಾದ ಸಾಮಾಜಿಕ ನ್ಯಾಯಕ್ಕೆ ದಾರಿಮಾಡಿಕೊಡುತ್ತದೆ. ಬೇರೆಲ್ಲ ರಾಜ್ಯ ಮದ್ಧತಿಗಳಿಗಿಂತ ಪ್ರಜಾಪ್ರಭುತ್ವದಲ್ಲಿ ಸಾಮಾಜಿಕ ಜೀವನದ ಲಾಭಗಳನ್ನು ಜನಸಾಮಾನ್ಯರಿಗೆ ಹಂಚಲಾಗುತ್ತದೆ. ಶಾಂತಿಯುತ ಮತ್ತು ರಚನಾತ್ಮಕ ಸಾಮಾಜಿಕ ಬದಲಾವಣೆ ಪ್ರಜಾಪ್ರಭುತ್ವದಲ್ಲಿ ಸುಲಭವಾಗಿ ತರಬಹುದೆಂಬುದನ್ನು ತೋರಿಸಬಹುದಾಗಿದೆ. ಇದಕ್ಕೆ ಕಾರಣ ಜನಸಾಮಾನ್ಯರು ತಮ್ಮ ಸರ್ಕಾರದ ಪ್ರತಿಸ್ಪಂದನೆಯಲ್ಲಿ ಇಟ್ಟಿರುವ ಅಪಾರವಾದ ನಂಬಿಕೆ.

ಇತರ ರಾಜಕೀಯ ಪದ್ಧತಿಗಳಿಗಿಂತ ಪ್ರಜಾಪ್ರಭುತ್ವವು ಅನೇಕ ಉತ್ತಮ ಗುಣಗಳನ್ನು ಹೊಂದಿದೆ. ಸ್ವಾಭಾವಿಕವಾಗಿ ಜನರು ದೈಹಿಕ ಮತ್ತು ಬೌದ್ಧಿಕ ದತ್ತಿಗಳಲ್ಲಿ ಅಸಮಾನರಾಗಿರುವ ಕಾರಣದಿಂದಾಗಿಯೇ ಪ್ರಜಾಪ್ರಭುತ್ವವು ತುಂಬಾ ಅಗತ್ಯವಾಗಿದೆಯೆಂದು ರಾಜ್ಯಶಾಸ್ತ್ರಜ್ಞ ಜಾನ್ ಡ್ಯೂವಿ ಹೇಳುತ್ತಾರೆ. ಮನುಷ್ಯ ತನ್ನಲ್ಲಿ

ಅಡಗಿರುವ ಸಾಧ್ಯತೆಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಪ್ರತಿಯೊಬ್ಬ ಮನುಷ್ಯನಿಗೆ ಅವಕಾಶವಿಲ್ಲದೆ ಹೋದರೆ ಸಮಾಜವು ಎಂದೂ ತನ್ನ ಸಾಧ್ಯತೆಗಳನ್ನು ಸಾಧಿಸಲಾರದು. ಮಾನವನಲ್ಲಿರುವ ಸಾಮರ್ಥ್ಯಗಳ ಬಗ್ಗೆ ನಂಬಿಕೆ, ಮಾನವನ ಬುದ್ಧಿಮತ್ತೆಯಲ್ಲಿರುವ ನಂಬಿಕೆ ಮತ್ತು ಒಟ್ಟು ಸೇರಿದ ಶಕ್ತಿ ಮತ್ತು ಸಹಕಾರದ ಅನುಭವಗಳೇ ಪ್ರಜಾಪ್ರಭುತ್ವದ ತಳಹದಿಯೆಂದು ಜಾನ್ ಡ್ಯೂವಿ ಹೇಳುತ್ತಾರೆ. ಪ್ರಜಾಪ್ರಭುತ್ವ ಮಾನವನ ಮನೋಶಕ್ತಿಯನ್ನು ಬಿಡುಗಡೆಗೊಳಿಸುವುದರ ಮೂಲಕ ಪ್ರಯೋಗಗಳನ್ನು ನಡೆಸಲು ಅವಕಾಶ ಮಾಡಿಕೊಡುತ್ತದೆ. ಇಂಥ ಸುಸಂಧಿ ಜನರಿಗೆ ದೊರೆಯದೆ ಹೋದರೆ ಬದಲಾಗುತ್ತಿರುವ ಜಗತ್ತಿನೊಂದಿಗೆ ಅವರು ಹೊಂದಿಕೊಳ್ಳಲಾರರು ಎಂಬುದು ಜಾನ್ ಡ್ಯೂವಿಯವರ ಅಭಿಪ್ರಾಯ. ೨೦ನೇ ಶತಮಾನದಲ್ಲಿ ಪ್ರಜಾಪ್ರಭುತ್ವವನ್ನು ಒಂದು ರಾಜಕೀಯ ಸೂತ್ರವೆಂದು ಮತ್ತು ಸರ್ಕಾರ ರಚನೆಯ ಪದ್ಧತಿಯೆಂದು ಮತ್ತು ಒಂದು ಸಮಾಜ ವ್ಯವಸ್ಥೆಯೆಂದು ವ್ಯಾಖ್ಯಾನಿಸಲಾಗಿತ್ತು. ಆದರೆ ಅದು ಒಂದು ಜೀವನ ವಿಧಾನ. ಜೀವನ ವಿಧಾನದಲ್ಲಿ ಜನರು ಸ್ವಯಂ ಇಚ್ಛೆಯಿಂದ ತಮ್ಮ ಬುದ್ಧಿ ಮತ್ತು ಕ್ರಿಯಾಶೀಲತೆಯನ್ನು ಸಮನ್ವಯಗೊಳಿಸುತ್ತಾರೆ. ಅಂಥ ಜೀವನ ಪದ್ಧತಿ ಸಮಸ್ತ ಮಾನವ ಕುಲಕ್ಕೆ ಶ್ರೇಷ್ಠವಾದುದು. ಅಲ್ಲದೆ ಮಾನವನ ಹಾಗೂ ವಿಶ್ವದ ಸಹಜ ಪ್ರಕೃತಿಯ ಅನುಸಾರವಾಗಿದೆ. ಇಂಥ ಶ್ರೇಷ್ಠ ವಿಚಾರಗಳು ಪ್ರಜಾಪ್ರಭುತ್ವದ ಬಗ್ಗೆ ಇರುವಾಗ ನಮ್ಮ ದೇಶದ ಪ್ರಜಾಪ್ರಭುತ್ವ ಆ ನಿಟ್ಟಿನತ್ತ ಹೋಗಲು ಪ್ರಯತ್ನಿಸಬೇಕೇ ಹೊರತು ಯಾವುದೇ ಕಾರಣದಿಂದ ಪ್ರಜಾಪ್ರಭುತ್ವವನ್ನು ವಿಫಲಗೊಳಿಸತಕ್ಕದ್ದಲ್ಲ. ಆದರೆ ಬಹುಮತ ಮತ್ತು ಅಲ್ಪಮತವೆಂಬ ರಾಜಕೀಯ ಸೂತ್ರವು ಪ್ರಜಾಪ್ರಭುತ್ವ ಪರಿಪಕ್ವತೆಯ ಕಡೆಗೆ ಹೋಗದಂತೆ ಕೈಕಾಲುಗಳನ್ನು ಕಟ್ಟಿಹಾಕಿದೆ. ತಿಲೋತ್ತಮೆ ಎಂಬ ಅಪ್ಸರೆಯನ್ನು ಪಡೆಯಲು ಸುಂದ ಮತ್ತು ಉಪಸುಂದ ಎಂಬ ಅಣ್ಣತಮ್ಮಂದಿರು ಹೊಡೆದಾಡಿ ಸತ್ತರು. ಅವರಿಬ್ಬರ ರಾಜ್ಯ ತಿಲೋತ್ತಮೆಗೆ ಲಭಿಸಿತು. ಅದರಂತೆಯೇ ಪ್ರಭುತ್ವವೆಂಬ ತಿಲೋತ್ತಮೆಯನ್ನು ಪಡೆಯಲು ರಾಜಕೀಯ ಪಕ್ಷಗಳು ಪರಸ್ಪರ ಹೊಡೆದಾಡುತ್ತವೆ. ನಮ್ಮ ಪ್ರಜಾಪ್ರಭುತ್ವ ಸುಸ್ಥಿತಿಯಿಂದ ದುಃಸ್ಥಿತಿಗೆ ಹೋಗುತ್ತದೆ. ನಮ್ಮ ಪ್ರಜಾಪ್ರಭುತ್ವ ಜಗತ್ತಿನ ದೇಶಗಳಿಗೆ ಮಾದರಿ ಪ್ರಜಾಪ್ರಭುತ್ವವಾಗಬೇಕಾದರೆ ದೇಶದ ಸ್ವಾತಂತ್ರ್ಯವು ಸ್ವರಾಜ್ಯವಾಗಬೇಕಾದರೆ ಬಹುಮತ ಮತ್ತು ಅಲ್ಪಮತದ ರಾಜಕೀಯ ಚೆಲ್ಲಾಟ ನಿಲುಗಡೆಗೆ ಬರಬೇಕು. ಅದರ ಸ್ಥಾನದಲ್ಲಿ ಸರ್ವಾನುಮತ ಬರುವಂತೆ ಪ್ರಯತ್ನಿಸಬೇಕು. ಸರ್ಕಾರದ ಕಾರ್ಯಕ್ರಮಗಳೆಲ್ಲವೂ ಪ್ರಜೆಗಳ ಹಿತಕ್ಕಾಗಿ ಇರುವುದರಿಂದ ತೀರ್ಮಾನಗಳನ್ನು ಕೈಗೊಳ್ಳಬೇಕಾದ ಎಲ್ಲ ಸ್ಥಳಗಳಲ್ಲಿ ಅಂದರೆ ಗ್ರಾಮಸಭೆಯಿಂದ ಲೋಕಸಭೆವರೆಗೆ ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳುವಂಥ ಶಿಕ್ಷಣ ಜನತೆಗೆ ದೊರೆಯುವಂತೆ ಮಾಡಬೇಕದುದು ಅತ್ಯಗತ್ಯ. ಸರ್ವಾನುಮತದ ಅಗತ್ಯ, ಮಹತ್ವ ಮತ್ತು ಬಲವನ್ನು ದೇಶದ ವಿದ್ಯಾರ್ಥಿಗಳಿಗೆಲ್ಲ ಬೋಧಿಸುವ ಪ್ರಯತ್ನ ನಡೆಯಬೇಕು. ಮುಂಬರುವ ತಲೆಮಾರಿನ ನಾಗರೀಕರು ಬಹುಮತ ಮತ್ತು ಅಲ್ಪಮತವೆಂಬ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳದೆ ಸರ್ವರ ಉದಯವಾಗುವಂಥ ಸರ್ವಾನುಮತದ ಪರಂಪರೆಯನ್ನು ಬೆಳೆಸಿಕೊಳ್ಳುವಂತೆ ಮಾಡಬೇಕಾದುದು ಇಂದಿನ ರಾಜಕೀಯ ಪಕ್ಷಗಳ ಕರ್ತವ್ಯ. ಇಲ್ಲವಾದರೆ ಬಹುಮತ ಅಲ್ಪಮತದ ಚೆಲ್ಲಾಟ ದೇಶದ ಹಿತಕ್ಕೆ ಸಂಕಟವಾಗುವುದರಲ್ಲಿ ಸಂದೇಹವಿಲ್ಲ.

ಪಂಚಾಯತ್ ರಾಜ್ಯ : ಮತ್ಸರದ ರಾಷ್ಟ್ರೀಕರಣ

– *ವಿನೋಬಾ*

ದೇಶದಲ್ಲಿ ಪಂಚಾಯತ್‌ರಾಜ್ಯ ಬಂದಿದೆಯೆಂದೂ ಮತ್ತು ಅದರಿಂದಾಗಿ ಗ್ರಾಮಸ್ವರಾಜ್ಯ ಸ್ಥಾಪಿತವಾಗುವುದೆಂದು ಹೇಳುತ್ತಾರೆ. ಆದರೆ ಇದೊಂದು ಪೂರ್ಣ ಭ್ರಮೆ.

ಪಂಚಾಯತ್‌ರಾಜ್ಯದ ಗುರಿ ಅಧಿಕಾರದ ವಿಕೇಂದ್ರೀಕರಣ. ದಿಲ್ಲಿಯಲ್ಲಿ ಅಧಿಕಾರ ಕೇಂದ್ರಿತವಾಗಿದೆ. ಆದರ ಸ್ವಲ್ಪ ಭಾಗ ಲಕ್ನೋಗೆ ಬಂದಿತು ಮತ್ತು ಇನ್ನು ಸ್ವಲ್ಪ ಭಾಗ ವಾರಣಾಸಿಗೆ ಬಂದಿತು ಮತ್ತು ಇನ್ನೂ ಸ್ವಲ್ಪ ಭಾಗ ಗ್ರಾಮಗಳ ಪಂಚಾಯತಿಗೆ ಬಂದಿತು. ಈ ಪ್ರಕಾರವಾಗಿ ದಿಲ್ಲಿಯಲ್ಲಿದ್ದ ಅಧಿಕಾರದ ಹಂಚಿಕೆಯಾಯಿತು. ಈ ಪದ್ಧತಿ ಮೂಲಕ ಸರ್ಕಾರ ಗ್ರಾಮಗಳವರೆಗೆ ಗ್ರಾಮಸ್ವರಾಜ್ಯವನ್ನು ತಲುಪಿಸುವ ಪ್ರಯತ್ನ ಮಾಡಿತು.

ಆದರೆ ಕಲ್ಲಿನ ಚಿಕ್ಕ ಚಿಕ್ಕ ತುಂಡು ಮಾಡಿದರೂ ಕೂಡ ಅದು ಬೆಣ್ಣೆಯಾಗುವುದಿಲ್ಲ, ಕಲ್ಲಾಗಿಯೇ ಉಳಿಯುವುದಾಗಿದೆ ಎಂಬುದನ್ನು ಎಲ್ಲರೂ ಬಲ್ಲರು. ಅದೇ ಪ್ರಕಾರ ಕೇಂದ್ರಿತವಾಗಿರುವ ಅಧಿಕಾರವನ್ನು ಎಷ್ಟೇ ತುಂಡುಮಾಡಿದರೂ ಅದು ಕೇಂದ್ರಿತ ಅಧಿಕಾರವಾಗಿಯೇ ಉಳಿಯುವುದು. ಇದನ್ನು ನಾನು 'ಮತ್ಸರದ ರಾಷ್ಟ್ರೀಕರಣ' ಎಂದಿದ್ದೇನೆ.

ಹಿಂದಿನ ಕಾಲದಲ್ಲಿ ಈ ಮತ್ಸರ ಸರ್ದಾರರ ಮಧ್ಯದಲ್ಲಿ ಇರುತ್ತಿತ್ತು. ಇಂದು ದಿಲ್ಲಿಯಿಂದ ಹಿಡಿದು ಹಳ್ಳಿಯವರೆಗೆ ಎಲ್ಲರಿಗೂ ಮತ್ಸರ ಮಾಡುವ ಹಕ್ಕು ದೊರೆತಿದೆ. ಇಂಥ ಸ್ಥಿತಿಯಲ್ಲಿ ಕೇಂದ್ರದ ವತಿಯಿಂದ ರಚಿತವಾಗುವ ಗ್ರಾಮಪಂಚಾಯತಿಗಳು ಮಾತ್ಸರ್ಯದ ಪ್ರತಿನಿಧಿಯಾಗಿ ಬರುತ್ತವೆಯೆ ಹೊರತು ಸೇವೆಯ ಪ್ರತಿನಿಧಿಯಾಗಲ್ಲ. ಈ ಸಂಗತಿ ನಮ್ಮ ಗಮನಕ್ಕೆ ಬರಬೇಕು.

ಎಲ್ಲಿಯವರೆಗೆ ಪ್ರೇಮದ ಆಧಾರದ ಮೇಲೆ ಗ್ರಾಮಸಭೆ ರಚನೆಯಾಗುವುದಿಲ್ಲವೋ ಅಲ್ಲಿಯವರೆಗೆ ವಿಕೇಂದ್ರೀಕೃತ ಅಹಿಂಸಕ ವ್ಯವಸ್ಥೆಯನ್ನು ಸ್ಥಾಪಿಸುವ ಅಪೇಕ್ಷೆ ಪೂರ್ಣವಾಗುವುದಿಲ್ಲ. ಅದನ್ನು ನಾನು 'ವಿಕೇಂದ್ರಿತ ಶೋಷಣೆ–ಯೋಜನೆ' ಎಂದು ಕರೆದಿದ್ದೇನೆ. ಒಂದು ಕೇಂದ್ರದಿಂದ ಶೋಷಣೆ ಮಾಡಬಯಸಿದರೆ ಅದನ್ನು ಪೂರ್ಣ ಸಾಮರ್ಥ್ಯದಿಂದ ಮಾಡಲಾಗುವುದಿಲ್ಲ. ಸುಸಂಬದ್ಧವಾದ ವಿಕೇಂದ್ರಿತ ಶೋಷಣೆಯ ಉದ್ದೇಶದಿಂದ ಪಂಚಾಯತ್‌ರಾಜ್ಯದ ಯೋಜನೆ ತಯಾರಾಯಿತು. ಆದರೆ ಇಡೀ ಸಮಾಜದ ಶರೀರ ಜರ್ಝರಿತವಾಗುವುದು, ಈ ಪ್ರಕಾರದ ಇಚ್ಛೆಯೇನಿಲ್ಲ. ಆದರೆ

ಆಗುತ್ತಿರುವ ಪರಿಣಾಮ ವಿಪರೀತವಾಗಿದೆ ಮತ್ತು ಭಾರತದ ಶರೀರ ನಖಶಿಖಾಂತ ದೂಷಿತವಾಗುತ್ತಿದೆ.

ಇಂದಿನ ಗ್ರಾಮಪಂಚಾಯತಿಗಳಲ್ಲಿ ಅನೇಕ ಚಿಕ್ಕ ಚಿಕ್ಕ ಹಳ್ಳಿಗಳು ಸೇರುತ್ತವೆ. ಅದು ಕಾನೂನಿನ ಆಧಾರದ ಮೇಲೆ ರಚಿತವಾಗಿದೆಯೇ ಹೊರತು ಪ್ರೇಮದ ಆಧಾರದ ಮೇಲಲ್ಲ. ಆದ್ದರಿಂದ ಪ್ರತಿಯೊಂದು ಗ್ರಾಮದ ಜನ ತಮ್ಮ ತಮ್ಮ ದೃಷ್ಟಿಯಲ್ಲಿ ಯೋಚನೆ ಮಾಡುವರು. ಈ ರೀತಿ ಗ್ರಾಮಪಂಚಾಯತಿ ಜಗಳದ ಸ್ಥಾನವಾಗುತ್ತದೆ. ಇದನ್ನು ನಾನು ಕಲ್ಪನೆಯಿಂದ ಹೇಳುತ್ತಿಲ್ಲ. ಇಡೀ ಭಾರತದ ದರ್ಶನ ನನಗಿದೆ. ಪಂಚಾಯತಿ ಕೇವಲ ಕಾನೂನಿನ ಮೂಲಕ ರಚಿತವಾಗಿದೆ. ಅವುಗಳಲ್ಲಿ ಬಹುಮತದಿಂದ ಎಲ್ಲ ಕೆಲಸವಾಗುತ್ತದೆ. ಇಂಥ ಸ್ಥಿತಿಯಲ್ಲಿ ಎಲ್ಲರೂ ತಮ್ಮ ಕಡೆಗೆ ಬಹುಮತ ಇರಲೆಂದು ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಪ್ರತಿಯೊಂದು ಹಳ್ಳಿಯಲ್ಲಿ ಜಗಳಗಳು ಹುಟ್ಟುತ್ತವೆ.

ಇತ್ತೀಚಿಗೆ ರಚಿತವಾಗಿರುವ ಗ್ರಾಮಪಂಚಾಯತಿಗಳಲ್ಲಿ ಮೂರು ದೋಷಗಳನ್ನು ಕಾಣುತ್ತೇವೆ. ಮೊದಲನೆ ದೋಷ ಬಹುಮತದ ರಾಜ್ಯ. ಈ ಕಾರಣದಿಂದ ಪಕ್ಷಗಳು ನುಸಳುತ್ತವೆ. ಎರಡನೆ ದೋಷ ಒಂದು ಹಳ್ಳಿಗೆ ತನ್ನದೇ ಆದ ವಿಶಿಷ್ಟ ವ್ಯಕ್ತಿತ್ವ (ಇಂಡಿವಿಜುಯಲ್ ಪರ್ಸನಾಲಿಟಿ) ಇರುತ್ತದೆ. ಅದರ ಗಣನೆ ಇರುವುದೇ ಇಲ್ಲ. ಮೂರನೆ ದೋಷ ಅವು ಸೇವೆಯಿಂದ ರಚಿತವಾಗಿರದೆ ಕಾನೂನಿನಿಂದ ರಚಿತವಾಗಿದೆ. ಇವುಗಳನ್ನು ನಾನು 'ತ್ರಿದೋಷ' ಎಂದು ಕರೆದಿದ್ದೇನೆ. ತ್ರಿದೋಷದ ಪರಿಣಾಮವಾಗಿ ಸನ್ನಿಪಾತವಾಗುತ್ತದೆ, ಇಂದಿನ ಗ್ರಾಮಪಂಚಾಯಿತಿಗಳಿಗೆ ಸನ್ನಿಪಾತವಾಗಿದೆ.

ಎಲ್ಲಿ ಅಧಿಕಾರ ಕಡಿಮೆಯಿರುತ್ತದೊ ಅಲ್ಲಿ ಬಿಕ್ಕಟ್ಟು ಮತ್ತು ಎಳೆದಾಟ ಉಂಟಾಗುತ್ತದೆ. ಪೂರ್ಣ ಅಧಿಕಾರವಂತೂ ಪಂಚಾಯತಿಗಿಲ್ಲ. ಸ್ವಲ್ಪೇ ಅಧಿಕಾರವಿದೆ. ಸ್ವಲ್ಪವೇ ಅಧಿಕಾರವಿರುವೆಡೆ ಜವಾಬ್ದಾರಿ ಇರುವುದಿಲ್ಲ! ಪೂರ್ಣ ಅಧಿಕಾರದ ದುರುಪಯೋಗವಾಗುವ ಸಂಭವ ಕಡಿಮೆಯಿರುತ್ತದೆ. ಅರ್ಧ ಅಧಿಕಾರದ ದುರುಪಯೋಗವಾಗುವ ಸಂಭವ ಹೆಚ್ಚಿರುತ್ತದೆ.

ಅಧಿಕಾರದ ವಿತರಣೆ ಉತ್ತರೋತ್ತರ ಜನತೆಯಲ್ಲಿ ಆಗಬೇಕೆಂದು ನಾನು ಬಯಸುತ್ತೇನೆ. ಪಂಚಾಯತಿಗಳ ಕೈಗೆ ಅಧಿಕಾರ ಕೊಡಬಯಸುತ್ತೇವೆಂದು ಸರ್ಕಾರ ಹೇಳುತ್ತದೆ. ಮೇಲಿನಿಂದ ಅಧಿಕಾರ ಕೊಡಲು ನೀವು ಯಾರೆಂದು ನಾನು ಕೇಳುತ್ತೇನೆ. ಜನತೆ ಸ್ವತಃ ಅಧಿಕಾರ ಬಯಸಿದರೆ ತೆಗೆದುಕೊಳ್ಳಲಿ. ಜನರು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲೆಂಬುದು ನಮ್ಮ ಬೇಡಿಕೆ.

ಆದ್ದರಿಂದ ಪ್ರೇಮದಿಂದ ಗ್ರಾಮಸಭೆಯಾಗಬೇಕು ಮತ್ತು ಅದರಿಂದ ಗ್ರಾಮಗಳ ಉತ್ಥಾನವಾಗಬೇಕೆಂದು ನಾನು ಸೂಚಿಸುತ್ತಿದ್ದೇನೆ. ಇದರಲ್ಲಿ ಸರ್ಕಾರದ ನೆರವು ತೆಗೆದುಕೊಳ್ಳುವುದಕ್ಕೆ ಅಡ್ಡಿಯಿಲ್ಲ. ಸರ್ಕಾರದ ನೆರವು ತೆಗೆದುಕೊಳ್ಳುವಂತೆ ಬೇರೆಯವರ ನೆರವನ್ನೂ ಕೂಡ ತೆಗೆದುಕೊಳ್ಳಬಹುದು. ಆದರೆ ಇದೆಲ್ಲವೂ ಕೆಳಗಿನ

ಹಂತದಲ್ಲಿ, ಗ್ರಾಮದ ಆಧಾರದ ಮೇಲೆ ಮತ್ತು ಪ್ರೇಮಪೂರ್ವಕ ಆಗಬೇಕು.

ನಾನು ಎರಡು ಶಬ್ದಗಳನ್ನು ರಚಿಸಿದ್ದೇನೆ. ಒಂದು – 'ಅಧಿಕಾರದ ಸಂಸ್ಥೆ', ಎರಡನೆಯದು 'ಸೇವಾ ಸಂಸ್ಥೆ'. ನನ್ನ ಹೇಳಿಕೆ ಏನೆಂದರೆ ಅಧಿಕಾರದ ಸಂಸ್ಥೆಗಳು ಸೇವಾ ಸಂಸ್ಥೆಗಳಾಗಿ ಮಾರ್ಪಾಡಾಗಬೇಕು. ಅಧಿಕಾರ ಉಳ್ಳವರು ಕೂಡ ಸೇವೆಯ ಹೆಸರು ಹೇಳುತ್ತಾರಾದರೂ ಅವರ ಸೇವೆಯ ಮೇಲೆ ಅಧಿಕಾರದ ಬಣ್ಣವಿದೆ. ಆದ್ದರಿಂದ ಅವರ ಮೂಲಕ ಆಗುವ ಸೇವೆಯಿಂದ ಲೋಕಶಕ್ತಿ ಹೆಚ್ಚಾಗುವುದಿಲ್ಲ. ಇಂದು ಇಡೀ ಲೋಕಜೀವನ ಮೇಲಿನ ಕೇಂದ್ರದಿಂದ ನಿಯಂತ್ರಿತವಾಗಿದೆ. ಆದ್ದರಿಂದ ಎಲ್ಲ ಜನ ಅಲ್ಲಿಯ ಅಧಿಕಾರವನ್ನು ಕೈಗೆ ತೆಗೆದುಕೊಳ್ಳಲು ಬಯಸುತ್ತಾರೆ. ಅಲ್ಲಿ ರಾಜಕೀಯ ಪಕ್ಷಗಳಿವೆ. ಅವು ಜಗಳದ ಅಂಕಣವಾಗಿಬಿಡುತ್ತವೆ. ಇಂದು ಅದೇ ಅಧಿಕಾರದ ಸ್ಥಾನವನ್ನು ಪಂಚಾಯತ್‌ರಾಜ್ಯದ ರೂಪದಲ್ಲಿ ಅಧಿಕಾರ ಕೆಳಗಿನವರೆಗೆ ವಿಕೇಂದ್ರಿತ ಮಾಡಲಾಗಿದೆ.

ಹಳ್ಳಿಯಲ್ಲಿ ಶೋಷಣೆ ಬಹಳವಾಗಿ ನಡೆಯುತ್ತದೆ. ಅದರಿಂದಾಗಿ ಅದರ ಶಕ್ತಿ ಕ್ಷೀಣವಾಗುತ್ತದೆ. ಹಳ್ಳಿಯಲ್ಲಿ ಶ್ರಮಶಕ್ತಿ ಮತ್ತು ಕುಶಲತೆ ಅಥವಾ ಜ್ಞಾನಶಕ್ತಿಯೆಂಬ ಎರಡು ಶಕ್ತಿಗಳಿರುತ್ತವೆ. ಶೋಷಣೆಯ ಕಾರಣದಿಂದಾಗಿ ಇವೆರಡು ಹೋಗಿಬಿಡುತ್ತವೆ.

ಹಳ್ಳಿಯ ಕೂಲಿಕಾರರಿಗೆ ಮತ್ತು ಭೂಹೀನರಿಗೆ ಹಳ್ಳಿಯಲ್ಲಿ ಕೆಲಸ ಸಿಗುವುದಿಲ್ಲ. ಆದ್ದರಿಂದ ಉದ್ಯೋಗ ಹುಡುಕಿಕೊಂಡು ನಗರಕ್ಕೆ ಹೋಗುತ್ತಾರೆ. ಇದೊಂದು ದೊಡ್ಡ ಸಮಸ್ಯೆ. ಸಾವಿರಾರು ಜನರು ನಗರದ ಮೇಲೆ ಅಕ್ರಮಣ ಮಾಡುತ್ತಾರೆ. ನಂತರ ಅಲ್ಲಿ ಕೂಡ ವಿಶೇಷ ಅನುಕೂಲತೆಗಳು ಸಿಗುತ್ತವೆಂದು ಹೇಳಲಾಗುವುದಿಲ್ಲ. ಒಂದು ವೇಳೆ ಹಳ್ಳಿಯಲ್ಲಿ ಆನಂದಮಯ, ಸುಖಮಯ ಜೀವನವಿದ್ದರೆ ಜನರು ನಗರಗಳಿಗೆ ಎಂದೂ ಹೋಗುವುದಿಲ್ಲ. ಈ ರೀತಿ ಶ್ರಮ ಮಾಡುವವರು ಹೊರಗೆ ಹೋದರೆ ಹಳ್ಳಿಯ ಶಕ್ತಿ ಕ್ಷೀಣಿಸುತ್ತದೆ.

ಓದು ಬರಹ ಬಲ್ಲ ಜನರೂ ಕೂಡ ಹಳ್ಳಿ ಬಿಟ್ಟು ನಗರಕ್ಕೆ ಹೋಗಬಯಸುತ್ತಾರೆ. ಹಳ್ಳಿಯಲ್ಲಿ ಅವರ ಮನಸ್ಸು ಸಂತೋಷವಾಗಿ ಇರುವುದಿಲ್ಲ. ತಿಳುವಳಿಕೆಯುಳ್ಳ ಜನ ಹಳ್ಳಿ ಬಿಟ್ಟು ನಗರಕ್ಕೆ ಹೋದರೆ ಜ್ಞಾನಶಕ್ತಿ ಮತ್ತು ಶ್ರಮಶಕ್ತಿಯೆಂಬ ಎರಡು ಬಹು ದೊಡ್ಡ ಶಕ್ತಿಗಳು ಹಳ್ಳಿಯ ಹೊರಗೆ ಹೋದರೆ ಹಳ್ಳಿ ಸತತವಾಗಿ ಕ್ಷಯವಾಗುತ್ತದೆ. ಫಲಸ್ವರೂಪವಾಗಿ ಹಳ್ಳಿಯೂ ಸುಖದಲ್ಲಿ ಇರುವುದಿಲ್ಲ ನಗರವೂ ಸುಖದಲ್ಲಿ ಇರುವುದಿಲ್ಲ ಮತ್ತು ದೇಶವೂ ಸುಖದಲ್ಲಿ ಇರುವುದಿಲ್ಲ. ಏಕೆಂದರೆ ದೇಶದ ಕಟ್ಟಡ ಹಳ್ಳಿಗಳ ಅಡಿಪಾಯದ ಮೇಲೆಯೇ ನಿಂತಿದೆ!

ಹಳ್ಳಿಯಲ್ಲಿ ಮೂರನೆಯ ಶಕ್ತಿ ಕೂಡ ಇದೆ. ಅದನ್ನು ನಾವು ಸಂಪಾದಿಸಿಕೊಂಡರೆ ಯಾವ ಎರಡು ಶಕ್ತಿಗಳು ಹೊರಗೆ ಹೋಗುತ್ತಿವೆಯೋ ಅವುಗಳನ್ನು ತಡೆಹಿಡಿದು ಹಳ್ಳಿಯಲ್ಲಿಯೇ ಇಟ್ಟುಕೊಳ್ಳಬಹುದು. ಅದು ಪ್ರೇಮದ

ಶಕ್ತಿ. ಹಳ್ಳಿಯಲ್ಲಿ ಯಾರದೋ ಮನೆಯಲ್ಲಿ ಜನ್ಮವಾದರೆ, ಮರಣವಾದರೆ, ಕಾಯಿಲೆಬಿದ್ದರೆ ಕೂಡಲೆ ಇಡೀ ಹಳ್ಳಿಗೆ ಗೊತ್ತಾಗುವುದು. ಈ ರೀತಿ ಸುಖ-ದುಃಖದಲ್ಲಿ ಎಲ್ಲ ಜನರೂ ಭಾಗಿಯಾಗುವರು. ಇಂದು ಈ ಪ್ರಕ್ರಿಯೆ ಖಂಡಿತವಾಗಿಯೂ ಕಡಿಮೆಯಾಗಿದೆ. ಆದರೆ ಅಲ್ಲಲ್ಲಿ ಸ್ವಲ್ಪ ಅಂಶವಾದರೂ ಇದೆ. ಈ ಪ್ರೇಮ ನಗರದಲ್ಲಿ ಬಹಳ ಕಡಿಮೆಯಿದೆ. ನಗರದ ಮುಖ್ಯ ಆಧಾರ ಲೋಭ ಮತ್ತು ಹಣವಾಗಿದ್ದರೆ, ಹಳ್ಳಿಯ ಮುಖ್ಯ ಆಧಾರ ಪ್ರೇಮ. ಈ ಪೋಮವನ್ನು ಪಡೆದುಕೊಂಡರೆ ಮತ್ತು ಅದರ ಆಧಾರದ ಮೇಲೆ ಹಳ್ಳಿಯ ವ್ಯವಸ್ಥೆ ಮಾಡಿದರೆ ಶ್ರಮಶಕ್ತಿ ಮತ್ತು ಜ್ಞಾನಶಕ್ತಿ ಎರಡೂ ಹಳ್ಳಿಯಲ್ಲಿ ಉಳಿಯುವವು.

ಈ ಕೈ ನಮ್ಮ ಶರೀರದ ಒಂದು ಭಾಗ. ಈ ಕೈ ಇಡಿ ಶರೀರಕ್ಕೆ ತಿನಿಸುತ್ತದೆ. ಆಗ ಇಡೀ ಶರೀರಕ್ಕೆ ಪೋಷಣೆ ಸಿಗುತ್ತದೆ. ಒಂದು ವೇಳೆ ಈ ಕೈಗಳು ಇಷ್ಟೊಂದು ಬುದ್ಧಿ ಖರ್ಚು ಮಾಡದೆ ನಾವು ಏಕಾಂಗಿಯಾಗಿ ಗಳಿಸಿದ್ದೇವೆ, ಆದ್ದರಿಂದ ನಮ್ಮ ಕೈಯಲ್ಲಿಯೇ ಇಟ್ಟುಕೊಳ್ಳುತ್ತೇವೆ ಎಂದು ಹೇಳಿದರೆ ಶರೀರಕ್ಕೆ ಊಟ ಸಿಗುವುದಿಲ್ಲ.ತತ್ಪರಿಣಾಮವಾಗಿ ಶರೀರ ದಣಿಯುವುದು ಮತ್ತು ಕೈಗಳಿಗೂ ಕೂಡ ಪೋಷಣೆ ಸಿಗುವುದಿಲ್ಲ. ಆದರೆ ಗಳಿಕೆ ನನ್ನದಲ್ಲ ಎಂದು ಕೈಗೆ ಗೊತ್ತಿದೆ. ನಾವು ಶರೀರದ ಒಂದು ಭಾಗವಾದ್ದರಿಂದ ಗಳಿಕೆಯನ್ನು ಇಡೀ ದೇಹಕ್ಕೆ ಕೊಟ್ಟರೆ ಶರೀರ ಗಟ್ಟಿಮುಟ್ಟಾಗುತ್ತದೆ ಮತ್ತು ನಾನು ಕೂಡ ಗಟ್ಟಿಯಾಗುತ್ತೇನೆ ಎಂದು ಹೇಳುತ್ತದೆ. ಒಂದು ವೇಳೆ ಕೈಯನ್ನು ಶರೀರದಿಂದ ಬೇರೆ ಮಾಡಿದರೆ ಕತ್ತರಿಸಿ ಹಾಕಿದರೆ ಅದು ಏನೂ ಕೆಲಸ ಮಾಡಲಾರದು. ಶರೀರದ ಒಂದು ಭಾಗವಾಗಿರುವ ಕಾರಣದಿಂದ ಅದರಲ್ಲಿ ಶಕ್ತಿಯಿದೆ. ಆದ್ದರಿಂದ ಶರೀರದ ಸೇವೆ ಮಾಡಬೇಕಾದುದು ಕೈಗಳ ಕೆಲಸ ಮತ್ತು ಅದರಿಂದಾಗಿ ಅದಕ್ಕೆ ಪೋಷಣೆ ಸಿಗುವುದು.

ಈ ರೀತಿಯಾಗಿ ನಾವು ನಮ್ಮ ಹಳ್ಳಿಯ ಒಂದು ಭಾಗವೆಂದು ಗುರುತಿಸಿಕೊಳ್ಳಬೇಕು. ಹಳ್ಳಿಯಲ್ಲಿ ಯಾರು ದುಃಖದಲ್ಲಿ ಬಡತನದಲ್ಲಿ ಮತ್ತು ಸಂಕಟದಲ್ಲಿದ್ದಾರೋ ಅಂಥವರ ಸೇವೆ ಮಾಡಿಯೇ ನಾವು ಊಟ ಮಾಡಬೇಕು. ಭೂಮಿ ಹೀನರು ಕೂಡ ತಾವು ಹಳ್ಳಿಯ ಒಂದು ಭಾಗವಾಗಿದ್ದೇವೆಂದು ತಿಳಿಯಬೇಕು. ಹಳ್ಳಿಯ ಸೇವೆಯನ್ನು ಅತ್ಯಂತ ಪ್ರಾಮಾಣಿಕತೆಯಿಂದ ಮಾಡಬೇಕು, ಕೆಲಸದಲ್ಲಿ ಕಳ್ಳತನ ಮಡಕೂಡದು. ಇಂದು ಕೂಲಿಯವ ಮತ್ತು ಯಜಮಾನ ಇಬ್ಬರೂ ಗ್ರಾಮಸೇವೆಯ ವಿಚಾರ ತಿಳಿದಿಲ್ಲ. ಪ್ರತಿಯೊಬ್ಬನೂ ಶ್ರೀಮಂತ ಹಾಗೂ ಯಜಮಾನನಾಗಲು ಬಯಸುತ್ತಾನೆ. ಆದ್ದರಿಂದ ನಮ್ಮ ಮನಸ್ಸಿನಲ್ಲಿ ಹಳ್ಳಿಯ ಜನ ಸುಖದಿಂದಿಲ್ಲ. ಇದನ್ನು ತಿಳಿಸಬೇಕಾದುದು ನಮ್ಮ ಕೆಲಸ. ಜನ ಇಷ್ಟೊಂದು ತಿಳಿದುಕೊಂಡರೆ ಅವರ ಶಕ್ತಿ ಬಹಳಷ್ಟು ವೃದ್ಧಿಸುವುದು.

* * *

ಭ್ರಷ್ಟಾಚಾರದ ವಿರುದ್ಧ ಸಮರ ಏಕೆ ಹೇಗೆ

– ಸಂಗ್ರಹ : ಡಾ.ಲೀಲಾ ಅಪ್ಪಾಜಿ

ಇಂದು ನಾನು ಈ ಕೆಲವು ವಿಚಾರಗಳನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ಈ ವಿಚಾರದಲ್ಲಿ ನಿಮ್ಮೊಡನೆ ಸಂವಾದ ನಡೆಸಲು ಸಿದ್ಧನಿದ್ದೇನೆ. ದಯವಿಟ್ಟು ಪ್ರಶ್ನೆಯನ್ನು ಮುಕ್ತವಾಗಿ ಕೇಳಿ. ವೈಯಕ್ತಿಕ ವಿಚಾರದ ಬಗ್ಗೆ, ಯಾವುದೇ ವಿಚಾರದ ಬಗ್ಗೆಯಾದರೂ ಕೇಳಿ' ಎಂದು ವಿದ್ಯಾರ್ಥಿಗಳಿಗೆ, ಅಧ್ಯಾಪಕರು ಹಾಗೂ ಅಧ್ಯಾಪಕೇತರರಿಗೆ ***ಸಂತೋಷ ಹೆಗಡೆ*** ಕರೆ ನೀಡಿದರು. ಸುಮಾರು ೬೦ಕ್ಕೂ ಹೆಚ್ಚು ಪ್ರಶ್ನೆಗಳಿಗೆ ಸಾವಧಾನದಿಂದ ಉತ್ತರಿಸಿದರು.

೧. ಭ್ರಷ್ಟಾಚಾರ, ಅನ್ಯಾಯ ಮುಂತಾದವನ್ನು ತಡೆಗಟ್ಟಲು ನಾವು ಏನು ಮಾಡಬೇಕು?

ಮೊಟ್ಟ ಮೊದಲಿಗೆ ನಿಮ್ಮ ವೈಯಕ್ತಿಕ ಭಾವನೆಗಳನ್ನು ಸಮಾಜದ ಜೊತೆಗೆ ಸರಿಯಾಗಿ ತೆಗೆದುಕೊಂಡು ಹೋಗಬೇಕು. ಎಷ್ಟೇ ಕಷ್ಟವಿದ್ದರೂ ತನ್ನನ್ನು ತಾನು ಪ್ರಾಮಾಣಿಕವಾಗಿರುವಂತೆ ನೋಡಿಕೊಳ್ಳಬೇಕು. ಎರಡನೆಯದಾಗಿ ಇಂದಿನ ಪೋಷಕರು ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ಕೊಡಿಸುವ ಬಗ್ಗೆ ಚಿಂತನೆ ಮಾಡಬೇಕಿದೆ. ಇಂದು ಬಹಳಷ್ಟು ಕುಟುಂಬಗಳ ಗಂಡ–ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುತ್ತಾರೆ. ಮಕ್ಕಳಿಗೆ ಬುದ್ಧಿವಾದ ಹೇಳಲು ಸಮಯವಿಲ್ಲ. ಆದ್ದರಿಂದ ಮಕ್ಕಳು ಮೌಲ್ಯಗಳನ್ನು ಕಲಿಯಲಾಗುತ್ತಿಲ್ಲ. ಟಿ.ವಿ, ಸ್ನೇಹಿತರು, ಪಾಠದ ಮುಖಾಂತರ ಕಲಿಯಬೇಕು. ಆದರೆ ಅಲ್ಲಿ ಸರಿಯಾದ ವಿದ್ಯೆ ಬರಲ್ಲ. ಮೌಲ್ಯದ ವಿಚಾರಗಳನ್ನು ಪೋಷಕರು ಹೇಳಿಕೊಡುವುದು ಮುಖ್ಯ. ನಾನು ಕಲಿಯುತ್ತಿದ್ದಾಗ ಮಾರಲ್‌ಸೈನ್ಸ್, ಸಿವಿಕ್ಸ್ ಪಠ್ಯವಾಗಿತ್ತು. ಅಂತಹ ಎರಡು ವಿಷಯಗಳನ್ನು ಎಲ್ಲಾ ಕ್ಲಾಸ್‌ಗಳಲ್ಲಿಯೂ ಹೇಳಿಕೊಡಬೇಕು. ನಮ್ಮ ವೃತ್ತಿಯ ವಿಷಯ ಬಂದಾಗ, ಇವತ್ತಿನಮಟ್ಟಿಗೆ ಎಲ್ಲರಿಗೂ ಕೈತುಂಬಾ ಸಂಬಳ ಬರುವುದರಿಂದ ಅದರಲ್ಲಿ ಜೀವನವನ್ನು ನಡೆಸಲು ಸಾಧ್ಯ. ನೀವು ನಿಮ್ಮ ಬದಲಾವಣೆಯಿಂದ ಸಾಮಾಜಿಕ ಬದಲಾವಣೆಯನ್ನು ತರುತ್ತೀರಿ.

೨. ಭ್ರಷ್ಟಾಚಾರದಲ್ಲಿ ರಾಜಕಾರಣಿಗಳು ತುಂಬಾ ಮುಂದೆ ಇದ್ದಾರೆನ್ನುವುದನ್ನು ಒಪ್ಪುತ್ತೀರಾ? ಅವರು ತಮಗೋಸ್ಕರ ಮಾಡಿ ಕೊಳ್ಳುತ್ತಿದ್ದಾರಾ ಅಥವಾ ಬಡವರಿಗೋಸ್ಕರ, ಜನರಿಗೋಸ್ಕರ ಈ ಕೆಲಸ ಮಾಡುತ್ತಿದ್ದಾರಾ?

ರಾಜಕಾರಣಿಗಳಲ್ಲಿ ಪ್ರಾಮಾಣಿಕರ ಸಂಖ್ಯೆ ಕಡಿಮೆ, ಹೆಚ್ಚು ಜನ ಭ್ರಷ್ಟರೆನ್ನುವುದನ್ನು ನಾನು ಒಪ್ಪುತ್ತೇನೆ. ರಾಜಕೀಯದಲ್ಲಿ ಇರುವವರು, ಅಧಿಕಾರದಲ್ಲಿ ಇರುವವರು ಬಹಳಷ್ಟು ಮಂದಿ ತಮ್ಮ ಸ್ವಾರ್ಥಕ್ಕೆ ಅಧಿಕಾರ ಬಳಸುತ್ತಿದ್ದಾರೆ. ಅದರಿಂದ ಬಂದ ಆದಾಯವೂ ಅವರಿಗಾಗಿ ಮಾತ್ರವೇ ಆಗಿದೆ. ಇದನ್ನು ತಡೆಗಟ್ಟಲು ಸಾಧ್ಯವಿದೆ. ನೀವು ಪ್ರಶ್ನೆ ಮಾಡಬೇಕಿದೆ. ನಿಮಗೆ ಅಂಗರಕ್ಷಕರು ಯಾಕೆ. ನಾಲ್ಕೈದು ಪೈಲಟ್ ಗಾಡಿ, ಹಿಂದೆ ಮುಂದೆ ೧೦–೧೫ ಗಾಡಿಗಳು ಯಾಕೆ ಬೇಕು? ಜನರಿಂದ ದೂರವಿರಿಸುವ ಯಾವ ಆತಂಕ ನಿಮಗೆ ಎದುರಾಗಿದೆ? ಪ್ರಜಾಪ್ರಭುತ್ವದಲ್ಲಿ ಜನರಿಗೆ

ಒಂದು ರೀತಿಯ ರಕ್ಷಣೆ, ಪ್ರಭುಗಳಿಗೇ ಒಂದು ರೀತಿಯ ರಕ್ಷಣೆ ಅಗತ್ಯವೇ ಎಂದು ಪ್ರಶ್ನಿಸಬೇಕಿದೆ.

೩. ಸರ್ಕಾರಿ ಕಛೇರಿಗಳಲ್ಲಿ, ಆಸ್ಪತ್ರೆ ಮುಂತಾದ ಕಡೆ ಇಂದಿಗೂ ಭ್ರಷ್ಟಾಚಾರವಿದೆ. ಇದನ್ನು ತಡೆಯುವುದು ಹೇಗೆ?

ನೀವು ಈ ತನಕ ಇದನ್ನು ತಡೆಯಲು ಏನು ಪ್ರಯತ್ನ ಮಾಡಿದ್ದೀರಿ? ನಿಮ್ಮೊಬ್ಬರಿಂದ ಆಗುವುದಿಲ್ಲ ಎನ್ನುವ ಮಾತು ಸತ್ಯವಲ್ಲ. ಚೀನೀ ಗಾದೆ ಹೇಳುತ್ತದೆ: ಸಾವಿರ ಮೈಲಿಯ ಪ್ರಯಾಣ ಒಂದು ಹೆಜ್ಜೆಯಿಂದ ಎಂದು. ಅದೇ ರೀತಿಯಲ್ಲಿ ಪ್ರಜಾಪ್ರಭುತ್ವದಲ್ಲಿ ಒಬ್ಬೊಬ್ಬರೂ ಮುಂದೆ ಬರಬೇಕು. ನನ್ನಿಂದ ಆಗಲ್ಲವೆಂದು ಕುಳಿತರೆ ತಡೆಗಟ್ಟಲು ಸಾಧ್ಯವಿಲ್ಲ.

೪. ಭ್ರಷ್ಟಾಚಾರವೆಂದು ಗೊತ್ತಿದ್ದರೂ ತಮಗೇನಾದರಾದೀತು ಭಯದಿಂದ ಯಾರೂ ಮುಂದೆ ಬರಲ್ಲ. ಆಗ ಏನು ಮಾಡುವುದು?

ಅದು ನನಗೂ ಗೊತ್ತಿದೆ. ಆದ್ದರಿಂದ ನಾನೂ ೪೯೯ನೇ ಶಾಲೆಗೆ, ಕಾಲೇಜಿಗೆ ಭೇಟಿ ಕೊಟ್ಟು ಚಿಂತನೆ ಮಾಡಲು ಹೇಳುತ್ತಿದ್ದೇನೆ, ಆ ಧೈರ್ಯ ನಿಮಗೆ ಬರಬಹುದು ಎಂಬ ಅನಿಸಿಕೆಯಲ್ಲಿ ಬಂದಿದ್ದೇನೆ.

೫. ಲೋಕಾಯುಕ್ತರಾಗಿ ಐದು ವರ್ಷ ಕಳೆದರಲ್ಲ, ಆಗ ನಿಮಗೆ ಹೇಗೆ ಒತ್ತಡ ತಂದಿದ್ದರು? ಅದನ್ನು ತಾವು ಹೇಗೆ ನಿಭಾಯಿಸಿದಿರಿ?

ಒತ್ತಡಗಳಿದ್ದವು. ಆದರೆ ನಾನು ಒತ್ತಡಕ್ಕೆ ಮಣಿಯುವಂತಹ ವ್ಯಕ್ತಿಯಲ್ಲ. ಅದರ ಬಗ್ಗೆ ಚಿಂತೆಯೂ ಇರಲಿಲ್ಲ.

೬. ನೀವು ಲೋಕಾಯುಕ್ತರಾಗಿ ಭ್ರಷ್ಟರ ಮನೆಗೆ ದಾಳಿ ಮಾಡಿದಾಗ ವಶ ಪಡಿಸಿಕೊಂಡ ವಸ್ತು, ಆಸ್ತಿಗಳನ್ನು ಏನು ಮಾಡುತ್ತಿದ್ದಿರಿ? ಯಾವುದಕ್ಕೆ ಬಳಕೆ ಮಾಡಿಕೊಳ್ಳಬಹುದು? ಸರ್ಕಾರಕ್ಕೋ ಅಥವಾ ಒಳ್ಳೆಯ ಕಾರ್ಯಕ್ಕೋ ಹೇಳಿ.

ಅಧಿಕಾರಿಗಳು ದಾಳಿಮಾಡಿ ಹಿಡಿದ ನಗದು ಅಥವಾ ಒಡವೆ ಇತ್ಯಾದಿಗಳನ್ನು ಮೊದಲಿಗೆ ಮಾಲ್‌ಖಾನೆಯಲ್ಲಿ ಇಡಲಾಗುತ್ತದೆ. ನಂತರ ಕೋರ್ಟ್ ವಶಕ್ಕೆ ನೀಡಲಾಗುತ್ತದೆ. ಆಮೇಲೆ ಕೋರ್ಟಿನಲ್ಲಿ ಶಿಕ್ಷೆಯಾದರೆ ಸರ್ಕಾರಕ್ಕೆ ಹೋಗುತ್ತದೆ ಅಥವಾ ಕೇಸ್ ಡಿಸ್‌ಮಿಸ್ ಆದರೆ ಆ ವ್ಯಕ್ತಿಗೆ ಹೋಗುತ್ತದೆ. ಅದನ್ನು ನಾವು ಯಾತಕ್ಕೂ ಬಳಸುವಂತಿಲ್ಲ.

೭. ಸರ್ಕಾರ ಅದನ್ನು ಯಾವ ರೀತಿ ಬಳಕೆ ಮಾಡಿಕೊಳ್ಳುತ್ತದೆ?

ಸರ್ಕಾರಕ್ಕೆ ಆಸ್ತಿ ಬಂದರೆ ಅದನ್ನು ಹರಾಜುಮಾಡಿ ಬಂದ ಹಣವನ್ನು ಅಭಿವೃದ್ಧಿಗೆ ಬಳಸಬಹುದು.

೮. ಭ್ರಷ್ಟಾಚಾರ ನಿರ್ಮೂಲನೆ ಕಾನೂನಿನ ಮೂಲಕ ಸಾಧ್ಯವೇ?

ನನ್ನ ಪ್ರಕಾರ ಸಾಧ್ಯವಿಲ್ಲ. ಭ್ರಷ್ಟಾಚಾರದಲ್ಲಿ ತೊಡಗಿರುವವರಿಗೆ ಅದು ಕಾನೂನಿನ ವಿರುದ್ಧವೆಂಬ ಸತ್ಯ ಗೊತ್ತಿದ್ದೂ ಬಿಟ್ಟಿಲ್ಲ. ಕಾನೂನಿಗಿಂತ ಅವರ ಮನಃಪರಿವರ್ತನೆ ಮಾಡಿದರೆ ಭ್ರಷ್ಟಾಚಾರ ಕಡಿಮೆಯಾಬಹುದೆಂಬುದು ನನ್ನ ಭಾವನೆ.

೯. ಭ್ರಷ್ಟಾಚಾರ ಶಾಸಕಾಂಗ, ಕಾರ್ಯಾಂಗ ಮಾತ್ರವಲ್ಲದೆ ನ್ಯಾಯಾಂಗದಲ್ಲೂ

ಮನೆ ಮಾಡಿದೆ. ಇದನ್ನು ನೀವು ಒಪ್ಪುತ್ತೀರಾ?

ಖಂಡಿತಾ ಒಪ್ಪುತ್ತೇನೆ. ಮೂರೂ ಅಂಗಗಳೂ ಇದರಲ್ಲಿವೆ.

೧೦. ೧೯೪೮ರಲ್ಲೇ ಭ್ರಷ್ಟಾಚಾರ ಪ್ರಾರಂಭವಾಯಿತು ಎಂದಿರಿ? ಆಗಲೇ ನಮ್ಮ ಸರ್ಕಾರ ಇದನ್ನು ಯಾಕೆ ತಡೆಗಟ್ಟಲಿಲ್ಲ?

ನಾನು ೧೯೪೮ರಲ್ಲಿ ಭ್ರಷ್ಟಾಚಾರ ಹುಟ್ಟಿತು ಎನ್ನಲಿಲ್ಲ. ನನ್ನ ತಿಳಿವಳಿಕೆ ಪ್ರಕಾರ ಸಮಾಜ ಹುಟ್ಟುವಾಗಲೇ ಭ್ರಷ್ಟಾಚಾರ ಹುಟ್ಟಿತ್ತು. ಯಾವುದೇ ಪುರಾಣ ಓದಿ ನೋಡಿ ಭ್ರಷ್ಟಾಚಾರದ ಬಗ್ಗೆ ಮಾತು ಇದ್ದೇ ಇದೆ. ಆದರೆ ಇಂದು ಅದರ ಪ್ರಮಾಣ ಜಾಸ್ತಿಯಾಗುತ್ತಿದೆ. ಆದ್ದರಿಂದ ರಾಜ್ಯದ, ರಾಷ್ಟ್ರದ ಪ್ರಗತಿ ಕೆಟ್ಟುಹೋಗುತ್ತಿದೆ. ೧೯೪೮ರಲ್ಲಾದ ಜೀಪ್ ಹಗರಣದ ೭೦ ಲಕ್ಷ ರೂಪಾಯಿಗಳಷ್ಟೇ ಇಂದು ಸೋರಿಹೋಗಿದ್ದರೆ ಸರ್ಕಾರಕ್ಕೇನೂ ಅಂತಹ ನಷ್ಟ ಆಗುತ್ತಿರಲಿಲ್ಲ. ಆದರೆ ಇಂದು ೧,೭೬,೦೦೦ ಕೋಟಿ ಮೀರುತ್ತಿರುವುದರಿಂದ ಪ್ರಗತಿ ಆಗುತ್ತಿಲ್ಲ. ಹಗರಣ ಆದಾಗ ಮೊದಲು ಕಂಡು ಹಿಡಿಯ ಬೇಕಾದ್ದು ಸರ್ಕಾರ. ಆದರೆ ಅದು ಆ ಕೆಲಸ ಮಾಡಲಿಲ್ಲ. ಯಾಕೆಂದರೆ ಅವರಲ್ಲಿದ್ದವರೇ ಈ ಸೋರಿಕೆ ಕಾರಣ. ಇವತ್ತು ಯಾವುದೇ ಸರ್ಕಾರ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಲು ಸಿದ್ಧವಿಲ್ಲ.

೧೧. ನೀವು ವಶ ಪಡಿಸಿಕೊಂಡ ಯಾವುದೇ ಹಣ-ಆಸ್ತಿಯ ಬಗ್ಗೆ ಇದುವರೆಗೂ ಏನಾದರೂ ತೀರ್ಮಾನ ಆಗಿದೆಯೇ?

ನಾನು ಲೋಕಾಯುಕ್ತನಾಗಿದ್ದಾಗ ದಾಳಿ ಮಾಡಿ ವಶಪಡಿಸಿಕೊಂಡ ಹಣ-ಆಸ್ತಿ ಬಗ್ಗೆ ಈ ತನಕ ಯಾವುದೇ ಕೋರ್ಟಿನಲ್ಲಿ ತೀರ್ಮಾನ ಆಗಿಲ್ಲ. ಕರ್ನಾಟಕದಲ್ಲಿ ಮಾತ್ರವಲ್ಲ ಭಾರತದ ಯಾವುದೇ ಸರ್ಕಾರದಲ್ಲಿ ಭ್ರಷ್ಟಚಾರದ ಬಗೆಗಿನ ಕೇಸ್ ನಿರ್ಣಯವಾಗಬೇಕಾದರೆ ೧೦-೧೫ ವರ್ಷ ಆಗುತ್ತದೆ.

೧೨. ಈ ಸಮಸ್ಯೆಯನ್ನು ಹೇಗೆ ನಿವಾರಿಸಿಕೊಳ್ಳಲು ಸಾಧ್ಯ?

ಲೋಕಾಯುಕ್ತ ಕೇವಲ ಭ್ರಷ್ಟಾಚಾರದ ವಿರುದ್ಧ ಮಾತ್ರ ಹೋರಾಟ ಮಾಡುವ ಸಂಸ್ಥೆಯಲ್ಲ. ಅದರ ಉದ್ದೇಶ ಆಡಳಿತದಲ್ಲಿ ಸುಧಾರಣೆ ತರುವುದು, ಆದಷ್ಟೂ ಜನರ ಕಷ್ಟವನ್ನು ನಿವಾರಿಸುವುದು. ಮಗುವಿನ ಉದಾಹರಣೆ ನಿಮಗೆ ನೀಡಿದೆ. ಇಂತಹ ಸಾವಿರಾರು ಕೇಸ್‌ಗಳಿವೆ. ಇವನ್ನು ಆಳವಾಗಿ ವಿಚಾರಣೆ ಮಾಡಿ ಇತ್ಯರ್ಥ ಮಾಡುತ್ತೇವೆ. ಆಡಳಿತದಲ್ಲಿ ಅನ್ಯಾಯ ಆಗುವುದನ್ನು ಲೋಕಾಯುಕ್ತದಿಂದ ತಡೆಯಲು ಸಾಧ್ಯ. ನಿಮ್ಮ ಬಳಿ ಯಾರಾದರೂ ಲಂಚ ಕೇಳಿದರೆ ನೀವು ಕೂಡಲೇ ಜಿಲ್ಲಾಮಟ್ಟದ ಲೋಕಾಯುಕ್ತ ಅಧಿಕಾರಿಯನ್ನು ಸಂಪರ್ಕಿಸಬೇಕು. ಆತ ಪ್ರಾಮಾಣಿಕನಾಗಿದ್ದರೆ ನಿಮ್ಮ ಸಮಸ್ಯೆಗೆ ಸ್ಪಂದಿಸುತ್ತಾನೆ. ಬರ್ತ್ ಅಥವಾ ಡೆತ್ ಸರ್ಟಿಫಿಕೇಟ್ ಬೇಕಿದ್ದರೆ ಸ್ವಲ್ಪ ತಾಳ್ಮೆಯಿಂದಿದ್ದರೆ ಅದು ಸಿಗಲು ಸಾಧ್ಯ.

೧೩. ಭಾರತದಲ್ಲಿ ೫೦% ಜನ ಭ್ರಷ್ಟಾಚಾರಕ್ಕೆ ನೇರ ಕಾರಣಕರ್ತರು, ೩೦% ಜನ ಪರೋಕ್ಷವಾಗಿ ಕಾರಣಕರ್ತರೆಂದು ಒಂದು ಅಂಕಿ ಅಂಶ ತಿಳಿಸಿದೆ ಉಳಿದ ೨೦% ಜನ ಭ್ರಷ್ಟಾಚಾರರಹಿತ ಅಧಿಕಾರಿಗಳು, ಜನಗಳು ಯಾರೆಂದು ಎಲ್ಲಿ ಹುಡುಕುವುದು?

ಅವರು ಪ್ರಾಮಾಣಿಕರಾಗಿರುವುದರಿಂದ ಅವರನ್ನು ಹುಡುಕುವ ಅಗತ್ಯವಿಲ್ಲ.

೧೪. ಪ್ರಾಮಾಣಿಕ ಎಂದು ಗುರುತಿಸುವುದು ಹೇಗೆ?

ಅವರನ್ನು ಹುಡುಕಲು ದುರ್ಬೀನು ಹಾಕಿ ಹುಡುಕುವ ಬದಲಿಗೆ ಭ್ರಷ್ಟರನ್ನು ಹುಡುಕಿ ಶಿಕ್ಷೆಗೆ ಕೊಡಿಸಿ.

೧೫. ಲೋಕಾಯುಕ್ತದ ನಿಮ್ಮಂತಹ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟರೆ ನಿರ್ಮೂಲ ಮಾಡಲು ಸಾಧ್ಯವೇ?

ಭ್ರಷ್ಟಾಚಾರವನ್ನು ಪೂರ್ಣವಾಗಿ ನಿರ್ಮೂಲ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಚೀನಾದಲ್ಲಿ ಭ್ರಷ್ಟಾಚಾರಿಗೆ ಮರಣದಂಡನೆ ಶಿಕ್ಷೆಯಿದೆ. ಆದರೂ ಭ್ರಷ್ಟಾಚಾರ ನಿಂತಿಲ್ಲ. ಭಾರತಕ್ಕಿಂತ ಹೆಚ್ಚು ಭ್ರಷ್ಟತೆ ಅಲ್ಲಿದೆ. ನಾನು ನನಗೆ ಕೊಟ್ಟ ಅಧಿಕಾರಕ್ಕಿಂತ ಹೆಚ್ಚಿನ ವ್ಯಾಪ್ತಿಯ ಅಧಿಕಾರ ಕೇಳಿದ್ದೆ. ಹಿರಿಯ ಅಧಿಕಾರಿಗಳು ಹಾಗೂ ಆಡಳಿತದಲ್ಲಿದ್ದ ರಾಜಕಾರಣಿಗಳನ್ನು ಸ್ವಯಂಪ್ರೇರಿತ ವಿಚಾರಣೆ ಮಾಡಲು ಅಧಿಕಾರ ಕೇಳಿದೆ. ಕೊಡುತ್ತೇನೆ ಎಂದವರು ಹಿರಿಯ ಅಧಿಕಾರಿಗಳನ್ನು ವಿಚಾರಣೆ ಮಾಡಲು ಅಧಿಕಾರ ನೀಡಿದರೆ ವಿನಾ ರಾಜಕಾರಣಿಗಳನ್ನು ವಿಚಾರಣೆ ಮಾಡಲು ಅಲ್ಲ. ಆದ್ದರಿಂದ ಇಂತಹ ಸ್ಥಿತಿಯಲ್ಲಿ ಕರ್ನಾಟಕದಲ್ಲಿ ಭ್ರಷ್ಟಾಚಾರ ಸಂಪೂರ್ಣವಾಗಿ ನಿರ್ಮೂಲ ಮಾಡಬಹುದೆಂದು ನಾನಂತೂ ಅಂದುಕೊಂಡಿಲ್ಲ.

೧೬. ಲೋಕಾಯುಕ್ತ ಸಂಸ್ಥೆಯಲ್ಲೇ ಭ್ರಷ್ಟರಿದ್ದಾರೆಂಬುದು ಮಾಧ್ಯಮಗಳಲ್ಲಿ ತಿಳಿದುಬಂದ ಮಾಹಿತಿ?

ನಾನೇ ಒಪ್ಪಿಕೊಂಡಿದ್ದೇನೆ, ಲೋಕಾಯುಕ್ತದಲ್ಲೂ ಭ್ರಷ್ಟತೆ ಇದೆಯೆಂದೆ. ಭ್ರಷ್ಟರು ಇದ್ದಾರೆಂಬುದಕ್ಕೆ ಪುರಾವೆ ಸಿಕ್ಕಿದರೆ ಕೇಸ್ ಹಾಕುತ್ತಿದ್ದೆ. ಇಲ್ಲದಿದ್ದರೆ ಅವರನ್ನು ಸಂಸ್ಥೆಯಿಂದ ಮಾತೃಸಂಸ್ಥೆಗೆ ಕಳುಹಿಸುತ್ತಿದ್ದೆವು.

೧೭. ನೀವು ಭ್ರಷ್ಟರೆಂದು ಹಿಡಿದವರಿಗೆ ಹೆಚ್ಚಿನ ಅಧಿಕಾರ ಕೊಡುವ ಕ್ರಮ ಸರ್ಕಾರ ಕೈಗೊಂಡಿದೆ. ಇದು ಸರಿಯೇ?

ಒಬ್ಬ ಭ್ರಷ್ಟ ಅಧಿಕಾರಿ ಎಂದು ಹೇಳಿದ ಮೇಲೂ ಸರ್ಕಾರ ಅವನಿಗೆ ಭಡ್ತಿ ನೀಡುತ್ತಿದೆ ಎಂದರೆ ನಾವು ಎಂತಹ ಅಧಿಕಾರದ ವ್ಯವಸ್ಥೆಯಲ್ಲಿ ಇದ್ದೇವೆ ಎಂದು ನೋವಾಗುತ್ತದೆ. ಭ್ರಷ್ಟಾಚಾರ ಹೆಚ್ಚುತ್ತಿದ್ದಂತೆ ಮೌಲ್ಯಗಳು ಕಡಿಮೆಯಾಗುತ್ತಿವೆ. ಸತ್ಯ, ನ್ಯಾಯಕ್ಕೆ ನೆಲೆ-ಬೆಲೆ ಸಿಗುತ್ತಿಲ್ಲ. ಕೋಟ್ ಮಾಡಿದ ಅಧಿಕಾರಿಯನ್ನು ಅದೇ ಜಾಗದಲ್ಲಿ ಕೂರಿಸಿದ್ದಾರೆ. ಪ್ರಮೋಷನ್ ಕೊಟ್ಟಿದ್ದಾರೆ. ನಾವು ಸರ್ಕಾರಕ್ಕೆ ಪತ್ರ ಬರೆದರೆ, ಅದಕ್ಕೆ ಈ ಲೋಕಾಯುಕ್ತ ಏನು ಮಾಡಲು ಸಾಧ್ಯವೆಂದು ನಿರಾಸಕ್ತಿ. ಅಣ್ಣಾ ಹಜಾರೆ ಚಳವಳಿ ಮಾಡಿದರೆ ಅದಕ್ಕೆ ಸೂಕ್ತ ಸ್ಪಂದನೆ ಸಿಗುತ್ತಿಲ್ಲ.

೧೮. ನೀವು ಕೂಡಾ ಟೀಂ ಅಣ್ಣಾ ಹಜಾರೆ ಭಾಗವಾಗಿದ್ದಿರಿ. ಆದರೆ ಅದು ಸೋಲಲು ಕಾರಣವೇನು?

ಟೀಂ ಅಣ್ಣಾ ಸೋತಿಲ್ಲ. ಅಣ್ಣಾ ಟೀಂನ ಬೆಂಬಲಿಗರು ಸಮಾಜದ ಮಧ್ಯಮ ವರ್ಗಕ್ಕೆ ಸೇರಿದವರು. ಅವರು ಪ್ರತಿಸಲ ಅಣ್ಣಾ ಉಪವಾಸ ಮಾಡಿದಾಗ ೧೦-೧೫ ದಿನ ಕೆಲಸ ಬಿಟ್ಟು ಬಂದು ಕೂರುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಅವರು ಬೀದಿಗೆ ಇಳಿದಿಲ್ಲ. ಆದರೆ ಭ್ರಷ್ಟಾಚಾರದ ವಿರುದ್ಧ ಇರುವ ಆಕ್ರೋಶ ಅವರಲ್ಲಿನ್ನೂ ಇದೆ. ಸಮಯ ಬಂದಾಗ ಅವರು ಮತ್ತೆ ಬೀದಿಗಿಳಿಯುತ್ತಾರೆ. ಪದೇ ಪದೇ ಇಳಿಯುವ ಶಕ್ತಿ ಅವರಲ್ಲಿಲ್ಲ. ೨೦೧೧-೨೦೧೨ರ ನಡುವೆ ೪ ಸಲ ಬೀದಿಗೆ ಇಳಿದಿದ್ದೇವೆ. ಮೊದಲ

ಎರಡು ಸಲ ಬಹಳಷ್ಟು ಜನ ಬಂದರು. ಉಳಿದ ಸಲ ಜನ ಕಮ್ಮಿಯಾದರೆಂದರೆ ಹಜಾರೆ ಸೋತರೆಂದಲ್ಲ, ಅವರ ಬೆಂಬಲಿಗರು ಲಕ್ಷಾಂತರ ಜನರಿದ್ದಾರೆ, ಅವರ ಹೋರಾಟಕ್ಕೆ ಬೆಂಬಲ ನೀಡಲು ಸಿದ್ಧವಾಗಿದ್ದಾರೆ.

೧೯. ಇಂದು ಶೈಕ್ಷಣಿಕ ರಂಗದಲ್ಲಿ ಹೆಚ್ಚಿನ ಭ್ರಷ್ಟಾಚಾರ ಕಾಣುತ್ತಿದೆ. ಇಷ್ಟಾದರೂ ಸರ್ಕಾರ ಖಾಸಗಿ ಸಂಸ್ಥೆಗಳಿಗೆ ಬೆಂಬಲ ಕೊಡುತ್ತಿದೆ. ನಮ್ಮ ಸರ್ಕಾರಿ ಶಾಲೆ, ಕಾಲೇಜುಗಳು ಮುಚ್ಚುತ್ತಾ ಬಂದಿವೆ. ಇದನ್ನುಳಿಸಲು ಯಾವುದಾದರೂ ಪರಿಹಾರ ಇದೆಯೆ?

ಆಡಳಿತದಲ್ಲಿರುವವರು ಪ್ರಾಮಾಣಿಕರಲ್ಲದಿದ್ದರೆ ಕಷ್ಟ ಇದೇ. ನಾನು ಓದಿದಂತೆ ಸರ್ಕಾರಿ ಶಾಲೆಗಳನ್ನು ವಿದ್ಯಾರ್ಥಿಗಳಿಲ್ಲವೆಂಬ ಕಾರಣಕ್ಕೆ ಮುಚ್ಚುತ್ತಿದ್ದಾರೆಂದು. ಅಲ್ಲಿ ಸೌಲಭ್ಯಗಳಿಲ್ಲದ ಕಾರಣ ಈ ಕಾರ್ಯ ಆಗುತ್ತಿದೆ. ಖಾಸಗಿ ವಿದ್ಯಾಸಂಸ್ಥೆಯನ್ನು ನಡೆಸುವವರು ಹೆಚ್ಚಾಗಿ ರಾಜಕೀಯದಲ್ಲಿರುವವರು. ಆದ್ದರಿಂದ ಅಷ್ಟು ಸುಲಭವಾಗಿ ಈ ಸಮಸ್ಯೆ ಬಗೆಹರಿಯಲು ಬಿಡುವುದಿಲ್ಲ. ಯಾವ ಊರಿನಲ್ಲಿ ಶಾಲೆಗಳನ್ನು ಮುಚ್ಚುತ್ತಿದ್ದಾರೋ ಆ ಊರಿನ ಜನ ದಂಗೆ ಏಳುತ್ತಿಲ್ಲ.

೨೦. ಕುಡಿಯಲು ಕಾವೇರಿ ನೀರು ಬೇಕು. ಇರಲು ಕನ್ನಡನಾಡು ಬೇಕು. ಆದರೆ ಕನ್ನಡ ಶಾಲೆಗಳಿಗೆ ಪ್ರೋತ್ಸಾಹ ಕೊಡದೆ ಇಂಗ್ಲೀಷ್ ಶಾಲೆಗಳಿಗೆ ಪ್ರೋತ್ಸಾಹ ಕೊಡತ್ತಿದೆ ಇದಕ್ಕೆ ಕಾರಣವೇನು?

ಇದಕ್ಕೆ ನೀವು ಆಡಳಿತದಲ್ಲಿರುವವರನ್ನು ಪ್ರಶ್ನಿಸಬೇಕು.

೨೧. ಈಗ ಭ್ರಷ್ಟಾಚಾರ ಮಾಡಿದವರನ್ನು ರಾಜಮರ್ಯಾದೆ ಕೊಟ್ಟು ಜೈಲಿನಲ್ಲಿರಿಸಿದ್ದಾರೆ. ಅವರಿಗೆ ಯಾವುದೇ ಕಠಿಣ ಶಿಕ್ಷೆ ನೀಡುತ್ತಿಲ್ಲ. ಒಂದು ವೇಳೆ ಇಂತಹ ಭ್ರಷ್ಟರಿಗೆ ಕಠಿಣ ಶಿಕ್ಷೆ ಕೊಟ್ಟರೆ ಭ್ರಷ್ಟಾಚಾರ ನಿರ್ಮೂಲ ಮಾಡಬಹುದಲ್ಲವೆ?

ಇದರಲ್ಲಿ ಸಮಾಜದ ತಪ್ಪೆ ಇದೆ. ಯಾರೋ ಒಬ್ಬ ಭ್ರಷ್ಟನನ್ನು ಜೈಲಿಗೆ ಕಳುಹಿಸಿದರೆ ಅವನ ಜೊತೆ ಅಳುತ್ತಾ ಹೋಗುತ್ತೆ. ಅವನು ಜೈಲಿಂದ ವಾಪಸ್ ಬಂದರೆ ಡಂಗುರ ಹೊಡೆದುಕೊಂಡು, ಸ್ವೀಟ್ ಹಂಚಿ, ಡ್ಯಾನ್ಸ್ ಮಾಡ್ತಾ ಕರೆದುಕೊಂಡು ಬರುತ್ತೆ. ಇದು ಸಾಮಾಜಿಕ ಅವ್ಯವಸ್ಥೆ. ಜೈಲಿಗೆ ಹೋದವನಿಗೆ ವರ್ಷದ ಒಳಗೆ ವಿಚಾರಣೆ ಮಾಡಿ ಕಠಿಣ ಶಿಕ್ಷೆ ವಿಧಿಸಿದರೆ ಹೀಗಾಗುತ್ತಿರಲಿಲ್ಲ. ಸಮಾಜಕ್ಕೂ ಎಚ್ಚರಿಕೆಯ ಸಂದೇಶ ಹೋಗುತ್ತಿತ್ತು. ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋದರು. ಆದರೆ ಈ ಭ್ರಷ್ಟರು ಯಾಕೆ ಹೋದರೆಂದು ಸಮಾಜ ಅರ್ಥ ಮಾಡಿಕೊಳ್ಳಬೇಕು.

೨೨. ವಿದ್ಯಾರ್ಥಿಗಳು ಭ್ರಷ್ಟಾಚಾರ ನಿರ್ಮೂಲ ಮಾಡಬಹುದಾ?

ಖಂಡಿತಾ ನಿಯಂತ್ರಿಸಬಹುದು.

೨೩. ಅಣ್ಣಾ ಹಜಾರೆ ಲೋಕಪಾಲ್ ಮಸೂದೆ ಬಗ್ಗೆ ಕೇಳಿದ್ದಾರೆ. ಇದನ್ನು ಜಾರಿಗೆ ತಂದರೆ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ಆದರೂ ಯಾಕೆ ತಂದಿಲ್ಲ? ಸ್ವಿಸ್ ಬ್ಯಾಂಕಲ್ಲಿರುವ ಹಣವನ್ನು ತಂದು ಅವಶ್ಯಕತೆ ಇರುವವರಿಗೆ ಬಳಸಬಹುದಲ್ಲವೇ?

ಯಾರು ಮಾಡುವುದು? ಸ್ವಿಸ್ ಬ್ಯಾಂಕಲ್ಲಿರುವುದು ಅಧಿಕಾರದಲ್ಲಿರುವವರ ಹಣ. ಮಸೂದೆ ಮಂಡಿಸಲು ನಿರ್ಧಾರಕ್ಕೆ ಬರುವವರು ಯಾರು?

೨೪. ದುಡ್ಡಿರುವವರು ಲಂಚ ಕೊಟ್ಟು ಮುಂದೆ ಹೋಗುತ್ತಾರೆ. ಪ್ರತಿಭೆ ಇರುವವರು ಹಿಂದೆ ಬೀಳುತ್ತಾರೆ.

ಇದನ್ನು ನಾನು ಒಪ್ಪುತ್ತೇನೆ. ಇದಕ್ಕೆ ಕಾರಣ ಅಧಿಕಾರದಲ್ಲಿರುವವರು. ಅವರನ್ನು ಅಧಿಕಾರದಲ್ಲಿಟ್ಟವರು ನಾವೇ. ಆದ್ದರಿಂದ ಅವರನ್ನು ಇಳಿಸುವ ಅಧಿಕಾರವೂ ನಮ್ಮ ಕೈಯಲ್ಲೇ ಇದೆ.

೨೫. ಲೋಕಪಾಲ್ ಮಸೂದೆ ಮಂಡಿಸುವಂತೆ ನಾವು ಏನಾದರೂ ಮಾಡಬಹುದೆ?

ಆ ಮಸೂದೆ ಜಾರಿಗೆ ತನ್ನಿ ಎಂದು ಪ್ರತಿಭಟನೆ ಮಾಡಬಹುದು.

೨೬. ಪ್ರತಿಭಟನೆ ಮಾಡಿದರೆ ಜೈಲಿಗೆ ಹಾಕುತ್ತಾರೆ. ಆಗ ನಾವೇನು ಮಾಡುವುದು?

ಪ್ರತಿಭಟಿಸಿ ಜೈಲಿಗೆ ಹೋಗುವುದು ಉತ್ತಮ. ಲಂಚ ಪಡೆದು ಜೈಲಿಗೆ ಹೋಗುವವರಿಗಿಂತ ಇದು ಮೇಲು.

೨೭. ನೀವು ನ್ಯಾಯಮೂರ್ತಿಯಾಗಿದ್ದಾಗ ಅತ್ಯಂತ ನೆನಪಿನಲ್ಲುಳಿದ ಘಟನೆ ಯಾವುದು?

ಪಾಟ್ನಾದಲ್ಲಿ ಪಪ್ಪು ಯಾದವ್ ಎಂಬ ಖೈದಿಯನ್ನು ಕೊಲೆ ಅಪರಾಧದಲ್ಲಿ ಬಂಧಿಸಿತ್ತು. ಅವನಿಗೆ ೯ ಸಲ ಸುಪ್ರೀಂಕೋರ್ಟ್ ಬೇಲ್ ನಿರಾಕರಿಸಿತ್ತು. ಆತನನ್ನು ಪಾಟ್ನಾ ಜೈಲಿನಿಂದ ದೆಹಲಿಯ ಏಮ್ಸ್ ಆಸ್ಪತ್ರೆಗೆ ಅನಾರೋಗ್ಯದ ಕಾರಣದಿಂದ ವರ್ಗಾಯಿಸಿತ್ತು. ಆಗ ಒಬ್ಬರಿಂದ ಪತ್ರ ಬಂದಿತು. ಅದರಲ್ಲಿ 'ಇವನಿಗೆ ಯಾವುದೇ ಅನಾರೋಗ್ಯವಿಲ್ಲ. ಪಾಟ್ನದಿಂದ ದೆಹಲಿಗೆ ಬಂದದ್ದು ಜೈಲುವಾಸ ತಪ್ಪಿಸಲು ಈ ಕಾರಣ ಕೊಡುತ್ತಿದ್ದಾನೆ' ಎಂದು. ಅದು ನನ್ನ ಬೆಂಚ್‌ಗೆ ಬಂದಿತು. ನಾನು ಏಮ್ಸ್‌ಗೆ ನೋಟಿಸ್ ಕೊಟ್ಟು ಈ ಆರೋಪಗಳಿಗೆ ಉತ್ತರ ಕೊಡಿ ಎಂದೆ. ನಮ್ಮ ಕೆಳಗಿನ ಅಧಿಕಾರಿಗಳ ಜೊತೆ ಶಾಮೀಲಾಗಿದ್ದ ವಿವರ ತಿಳಿಯಿತು. ಆಗ ನಾನು ಇವನನ್ನು ಪಾಟ್ನಾ ಜೈಲಿನಲ್ಲೇ ಇರಿಸಬೇಕೆಂದೂ, ಅನಾರೋಗ್ಯ ಆದರೆ ಜೈಲಿನ ಆಸ್ಪತ್ರೆಯಲ್ಲೇ ಚಿಕಿತ್ಸೆ ನೀಡಬೇಕೆಂದು ಆರ್ಡರ್ ಮಾಡಿದೆ. ಒಂದು ದಿನ ಟಿ.ವಿಯಲ್ಲಿ ಮಹದೇವ್‌ಪುರ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರಕ್ಕೆ ಹೋಗಿದ್ದ ರೆಕಾರ್ಡ್ ಸಿಕ್ಕಿತು. ಜೈಲಿನಲ್ಲಿರಬೇಕಾದವನು ಚುನಾವಣಾ ಪ್ರಚಾರದಲ್ಲಿ ಯಾಕೆ ಇದ್ದಾನೆಂಬ ವಿಚಾರಕ್ಕೆ ನೋಟೀಸ್ ಕೊಟ್ಟಿತು. ಕೊನೆಗೆ ಆತನನ್ನು ದಕ್ಷಿಣಭಾರತದ ಜೈಲಿನಲ್ಲಿ ಹಾಕಲು ಸೂಚಿಸಿದೆ. ನಿಮಗೆ ಅಧಿಕಾರವಿಲ್ಲವೆಂದು ಕೆಲವರು ಹೇಳಿದರೂ ನಾನು ಲೆಕ್ಕಿಸಲಿಲ್ಲ. ಆದರೆ ಅವನ ಹೆಂಡತಿ ಮಕ್ಕಳು ದೇಶದ ಯಾವ ಜೈಲಿನಲ್ಲಿದಾರೂ ಇರಿಸಿ; ಆದರೆ ದಕ್ಷಿಣಭಾರತದ ಜೈಲಿನಲ್ಲಿ ಬೇಡ, ಜೀವಕ್ಕೆ ಹಾನಿಯಿದೆ ಎಂದಾಗ ತಿಹಾರ್ ಜೈಲಿನಲ್ಲಿ ಹಾಕಲಾಯಿತು. ಇವನನ್ನು ಯಾವುದೇ ಸಂದರ್ಭದಲ್ಲಿ ಹೊರಗೆ ತರಬೇಕಾದರೆ ಸುಪ್ರೀಂ ಕೋರ್ಟಿನ ಆದೇಶವಿಲ್ಲದೆ ತರುವಂತಿಲ್ಲವೆಂದು ಸೂಚನೆ ನೀಡಲಾಯಿತು. ಅಲ್ಲಿಗೆ ಎಲ್ಲಿಯೋ ಒಂದುಕಡೆ ನ್ಯಾಯವಿದೆ ಎಂಬ ನಂಬಿಕೆ ಬಂದಿತು.

೨೮. ಕಸಬ್ ತಪ್ಪು ಮಾಡಿರುವುದರಿಂದ ಅವನನ್ನು ಗಲ್ಲಿಗೆ ಹಾಕಬಹುದು. ಆದರೆ ಯಾರೂ ಮಾಡ್ತಾ ಇಲ್ಲವಲ್ಲ ಯಾಕೆ?

ನನ್ನ ಅಭಿಪ್ರಾಯದಲ್ಲಿ ಭಾರತದ ಕಾನೂನು ಪ್ರಕಾರ ಗಲ್ಲು ಶಿಕ್ಷೆ ಆಗುವುದು ಕಷ್ಟ. ನೂರರಲ್ಲಿ ಶೇಕಡಾ ೧ರಷ್ಟು ಕೂಡಾ ಗಲ್ಲು ಶಿಕ್ಷೆ ಆಗಲ್ಲ. ಸುಪ್ರೀಂ ಕೋರ್ಟ್ ಗಲ್ಲು ಶಿಕ್ಷೆ ಕೊಟ್ಟರೆ, ರಿವ್ಯೂ ಪಿಟಿಷನ್ ತಿರಸ್ಕರಿಸಿದರೆ, ಒಂದು ಕಾನೂನಿನ ಪ್ರಕಾರ ಸುಪ್ರೀಂ ಕೋರ್ಟ್ ತಿರಸ್ಕರಿಸಿದ ನಂತರದ ೧೫ ದಿನಗಳೊಳಗಾಗಿ ರಾಷ್ಟ್ರಪತಿಗಳಿಗೆ ಕ್ಷಮಾದಾನಕ್ಕೆ ಕೋರಬಹುದು. ಆದರೆ ೧೫ ದಿನದೊಳಗೆ ಕೋರಿಲ್ಲವಾದರೆ ೧೬ನೇ ದಿನಕ್ಕೆ ಗಲ್ಲು ಶಿಕ್ಷೆಗೆ ಗುರಿಯಾಗುತ್ತಾನೆ. ಇದಲ್ಲದೆ ಬೇರೆ ಬೇರೆ ಕಾರಣಗಳಿಗಾಗಿಯೂ ಗಲ್ಲುಶಿಕ್ಷೆ ಮುಂದಕ್ಕೆ ಹೋಗುತ್ತದೆ. ಅಫ್ಜಲ್ ಗುರುವಿಗೆ ರಿವ್ಯೂ ಪಿಟಿಷನ್ ಕೂಡಾ ತಿರಸ್ಕರಿಸಿ ಗಲ್ಲು ಶಿಕ್ಷೆ ಖಾಯಂ ಆಗಿ ೫ ವರ್ಷ ಆಗಿದೆ. ಇನ್ನೂ ಗಲ್ಲು ಶಿಕ್ಷೆ ಕೊಟ್ಟಿಲ್ಲ. ಪಾಕಿಸ್ತಾನದಲ್ಲಿ ಒಬ್ಬ ಹಿಂದೂ ಆರೋಪಿಗೆ ಗಲ್ಲು ಶಿಕ್ಷೆ ಆಗಿದೆ. ಅವನನ್ನು ಅಲ್ಲಿ ಗಲ್ಲಿಗೆ ಹಾಕಿಲ್ಲ. ಏಕೆಂದರೆ ಅವನನ್ನು ಗಲ್ಲಿಗೆ ಹಾಕಿದರೆ ಇಲ್ಲಿ ಅಫ್ಜಲ್‌ನನ್ನು ಗಲ್ಲಿಗೆ ಹಾಕಬಹುದು. ಯಾರು ಮೊದಲಿಗೆ ಹಾಕುತ್ತಾರೆ ಎಂದು ಪೈಪೋಟಿಯಲ್ಲಿ ಅಪರಾಧಿಗಳಿಗೆ ಶಿಕ್ಷೆ ಜಾರಿಯಾಗುತ್ತಿಲ್ಲ. ಈ ಸಂದರ್ಭಕ್ಕೆ ಎಡೆ ಮಾಡಿಕೊಡಬಾರದು. ಸುಪ್ರೀಂಕೋರ್ಟ್ ತೀರ್ಮಾನದ ನಂತರ ಕಾನೂನಿನಲ್ಲಿ ಬೇರೆ ಅವಕಾಶ ಇಲ್ಲ ಎಂದ ಮೇಲೆ ಸರ್ಕಾರ ಅದನ್ನು ಪಾಲಿಸದೇ ಇರುವಂತದ್ದು ತಪ್ಪು.

೨೯. ಭ್ರಷ್ಟಾಚಾರ ನಿರ್ಮೂಲನ ಕಾಯಿದೆ ಮುಂತಾದ ಎಷ್ಟೋ ಕಾಯಿದೆ ಜಾರಿಗೆ ತಂದಿದ್ದಾರಲ್ಲ. ಇವುಗಳಿಂದ ಸಮಾಜಕ್ಕೆ ಏನಾದರೂ ಉಪಯೋಗ ಆಗಿದೆ ಎಂದು ನಿಮಗನ್ನಿಸಿದೆಯಾ?

ಬರಿ ಕಾಯಿದೆ ತಂದರೆ ಪ್ರಯೋಜನವಿಲ್ಲ. ಅದನ್ನು ಜಾರಿಗೆ ತಂದು, ಅದಕ್ಕೆ ಶಿಕ್ಷೆ ಬೇಗ ಕೊಡಿಸುವಂತಾದರೆ ಆಗ ಅದಕ್ಕೆ ಬೆಲೆ. ಹಜಾರೆಯವರ ಜನಲೋಕಪಾಲ್ ಬಿಲ್ಲಿನಲ್ಲಿ ಭ್ರಷ್ಟಾಚಾರ ನಿರೋಧ ಕಾನೂನಿನಡಿಯಲ್ಲಿ ವಿಚಾರಣೆಗೆ ಬಂದರೆ ಒಂದು ವರ್ಷದಲ್ಲಿ ಮುಗಿದು ಅಪರಾಧಿಗೆ ಶಿಕ್ಷೆ ಕೊಡಬೇಕೆಂದು ಸಲಹೆ ಮಾಡಿದ್ದೇವೆ. ಈ ಮಟ್ಟಿನ ಅಧಿಕಾರ ವ್ಯಾಪ್ತಿಯನ್ನು ಕೋರ್ಟಿಗೆ, ಅಧಿಕಾರಿಗಳಿಗೆ ಕೊಡಬೇಕು. ಸುಖ್‌ರಾಂ ಎಂಬ ಕೇಂದ್ರಮಂತ್ರಿಯ ಮನೆಯನ್ನು ೧೯೯೬ರಲ್ಲಿ ದಾಳಿ ಮಾಡಿದಾಗ ಮೂರೂವರೆ ಕೋಟಿ ರೂಪಾಯಿ ನಗದು ಸಿಕ್ಕಿತು. ಅವರಿಗೆ ಶಿಕ್ಷೆ ಆಗಿದ್ದು ೨೦೦೯ರಲ್ಲಿ. ೮೫ ವರ್ಷ ವಯಸ್ಸಾದ ಅವರೀಗ ಹೈಕೋರ್ಟಿಗೆ ಅಪೀಲ್ ಹೋಗಿದ್ದಾರೆ. ಸ್ಟೇ ಆಗಿದೆ. ಹೈಕೋರ್ಟಿನ ನಂತರ ಸುಪ್ರೀಂಕೋರ್ಟ್ ಬೇರೆ ಇದೆ. ಇವರಿಗೆ ಶಿಕ್ಷೆ ಕೊಡೋದು ಯಾರು? ಕೋರ್ಟಾ ಇಲ್ಲ ದೇವರಾ? ಇಂತಹ ವಿಚಾರದಲ್ಲಿ ನ್ಯಾಯಾಲಯದ ವ್ಯವಸ್ಥೆಯಲ್ಲಿ ಬದಲಾವಣೆ, ಸುಧಾರಣೆ ತರದೇ ಬರಿ ಲೋಕಪಾಲ್‌ನಿಂದ ಬದಲಾವಣೆ ಆಗಲ್ಲ. ಒಂದು ಕೇಸ್ ಕ್ರಿಮಿನಲ್ ಇರಲಿ, ಸಿವಿಲ್ ಇರಲಿ, ಮೊದಲ ಕೋರ್ಟ್‌ನಲ್ಲಿ ೧೫–೧೬ ವರ್ಷ ಸಮಯ ಬೇಕಾದರೆ ಯಾರಿಗೆ ನ್ಯಾಯಕೊಡಲು ಸಾಧ್ಯ. ಒಂದು ಗಾದೆ ಇದೆ, ಕೋರ್ಟ್ ಕೇಸ್‌ನಲ್ಲಿ ಸೋತವ ಸತ್ತ, ಗೆದ್ದವ ಸೋತ. ಆ ತರಹಕ್ಕೆ ನ್ಯಾಯಾಂಗ ವ್ಯವಸ್ಥೆ ಇದೆ.

೩೦. ಭ್ರಷ್ಟಾಚಾರ ಹಾಗೂ ಅನ್ಯಾಯಗಳನ್ನು ಸರ್ಕಾರದಲ್ಲಿ ಆಡಳಿತ ಮಾಡುತ್ತಿರುವ ವ್ಯಕ್ತಿಗಳೇ ಮಾಡುತ್ತಿದ್ದಾರೆ. ಇವರಿಗೆ ಶಿಕ್ಷೆ ಕೊಟ್ಟರೂ ಇವರಿಗೆ ಯಾಕೆ ಬೇಲ್ ಕೊಡುತ್ತಿದ್ದಾರೆ?

ಇದು ನಮ್ಮ ಕಾನೂನಿನ ವ್ಯವಸ್ಥೆಯಲ್ಲಿರುವ ನ್ಯೂನತೆಗಳ ಪರಿಣಾಮ. ಯಾಕೆಂದರೆ ನಮ್ಮ ಕಾನೂನಿನ ಪ್ರಕಾರ ಹಂತ ಹಂತವಾಗಿ ವಿಚಾರಣೆ ಆಗಬೇಕಿದೆ. ತೀರ್ಮಾನ ಬಹಳ ತಡವಾಗುತ್ತಿದೆ. ಆದ್ದರಿಂದ ಇವತ್ತು ಯಾರಿಗೂ ಶಿಕ್ಷೆಯ ಬಗ್ಗೆ ಭಯವಿಲ್ಲ. ಶಿಕ್ಷೆ ಅಂದರೆ ಶಿಕ್ಷೆ ಪಡೆದವನಿಗೆ ಮಾತ್ರಲ್ಲ, ಸಮಾಜಕ್ಕೆ ಕೂಡಾ ನಾಳೆ ನಾನು ಇಂತ ತಪ್ಪು ಮಾಡಿದರೆ ನಾನೂ ಜೈಲಿಗೆ ಹೋಗಬೇಕಾಗುವ ಸಂದರ್ಭ ಬರಬಹುದೆಂಬ ಬಗ್ಗೆ ಎಚ್ಚರ ಬರಬೇಕಿದೆ. ಆದರೆ ಇವತ್ತಿನ ಸಂದರ್ಭದಲ್ಲಿ ಕೋರ್ಟ್ ವಿಚಾರಗಳಲ್ಲಿ ವರ್ಷಗಟ್ಟಲೆ ಕೇಸ್ ನಡೆಯುತ್ತಿರುವುದರಿಂದ ಜನರಿಗೆ ಹೆದರಿಕೆ ಇಲ್ಲ.

೩೧. ಇವರಿಗೆ ಬೇಲ್ ಕೊಟ್ಟರೆ, ಹೊರಗೆ ಬಂದ ಇವರು ಆಧಾರ, ಸಾಕ್ಷಿಗಳನ್ನು ಮುಚ್ಚಿ ಹಾಕಬಹುದಲ್ವಾ?

ಖಂಡಿತ. ಬೇಲ್ ಸಿಕ್ಕರೆ ಮುಚ್ಚಿಹಾಕುವ ಛಾನ್ಸ್ ಹೆಚ್ಚು. ಇದಕ್ಕೆ ನ್ಯಾಯಾಂಗದಲ್ಲಿ ಬದಲಾವಣೆ ತರಬೇಕು.

೩೨. ನೀವು ೫ ವರ್ಷ ಲೋಕಾಯುಕ್ತರಾಗಿದ್ದಿರಿ. ಆದರೆ ನಿಮ್ಮ ಅಧಿಕಾರದ ಕೊನೆಯ ದಿನಗಳಲ್ಲಿ ದೊಡ್ಡ ಹಗರಣ ಬೆಳಕಿಗೆ ತಂದದ್ದು ಯಡಿಯೂರಪ್ಪ ಅವರ ಗಣಿಕಾರಿಕೆ ಬಗ್ಗೆ. ಕೊನೆಯ ಕ್ಷಣದಲ್ಲಿ ವರದಿ ಕೊಡುವ ಬದಲು ಮೊದಲಿಗೆ ಮಾಡಬಹುದಿತ್ತಲ್ಲವೇ?

ನಾನು ಕೋರ್ಟ್‌ಗೆ ಕೊಟ್ಟಿದ್ದರೂ ಅದಿನ್ನೂ ಟ್ರಯಲ್‌ಗೆ ಬಂದಿಲ್ಲ.

೩೩. ಅವರು ಜೈಲಿಗೆ ಹೋಗಿದ್ದರು. ಆದಷ್ಟು ಬೇಗ ಹೊರಗೂ ಬಂದರು. ನಿಮಗೆ ಇದು ಸಮಾಧಾನ ಅನ್ನಿಸುತ್ತಾ?

ಖಂಡಿತಾ ಇಲ್ಲ. ಆದರೆ ಅವರು ಜೈಲಿಗೆ ಹೋದದ್ದು ನನ್ನ ಕಾರಣದಿಂದ ಅಲ್ಲ. ಅವರು ಹೋದಲ್ಲೆಲ್ಲ ಹೇಳಿಕೊಂಡು ಬರ್ತಾ ಇದ್ದಾರೆ–ಆ ಲೋಕಾಯುಕ್ತ ನನ್ನನ್ನು ಜೈಲಿಗೆ ಕಳುಹಿಸಿದ. ನಾನು ನೋಡಿಕೊಳ್ತೇನೆ ಅಂತ. ನಾನು ಒಂದು ವರದಿ ಮಾತ್ರ ಕೊಟ್ಟೆ. ಆ ವರದಿಯಲ್ಲಿ "ಕುಟುಂಬದ ಒಂದು ಭ್ರಷ್ಟತೆ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಒಂದು ಗಣಿ ಕಂಪನಿ ಈ ಕುಟುಂಬಕ್ಕೆ ೧೦ ಕೋಟಿ ರೂಪಾಯಿ ದಾನ ಕೊಟ್ಟಿದೆ. ಅದು ದಾನ ಅಲ್ಲ ಭ್ರಷ್ಟತೆ ಎಂದು ನಾನು ಹೇಳಿದ್ದೇನೆ. ಇನ್ನೊಂದು ಕಡೆ ಹೇಳಿದ್ದೇನೆ –ಮುಖ್ಯಮಂತ್ರಿಗಳ ಅಳಿಯ ಮತ್ತು ಮಕ್ಕಳು ಬೆಂಗಳೂರಿನಲ್ಲಿ ೪೦ ಲಕ್ಷಕ್ಕೆ ಖರೀದಿ ಮಾಡಿದ ಜಮೀನನ್ನು ಅದೇ ಗಣಿ ಕಂಪನಿ ೨೦ ಕೋಟಿ ರೂ. ಗೆ ಖರೀದಿ ಮಾಡಿದೆ. ಇದೂ ಖಂಡಿತವಾಗಿ ಲಂಚ ಎಂದು ವರದಿ ಕೊಟ್ಟಿದ್ದೇನೆ. ಆದರೆ ಈ ವರದಿ ಮೇಲೆ ಅವರು ಜೈಲಿಗೆ ಹೋಗಿಲ್ಲ. ನಾನು ಕೊಟ್ಟ ವರದಿ ಸರ್ಕಾರದ ಕಸದ ಬುಟ್ಟಿಯಲ್ಲಿ ಬಿದ್ದಿದೆ. ಅವರು ಜೈಲಿಗೆ ಹೋದದ್ದು ಬಾಷಾ ಎಂಬ ವ್ಯಕ್ತಿ ಅವರ ಮೇಲೆ ಕಂಪ್ಲೇಂಟು ಹಾಕಿದ್ದರ ಮೇಲೆ.

೩೪. ಎಲ್ಲರೂ ಅಂದುಕೊಂಡಿದ್ದಾರೆ ನಿಮ್ಮ ವರದಿ ಮೇಲೆ ಈ ಕೆಲಸ ಆಗಿದ್ದು ಎಂದು?

ನಾನು ಮಾಡದ ಕೆಲಸಕ್ಕೆ ನನಗೆ ಪುರಸ್ಕಾರ ಬೇಡ.

೩೫. ನಮ್ಮ ರಾಜ್ಯಕ್ಕೆ ವಯಸ್ಸಾಗಿರುವಂತಹ ರಾಜಕಾರಣಿಗಳ ಅಗತ್ಯ ಇದೆಯಾ? ನಿಮ್ಮ ಅಭಿಪ್ರಾಯವೇನು?

ನಾನು ಪದೇ ಪದೇ ಹೇಳಿದ್ದೇನೆ. ರಾಜಕಾರಣಿಗಳಿಗೂ ನಿವೃತ್ತಿ ಇರಬೇಕೆಂದು. ಯಾವ ರೀತಿಯಲ್ಲಿ ಸರ್ಕಾರಿ ಅಧಿಕಾರಿ, ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಧೀಶ ನಿವೃತ್ತನಾಗುತ್ತಾನೋ ಹಾಗೆ ರಾಜಕಾರಣಿಗಳಿಗೆ ಕೂಡಾ ನಿವೃತ್ತಿಯ ವಯಸ್ಸು ಇರಬೇಕು ಎಂದು. ಆಮೇಲೆ ಅವರನ್ನು ಮೂಲೆಗೆ ಕಳುಹಿಸಬೇಕು. ಆಗ ಯುವಕರು ಬೇಗನೆ ಹುದ್ದೆಗಳಿಗೆ ಬರುತ್ತಾರೆ. ಆದರೆ ಹೀಗಾಗುತ್ತಿಲ್ಲ. ಯಮ ಕಣ್ಣು ಬಿಡುವವರೆಗೂ ಅವರು ನಿವೃತ್ತರಾಗುತ್ತಿಲ್ಲ. ಇಲ್ಲಿಂದ ಹೋಗುತ್ತಿಲ್ಲ.

೩೬. ವಿದ್ಯಾರ್ಥಿಗಳು ಏನು ಮಾಡಬೇಕೆಂದು ನೀವು ಕರೆ ಕೊಡುತ್ತೀರಿ?

ಮೊಟ್ಟಮೊದಲಿಗೆ ಸಾಮಾಜಿಕ ಬದಲಾವಣೆ ತರಬೇಕು. ನೀವು ಪ್ರಾಮಾಣಿಕರಾಗಿದ್ದರೆ ಮಾತ್ರ ಆ ಬದಲಾವಣೆ ತರಲು ಸಾಧ್ಯ. ಈ ಸಾಮಾಜಿಕ ಬದಲಾವಣೆಯಿಂದ ರಾಜಕೀಯದಲ್ಲೂ ಬದಲಾವಣೆ ಆಗುತ್ತದೆ. Charity begins at home. Moral change brings from self change.

೩೭. ವಿದ್ಯಾರ್ಥಿಗಳು ಹೋರಾಟಕ್ಕೆ ಬರ್ತೀವಿ ಅಂದಷ್ಟು ಹೋಗಲ್ಲ. ಇಂತಹವರಿಗೆ ನೀವು ಏನಾದರೂ ಹೇಳ ಬಯಸುವಿರಾ?

ಧೈರ್ಯವಾಗಿ ಬೀದಿಗೆ ಇಳಿಯಿರಿ. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿ. ಸಾಮಾಜಿಕ ಬದಲಾವಣೆ ತನ್ನಿ. ಅದರಿಂದ ನಿಮ್ಮ ಉದ್ಧಾರ ಆಗ್ತದೆ. ಇದು ಸುಲಭವಾಗಿ ಆಗಲ್ಲ. ೬೦-೬೫ ವರ್ಷಗಳಿಂದ ನಡೆದುಕೊಂಡು ಬಂದ ಈ ದುರಾಡಳಿತ, ಈ ಭ್ರಷ್ಟಾಚಾರ ತೊಲಗಿಸಬೇಕಾದರೆ ಸಮಯ ಬೇಕಾಗ್ತದೆ. ಆ ಸಮಯಕ್ಕಾಗಿ ತಾಳ್ಮೆ ಇಟ್ಟುಕೊಂಡು ಹೋರಾಟ ಮಾಡಿ. ಆಗ ಬದಲಾವಣೆ ಬರುತ್ತದೆ.

೩೮. ಇತ್ತೀಚೆಗೆ ನಿವೃತ್ತರಾದ ರಾಷ್ಟ್ರಪತಿಗಳು ವಿದೇಶ ಸಂಚಾರಗಳಿಂದ ದೇಶಕ್ಕೆ ಇಷ್ಟು ಹೊರೆ ಹೊರಿಸಿರುವುದು ತಪ್ಪಲ್ಲವೇ?

ಖಂಡಿತವಾಗಿಯೂ ತಪ್ಪು. ಆ ಹುದ್ದೆ ತಮ್ಮ ಕುಟುಂಬಗಳನ್ನು ಕರೆದುಕೊಂಡು ಅಂತರರಾಷ್ಟ್ರೀಯ ಪ್ರಯಾಣ ಮಾಡಲಿಕ್ಕೆ ಇರುವ ಹುದ್ದೆಯಲ್ಲ. ಆದ್ದರಿಂದ ಅವರು ಸ್ವಲ್ಪ ವಿವೇಚನೆ ಇಟ್ಟುಕೊಂಡು ಈ ಕೆಲಸ ಮಾಡಬೇಕಿತ್ತು.

೩೯. ಈ ಬಗ್ಗೆ ಏನೂ ತೀರ್ಮಾನ ತೆಗೆದುಕೊಂಡಿಲ್ಲವಲ್ಲ?

ಏನೂ ಮಾಡಕ್ಕೆ ಸಾಧ್ಯವಿಲ್ಲ.

೪೦. ನೀವು ಖಾಸಗಿ ಆಸ್ಪತ್ರೆಯವರು ಅಪರೇಷನ್ ಮಾಡಿದರು ಎಂದು ನಿದರ್ಶನ ಕೊಟ್ಟಿರಿ. ನಿಮ್ಮ ಇನ್‌ಫ್ಲೂಯೆನ್ಸ್ ಇಲ್ಲದಿದ್ದರೆ ಯಾವುದಾದರೂ ಖಾಸಗಿ ಆಸ್ಪತ್ರೆಯವರು ಮಾನವೀಯತೆ ದೃಷ್ಟಿಯಿಂದ ಅಪರೇಷನ್ ಮಾಡ್ತಾ ಇದ್ದರಾ?

ನಾನೆಂದೂ ಖಾಸಗಿ ಆಸ್ಪತ್ರೆಯವರನ್ನು ಹೊಗಳಿಲ್ಲ. ಅವರು ಮಾನವೀಯತೆಯಿಂದ ಮಾಡಿದರೆಂದು ಹೇಳುತ್ತಿಲ್ಲ. ನಾನು ಹೇಳಿದ್ದು, ಹುಬ್ಬಳ್ಳಿ ಡಾಕ್ಟರ್‌ಗೆ ಮಾನವೀಯತೆ ಇಲ್ಲವೆಂದು. ಇವರು ಯಾಕೆ ಮಾಡಿದರೆಂದು ನನಗೆ ಗೊತ್ತಿದೆ.

೪೧. ಹಾಗಿದ್ದ ಮೇಲೆ ಹುಬ್ಬಳ್ಳಿ ಡಾಕ್ಟರಿಗೂ ಇವರಿಗೂ ಏನೂ ವ್ಯತ್ಯಾಸ ಇಲ್ಲ ಅಲ್ಲವೆ?

ಈ ಖಾಸಗಿ ಆಸ್ಪತ್ರೆಯವರ ವಿರುದ್ಧ ಆ ವ್ಯಕ್ತಿ ಕಂಪ್ಲೈಂಟ್ ಕೊಟ್ಟಿಲ್ಲ. ಅದು ಈ ವ್ಯಾಪ್ತಿಗೆ ಬರಲ್ಲ. ನಾನು ಈ ಉದಾಹರಣೆ ಯಾಕೆ ಕೊಟ್ಟೆನೆಂದರೆ, ಒಬ್ಬ ಸರ್ಕಾರಿ ಡಾಕ್ಟರ್ ತನ್ನ ವಿದ್ಯಾಭ್ಯಾಸ ಮುಗಿಸಿ ತಾನಾಗಿಯೇ ಸರ್ಕಾರಿ ಸೇವೆಗೆ ಬಂದಿದ್ದಾನೆಯೇ ವಿನಾ ಅವನನ್ನು ಯಾರೂ ಒತ್ತಾಯ ಮಾಡಿ ತಂದಿಲ್ಲ. ಕೈ ತುಂಬಾ ಸಂಬಳ ಬರುತ್ತದೆ. ಕರ್ನಾಟಕದ ೬ನೇ ವೇತನ ಆಯೋಗ ಮಾಡಿದ ಸಲಹೆ ಪ್ರಕಾರ ಅವನ ಸಂಬಳ ಸಾಕಷ್ಟು ಹೆಚ್ಚಿದೆ. ಅಷ್ಟಿದ್ದೂ ಅವನಲ್ಲಿ ಮಾನವೀಯತೆ ಇರಲಿಲ್ಲ. ಅವನು ಮಾಡದ ಕೆಲಸವನ್ನು ಇನ್ನೊಬ್ಬರ ಕೈಯಲ್ಲಿ ಮಾಡಿಸಬಹುದು ಎನ್ನುವುದಕ್ಕಷ್ಟೇ ನಾನು ಈ ನಿದರ್ಶನ ಹೇಳಿದ್ದು. ಖಾಸಗಿಯವರು ಉತ್ತಮ ಎಂದು ನಾನೆಂದೂ ಹೇಳಿಲ್ಲ, ಹೇಳುವುದೂ ಇಲ್ಲ.

೪೨. ರಾಜಕಾರಣಿಗಳು ಮತ್ತು ಸರ್ಕಾರಿ ನೌಕರರು ಮಾತ್ರ ಭ್ರಷ್ಟರೆಂದು ಹೇಳುವುದಾದರೆ ಈ ರಾಜಕಾರಣಿಗಳು ಅಧಿಕಾರಕ್ಕೆ ಬರಬೇಕಾದರೆ ಜನರಿಗೆ ಹಣ ಕೊಟ್ಟು ಮತದಾನ ಮಾಡಿಸಿಕೊಳ್ಳುತ್ತಾರಲ್ಲ ಅವರಿಂದ ಹಣ ಪಡೆದ ಜನ ಕೂಡಾ ಭ್ರಷ್ಟರಲ್ಲವೇ?

ನಾನು ಇಲ್ಲಾಂತ ಹೇಳಲ್ಲ. ಹಣ ಪಡೆದು ಮತ ಹಾಕಿದರೆ ಕಾನೂನಿನಲ್ಲಿ ಏನು ಮಾಡಲೂ ಸಾಧ್ಯವಿಲ್ಲ.

೪೩. ಇದು ನಮ್ಮ ದೇಶದ ದುರಂತ ಅಲ್ಲವೇ ಸಾರ್?

ಕೆಲವು ಖಾಸಗಿ ವಿಚಾರಗಳಲ್ಲಿ ಭ್ರಷ್ಟಾಚಾರ ನಿರೋಧ ಕಾನೂನು ಅಪ್ಲೈ ಆಗಲ್ಲ. ಬರಿ ಆಫಿಷಿಯಲ್‌ಗೆ ಮಾತ್ರ ಅನ್ವಯವಾಗುತ್ತದೆ. ಭ್ರಷ್ಟಾಚಾರ ಎಲ್ಲೆಡೆ ಇದೆ. ಅಧಿಕಾರದಲ್ಲಿರುವವರಿಗೆ ನ್ಯಾಯಬದ್ಧವಾದ ಆದಾಯ ಬಿಟ್ಟು ಇತರೆ ಆದಾಯವಿದ್ದರೆ ಅವರು ಭ್ರಷ್ಟರು ಎಂದಷ್ಟೇ ಹೇಳಲು ಸಾಧ್ಯ.

೪೪. ದಿನಪೂರ್ತಿ ಭ್ರಷ್ಟಾಚಾರದ ಬಗ್ಗೆ ಮಾತಾಡಿದರೂ ಅದನ್ನು ಕಡಿಮೆ ಮಾಡಲು ಸಾಧ್ಯವಿಲ್ಲದಷ್ಟು ಭ್ರಷ್ಟಾಚಾರ ತುಂಬಿದೆ. ನಾನು ನಿಮ್ಮ ವೈಯಕ್ತಿಕ ವಿಚಾರದ ಬಗ್ಗೆ ಪ್ರಶ್ನೆ ಕೇಳಬಯಸುತ್ತೇನೆ. ನೀವು ನಮ್ಮ ತರಹ ವಿದ್ಯಾರ್ಥಿಯಾಗಿದ್ದಾಗ ಯಾವ ತರಹ ಇದ್ದಿರಿ. ಹೀಗೆ ದೊಡ್ಡ ಅಧಿಕಾರಿ ಆಗುತ್ತೇನೆಂದುಕೊಂಡಿದ್ದಿರಾ? ನಿಮ್ಮ ಮನೆಯಲ್ಲಿ ಯಾವ ರೀತಿ ಪ್ರೋತ್ಸಾಹ ಕೊಡುತ್ತಿದ್ದರು?

೧೯೫೦ರಲ್ಲಿ ನನ್ನ ತಂದೆ ಅಂದಿನ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾಗಿ ನೇಮಕ ಗೊಳ್ಳುವಾಗ ನನ್ನ ತಂಗಿಯಂದಿರು ಅಣ್ಣಂದಿರು ಎಲ್ಲರನ್ನೂ ಕರೆಸಿ ಒಂದು ಮಾತು ಹೇಳಿದರು- ನೋಡ್ರಪ್ಪಾ ನನಗೆ ಕೈಗೆ ಬರುವಂತಹ ಸಂಬಳ ೨೭೫೦ ರೂಪಾಯಿ. ಇದರಲ್ಲಿ ಮನೆಬಾಡಿಗೆ, ಕಾರಿನ ಖರ್ಚು, ಟಿಲಿಫೋನ್, ಎಲೆಕ್ಟ್ರಿಸಿಟಿ, ಜವಾನರ ಖರ್ಚು ಇತ್ಯಾದಿ ಎಲ್ಲ ಬರುತ್ತದೆ. ಆದ್ದರಿಂದ ಅರ್ಥ ಮಾಡಿಕೊಳ್ಳಿ, ನನ್ನ ಕೈಯಲ್ಲಿ ನಿಮಗಾಗಿ ಖರ್ಚು ಮಾಡಲಿಕ್ಕೆ ಎಷ್ಟು ಹಣ ಇರಬಹುದೆಂದು. ಇದನ್ನರ್ಥ ಮಾಡಿಕೊಂಡು ನಿಮ್ಮ ಬೇಡಿಕೆಗಳನ್ನು ನನ್ನ ಮುಂದೆ ಇಡಿ. ಮೊತ್ತ ಮೊದಲನೆಯದಾಗಿ ನನ್ನ ಮರ್ಯಾದೆಯನ್ನು ನೀವು ಮೊದಲು ಕಾಪಾಡಬೇಕೆಂದು. ಆ ಒಂದು ಮಾತು ಇವತ್ತಿಗೂ ನನ್ನ ಮನಸ್ಸಿನಲ್ಲಿದೆ. ತಮ್ಮ ಕುಟುಂಬದ ಆದಾಯ ನೋಡಿಕೊಂಡು ನಮ್ಮ ಬೇಡಿಕೆ ಇಡಬೇಕೆಂಬ ವಿಚಾರ

ಮುಖ್ಯ.

೪೫. ಪ್ರತಿಯೊಬ್ಬರಿಗೂ ಅವರದ್ದೇ ಆದ ಆಸೆ ಆಕಾಂಕ್ಷೆಗಳಿರುತ್ತವೆಯಲ್ಲ?

ಆ ಆಸೆಗಳನ್ನು ಆದಾಯದ ಚೌಕಟ್ಟಿನಲ್ಲಿ ಇಟ್ಟುಕೊಳ್ಳಬೇಕು. ನೋಡಿ ನಿಮ್ಮ ಪೋಷಕರಿಗೆ ಒಂದು ಸ್ಕೂಟರ್ ತೆಗೆಸಿಕೊಡುವ ಶಕ್ತಿ ಇರದಿದ್ದರೆ ನೀವು ಸ್ಕೂಟರ್ ಕೇಳಬೇಡಿ. ಯಾಕೆಂದರೆ ಅವರು ಏನಾದರೂ ತಪ್ಪು ಮಾಡಿ ಸ್ಕೂಟರ್ ತೆಗೆದುಕೊಡ್ತಾರೆ. ಅವರಿಗೆ ಸೈಕಲ್ ತೆಗೆದುಕೊಡೋ ಶಕ್ತಿ ಇದ್ದರೆ ಖಂಡಿತಾ ಅದನ್ನು ತೆಗೆದುಕೊಡ್ತಾರೆ. ಅತಿಯಾಸೆ ಅದು ದುರಾಸೆ ಆಗದಂತೆ ನೋಡಿಕೊಳ್ಳಬೇಕು. ಆಸೆಯನ್ನು ಪೂರೈಸುವಾಗ ಕಾನೂನಿನ ಚೌಕಟ್ಟಿನಲ್ಲೇ ಹೋಗಬೇಕು.

೪೬. ನಿಮ್ಮಂತಿರಲು ಎಲ್ಲರಿಗೂ ಆಗುತ್ತೋ ಇಲ್ಲವೋ. ಆದರೆ ನಿಮ್ಮಂತೆ, ನಿಮ್ಮ ಮಾರ್ಗದರ್ಶನದಂತೆ ನಡೆಯಬಯಸುವೆ.

ಏನೇ ಇರಲಿ ನೀವು ಮುಂದುವರೆಯುವ ದಾರಿ ಕಾನೂನಿನ ಚೌಕಟ್ಟಿನಲ್ಲೇ ಇರಲಿ. ಕಾನೂನಿನ ಚೌಕಟ್ಟಿನಲ್ಲಿ ಎಷ್ಟು ಬೇಕಾದರೂ ಸಂಪಾದಿಸಿ. ತಪ್ಪಿಲ್ಲ. ಟ್ಯಾಕ್ಸ್ ಕಟ್ಟಿ. ಉಳಿದದ್ದನ್ನು ಬಳಸುವಾಗ ಕೂಡಾ ಕಾನೂನಿನ ಚೌಕಟ್ಟಿನಲ್ಲಿ ಬಳಸಿ.

೪೭. ಭ್ರಷ್ಟ ರಾಜಕಾರಣಿಗಳು, ಅಧಿಕಾರಿಗಳು ದೋಚಿದ ಹಣವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೇ?

ಕಾನೂನಿನ ಪ್ರಕಾರ ವಿಚಾರಣೆಯಾಗಿ, ಅದಕ್ಕೆ ಸಾಕ್ಷ್ಯಗಳಿದ್ದು ತೀರ್ಮಾನ ಆದರೆ ಸರ್ಕಾರದ ವಶಕ್ಕೆ ತೆಗೆದು ಕೊಳ್ಳಬಹುದು. ಆದರೆ ಸರ್ಕಾರ ನಮ್ಮಿಂದ ಆಗಿರುವಂತದ್ದು. ಸರ್ಕಾರದಲ್ಲಿ ಕೆಲಸ ಮಾಡುವವರು ಅಪ್ರಾಮಾಣಿಕರಾಗಿದ್ದರೆ ಸರ್ಕಾರದ ಹಣ ನಮ್ಮದೆಂದು ಮನೆಗೆ ಕೊಂಡು ಹೋಗ್ತಾರೆ. ಆದರೆ ಇಂತಹ ಹಣವನ್ನು ದೇಶದ ಪ್ರಗತಿಗೆ ಬಳಸಬೇಕು.

೪೮. ಅಣ್ಣಾ ಹಜಾರೆ ಜನಲೋಕಪಾಲ್ ತರಲು ಹೋರಾಡಿದವರು ಈಗ ರಾಜಕೀಯಕ್ಕೆ ಬರಬೇಕೆಂದಿದ್ದಾರೆ. ಅವರು ನಮಗೆ ಆದರ್ಶವಾಗಿದ್ದರು. ಅವರು ಗಾಂಧೀಜಿಯ ಪ್ರತಿರೂಪವೆಂದು ನಾವು ಭಾವಿಸಿದ್ದೆವು. ಅವರು ಪಕ್ಷ ಕಟ್ಟುವುದು ಸರಿಯೇ?

ಅಣ್ಣಾ ಹಜಾರೆ ರಾಜಕೀಯ ಪಕ್ಷ ಕಟ್ಟುವ ಚಿಂತನೆಯಲ್ಲಿಲ್ಲ.

೪೯. ಆದರೆ ಅವರ ಜೊತೆ ಇರುವವರು?

ಅಣ್ಣಾ ಹಜಾರೆ ನಾನು ರಾಜಕೀಯ ಪಕ್ಷ ಕಟ್ಟಲ್ಲ. ನಾನು ಚುನಾವಣೆಗೆ ಪ್ರಚಾರ ಮಾಡಲ್ಲ. ನಾನೂ ನಿಲ್ಲಲ್ಲ ಎಂದು ನೇರವಾಗಿ ಹೇಳಿದ್ದಾರೆ. ಅವರಿಗೆ ಅಂತಹ ಆಕಾಂಕ್ಷೆಯೂ ಇಲ್ಲ. ಅವರ ಜೊತೆ ಇದ್ದಂತ ಕೆಲವರು ರಾಜಕೀಯ ಪಕ್ಷ ಕಟ್ಟಬೇಕೆಂದಿದ್ದಾರೆ. ನಾನೂ ಅಣ್ಣಾ ಹಜಾರೆಯವರಂತೆ ನಿರ್ಧಾರವನ್ನು ಹೊಂದಿದ್ದೇನೆ. ರಾಜಕೀಯವಾಗಿ ಪಕ್ಷ ಕಟ್ಟುವುದಾದರೆ ನಾನೂ ಅವರ ಜೊತೆ ಇರಲ್ಲ ಎಂದು ನೇರವಾಗಿ ಹೇಳಿದ್ದೇನೆ.

೫೦. ಭ್ರಷ್ಟಾಚಾರದ ವಿರುದ್ಧದ ಹೋರಾಟ ಬರಿ ನಗರಗಳಿಗೆ ಸೀಮಿತ ಮಾಡುವುದು ಸರಿಯೇ?

ಅಲ್ಲ. ಇದು ಗ್ರಾಮಾಂತರ ಮಟ್ಟಕ್ಕೆ, ಜಿಲ್ಲೆಗಳಿಗೂ ಹೋಗಬೇಕು. ಆಗ

ಇನ್ನೂ ಹೆಚ್ಚು ಜನ ಸೇರುತ್ತಾರೆ.

೫೧. ಆಕಸ್ಮಾತ್ ಏನಾದರೂ ಅಣ್ಣಾ ಹಜಾರೆ ಎಲೆಕ್ಷನ್‌ಗೆ ನಿಂತರೆ ಓಟ್ ಮಾಡ್ತೀರಾ?

ಇಲ್ಲ. ನಾನು ಚುನಾವಣೆಗೆ ನಿಲ್ಲಲ್ಲ. ನನಗೂ ಚುನಾವಣೆಗೂ ಸಂಬಂಧವಿಲ್ಲವೆಂದು ನಾನು ನೇರವಾಗಿ ಹೇಳಿದ್ದೇನೆ

೫೨. ಈಗ ರಾಜಕೀಯ ಪಕ್ಷದಲ್ಲಿ ಬಹುತೇಕರು ಭ್ರಷ್ಟರಿರುವುದು ಎಲ್ಲರಿಗೂ ಗೊತ್ತು. ಅಂತಹದ್ದರಲ್ಲಿ ಒಳ್ಳೆಯವರು ರಾಜಕೀಯಕ್ಕೆ ಬರಬೇಕು. ಸರ್, ನಾವೆಲ್ಲ ಸಪೋರ್ಟ್ ಮಾಡುತ್ತೇವೆಂದರೆ ನೀವ್ಯಾಕೆ ಎಲೆಕ್ಷನ್‌ಗೆ ನಿಲ್ಲಬಾರದು?

ಇಂತಹ ಸಲಹೆಗಳು ಬೇಕಾದಷ್ಟು ಬಂದಿದ್ದವು. ನನ್ನ ಪ್ರಕಾರ ಒಳ್ಳೆಯ ಕೆಲಸ ಮಾಡೋಕ್ಕೆ ರಾಜಕೀಯ ಒಂದೇ ರಂಗವಲ್ಲ. ಬೇರೆ ದಾರಿಗಳೂ ಇವೆ. ನಾವು ವಾಚ್‌ಡಾಗ್ ತರಹಕ್ಕೆ ಕೆಲಸ ಮಾಡಬೇಕೆನ್ನುವುದು ನನ್ನ ಅಭಿಪ್ರಾಯ. ಎಲ್ಲರೂ ರಾಜಕೀಯಕ್ಕೆ ಬಂದು ಪ್ರಯೋಜನವಿಲ್ಲ. ಕೆಲವರು ರಾಜಕೀಯದ ಹೊರಗಿದ್ದು ಭ್ರಷ್ಟಾಚಾರದ ವಿರುದ್ಧ ಹೋರಾಡಲು ಸಾಧ್ಯವೇ ಎನ್ನುವುದು ನನ್ನ ಚಿಂತನೆ. ಯುವಕರು ರಾಜಕೀಯಕ್ಕೆ ಸೇರಬೇಕು. ಪ್ರಾಮಾಣಿಕರು, ಮಾನವೀಯತೆ ಇರುವ ವ್ಯಕ್ತಿಗಳು ರಾಜಕೀಯಕ್ಕಿಳಿದರೆ ಅಲ್ಲಿರುವ ಭ್ರಷ್ಟರನ್ನು ತಡೆಯಬಹುದು. ಹಿಂದೆ ಪ್ರಾಮಾಣಿಕರು ರಾಜಕೀಯಕ್ಕೆ ಇಳೀತಿದ್ದರು. ಇಳಿದಮೇಲೆ ಭ್ರಷ್ಟರಾಗುತ್ತಿದ್ದರು. ಈಗ ಭ್ರಷ್ಟರೇ ಇಳಿದು ಇನ್ನಷ್ಟು ಭ್ರಷ್ಟರಾಗುತ್ತಿದ್ದಾರೆ. ಅದನ್ನು ನಿಲ್ಲಿಸಬೇಕಿದೆ.

೫೩. ಅಣ್ಣಾ ಹಜಾರೆಯವರ ಜೊತೆ ನೀವು ಕೈಜೋಡಿಸಿದ್ದು ಹೇಗೆ?

ಲೋಕಪಾಲ್ ಮಸೂದೆಯ ಕರಡು ತಯಾರು ಮಾಡುವಾಗ ನೀವು ಸಹಾಯ ಮಾಡಿ ಎಂದು ಕೇಳಿದರು. ಹಾಗಾಗಿ ಸಂಪರ್ಕ ಸಾಧ್ಯವಾಗಿ ನಾನು ಸಹಾಯ ಮಾಡಿದೆ. ಆಮೇಲೆ ನೀವ್ಯಾಕೆ ನಮ್ಮ ಕೋರ್ ಕಮಿಟಿಯಲ್ಲಿರಲ್ಲ ಎಂದು ಕೇಳಿದ್ದಕ್ಕೆ ನಾನೂ ಒಪ್ಪಿದೆ. ನಾನೂ ಲೋಕಾಯುಕ್ತನಾಗಿ ಬಂದಿದ್ದು ಅದೇ ಉದ್ದೇಶಕ್ಕಾಗಿ. ನನ್ನ ವಿಚಾರದಲ್ಲಿ ಎಲ್ಲ ಗೊತಿದ್ದೂ ನನ್ನನ್ನು ಲೋಕಾಯುಕ್ತನಾಗಿ ಕರೆದುಕೊಂಡು ಬಂದರು. ನಾನೂ ಅವರು ಹೇಳಿದಂತೆ ಕೇಳಬಹುದು ಎಂದು ಭಾವಿಸಿದ್ದರು. ಆದರೆ ಅದು ಆಗಲಿಲ್ಲ. ನನ್ನ ಅವಧಿ ಮುಗಿಸುತ್ತಿದ್ದಾಗ ನಾನು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಬೇಕು. ಅನ್ಯಾಯ ಆದವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂಬ ನಿರ್ಧಾರಕ್ಕೆ ಬಂದಿದ್ದೆ. ಆದರೆ ನನ್ನಿಂದ ಸಂಘ, ಸಂಘಟನೆ ಕಟ್ಟಲು ಸಾಧ್ಯವಿಲ್ಲವಾದ್ದರಿಂದ ಯಾವ ರೀತಿ ಹೋರಾಟ ಮಾಡಬೇಕು ಎನ್ನುವ ವಿಚಾರದಲ್ಲಿದ್ದಾಗ ಅಣ್ಣಾ ಹಜಾರ್ ಇಂಡಿಯಾ ಎಗೇನ್ಸ್ಟ್ ಕರೆಪ್ಷನ್ ಎನ್ನುವ ಸಂಸ್ಥೆ ಕಟ್ಟಿದರು. ನಾನೂ ಅದರಲ್ಲಿ ಸೇರಿದೆ. ನಾನು ಹುಡುಕಿದ ದಾರಿ ಸಿಕ್ಕಿದೆ. ನಾನು ಇಲ್ಲಿ ಕೆಲಸ ಮಾಡಬಹುದೆಂಬ ಸಮಾಧಾನವಿದೆ.

೫೪. ಅಣ್ಣಾ ಹಜಾರೆಯವರು ಎರಡನೇ ಗಾಂಧಿ ಎನ್ನುತ್ತಾರೆ. ಆದರೆ ತಮ್ಮ ಹಳ್ಳಿಯಲ್ಲಿ ಸುಧಾರಣೆ ಮಾಡುವಾಗ ಕೆಲವೊಮ್ಮೆ ಹಿಂಸಾತ್ಮಕ ಮಾರ್ಗ ಹಿಡಿದರು. ಹಾಗಾಗಿ ಇದು ಹೇಗೆ ಸರಿ? ಅಣ್ಣಾ ಹಜಾರೆ ತಮ್ಮ ಹಳ್ಳಿಗೆ ಸೀಮಿತವಾದ ಜನಪ್ರಿಯತೆಯನ್ನು ಇಡೀ ದೇಶಕ್ಕೆ ವ್ಯಾಪಿಸಲು ಹೋಗಿ ಸೋತರೆಂಬ ಭಾವನೆ ನನಗಿದೆ.

ಇದು ಸರಿಯೇ?

ನಾನೆಂದೂ ಹಜಾರೆಯವರನ್ನು ಗಾಂಧಿ ಎಂದು ಕರೆದಿಲ್ಲ. ಅವರಲ್ಲಿರುವ ಒಂದು ವಿಚಾರವೇನೆಂದರೆ ಭ್ರಷ್ಟಾಚಾರದ ವಿರುದ್ಧ ಮಹಾರಾಷ್ಟ್ರದಲ್ಲಿ ಬಹಳಷ್ಟು ವರ್ಷದಿಂದ ಹೋರಾಟ ಮಾಡಿದ್ದು. ನೀವು ಓದಿದ ವಿಚಾರವನ್ನು ನಾನೂ ಮಾಧ್ಯಮದಲ್ಲಿ ಕೇಳಿದ್ದೇನೆ. ಅದು ಸರಿಯಲ್ಲ ಎಂದು ನಾನು ಅವರ ಮುಂದೆ ಖಡಾಖಂಡಿತ ಹೇಳಲು ಸಿದ್ಧನಿದ್ದೇನೆ. ಆದರೆ ಅವರ ಹಳ್ಳಿ ರಾಲೇಗಾವ್ ಸಿದ್ದಿಗೆ ಹೋಗಿದ್ದಾಗ ಅಲ್ಲಿರುವ ಸಮೃದ್ಧಿ, ಅಭಿವೃದ್ಧಿಯನ್ನು ನೋಡಿದೆ. ಅವರ ರೀತಿಯನ್ನು ನಾನು ಸಮರ್ಥಿಸುವುದಿಲ್ಲ, ಆದರೆ ಅಭಿವೃದ್ಧಿಯನ್ನು ಸಮರ್ಥಿಸುತ್ತೇನೆ. ಪ್ರತಿಯೊಂದು ಗ್ರಾಮದಲ್ಲೂ ಅದೇ ರೀತಿ ಅಭಿವೃದ್ಧಿ ಆಗ್ತಾ ಇದ್ದರೆ ಖಂಡಿತವಾಗಿಯೂ ನಮ್ಮ ದೇಶ ಬೆಳೆಯಲು ಸಾಧ್ಯ ಎನಿಸುತ್ತದೆ. ಆದರೆ ಗಾಂಧಿ ಜೊತೆ ಹೋಲಿಸುವ ವ್ಯಕ್ತಿ ಅವರಲ್ಲ. ಅವರ ನಡುವೆ ಇರುವ ಒಂದು ಕಾಮನ್ ಫ್ಯಾಕ್ಟರ್ ಗಾಂಧಿ ಟೋಪಿ. ಎಲ್ಲರನ್ನೂ ಗಾಂಧಿ ಮಟ್ಟಕ್ಕೆ ಹೋಲಿಸಲಾಗಲ್ಲ. ಹಜಾರೆಯವರಿಗೆ ಅವರದ್ದೇ ಆದ ಒಂದು ವ್ಯಕ್ತಿತ್ವವಿದೆ. ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ನಾನವರನ್ನು ಸಮರ್ಥಿಸುತ್ತೇನೆ. ಅಂತಹವರು ಸ್ವಲ್ಪ ಬೇಗನೆ ಹುಟ್ಟಿದ್ದಿದ್ದರೆ ಹಿಂದೆಯೇ ಇದನ್ನು ತಡೆಗಟ್ಟಲು ಸಾಧ್ಯವಿತ್ತು ಎನ್ನಿಸುತ್ತದೆ. ನಮ್ಮ ದೇಶದ ದುರ್ದೈವ ಅವರು ಸ್ವಲ್ಪ ಲೇಟಾಗಿ ಬಂದರು.

೫೫. ಇಂದು ಬಹುತೇಕರು ಎಲ್ಲವೂ ತಕ್ಷಣದಲ್ಲಿ ಆಗಬೇಕೆಂಬ ಒತ್ತಡದಲ್ಲಿದ್ದಾರೆ. ತಕ್ಷಣಕ್ಕೆ ಕೆಲಸ ಆಗಬೇಕಾದರೆ ನೂರೋ ಇನ್ನೂರೋ ಕೊಡಬೇಕು. ನಮ್ಮ ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಆದಾಯ ಪ್ರಮಾಣಪತ್ರ ನೀಡಬೇಕಿದೆ. ಪ್ರವೇಶಕ್ಕೆ ಲಾಸ್ಟ್‌ಡೇಟ್ ಆಗ್ತಿದ್ದರೂ ಪ್ರಮಾಣಪತ್ರ ಕೊಡಲ್ಲ. ಬೇಗ ಬೇಕೆಂದರೆ ಅವರಿಗೆ ಹಣ ಕೊಡಬೇಕಿದೆ. ಭ್ರಷ್ಟಾಚಾರ ವ್ಯಾಪಕವಾಗಿರುವಾಗ ಸಾಮಾಜಿಕ ಬದಲಾವಣೆ ಆಗಲು ಎಷ್ಟೊಂದು ಸಮಯ ಹಿಡಿಯುತ್ತೆ?

ಆದಾಯ ಪ್ರಮಾಣಪತ್ರ ಕೊಡಬೇಕೆಂಬುದು ವಿದ್ಯಾರ್ಥಿಗಳಿಗೆ ಮೊದಲೇ ಗೊತ್ತಿರುತ್ತದೆ. ಆದ್ದರಿಂದ ಜೂನ್ ತಿಂಗಳಲ್ಲಿ ಸೇರುವುದಾದರೆ ಮಾರ್ಚ್ ತಿಂಗಳಲ್ಲಿ ಇದರ ವ್ಯವಸ್ಥೆ ಮಾಡಿಕೊಳ್ಳಬೇಕು. ಆಗ ಅಪ್ಲೈ ಮಾಡಿ ಒಂದು ತಿಂಗಳಲ್ಲಿ ಕೊಡದೇ ಇದ್ದರೆ ಲೋಕಾಯುಕ್ತಕ್ಕೆ ಹಾಕಬಹುದು. ನೀವು ಅವಸರಕ್ಕೆ ಹಾಕಲು ಹೋದಾಗ ಅವನು ರೊಕ್ಕ ಕೊಟ್ಟವರಿಗೆ ಮೊದಲು ಕೊಟ್ಟು ಉಳಿದದ್ದನ್ನು ಪಕ್ಕಕ್ಕಿಡುತ್ತಾನೆ. ಆದ್ದರಿಂದ ನಮಗೆ ಗೊತ್ತಿದ್ದ ವಿಷಯಗಳಲ್ಲಿ ನಾವು ಮೊದಲೇ ಎಚ್ಚರಿಕೆ ವಹಿಸಬೇಕು. ಆದಾಯ ಪ್ರಮಾಣಪತ್ರ, ಜನನ ಪ್ರಮಾಣಪತ್ರ ಯಾವುದೇ ಒಂದು ಅಗತ್ಯವಿದ್ದಾಗ ಮೊದಲೇ ಪಡೆದು ಇಟ್ಟುಕೊಳ್ಳಬೇಕು. ಅಧಿಕಾರಿ ಲಂಚ ಕೇಳಿದರೆ ಕೊಡಬೇಡಿ.

೫೬. ಲಂಚ ಕೊಡದಿದ್ದರೆ ಕೆಲಸ ಆಗಲ್ವಲ್ಲ ಸಾರ್?

ಕೊಡಬೇಡಿ. ಕೇಳಿದರೆ ಲೋಕಾಯುಕ್ತಕ್ಕೆ ಕೊಡಿ. ಎಲೆಕ್ಟ್ರಾನಿಕ್‌ಸಿಟಿಯ ಆಕ್ಸ್‌ಫರ್ಡ್ ಇಂಜಿನಿಯರಿಂಗ್ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಬಂದಿದ್ದರು. ಆವಾಗಿನ ಸರ್ಕಾರದ ಆದೇಶದ ಮೇರೆಗೆ ಮೀಸಲಾತಿ ಇದ್ದಂತ ಕೆಲವು ವಿದ್ಯಾರ್ಥಿಗಳನ್ನು ಖಾಸಗಿ ಕಾಲೇಜಿನಲ್ಲಿ ಪ್ರವೇಶ ಮಾಡಿಸಿಕೊಳ್ಳಬೇಕಿತ್ತು. ಅವರ

ಶುಲ್ಕ ಸರ್ಕಾರ ಕಟ್ಟಬೇಕಿತ್ತು. ಸೆಮಿಸ್ಟರ್ ಎಕ್ಸಾಮ್ ಮೊದಲು ಇವರಿಗೆ ಕಾಲೇಜ್ ಕೊಟ್ಟ ನೋಟಿಸಿನಲ್ಲಿ ಸರ್ಕಾರ ನಿಮ್ಮ ಶುಲ್ಕ ಕಟ್ಟಿಲ್ಲ, ನಿಮಗೆ ಪರೀಕ್ಷೆಗೆ ಕೂರಲು ಅವಕಾಶ ಕೊಡಲ್ಲ ಎಂದಿತ್ತು. ತಾಂತ್ರಿಕ ಶಿಕ್ಷಣ ನಿರ್ದೇಶಕರ ಬಳಿಗೆ ಈ ವಿದ್ಯಾರ್ಥಿಗಳು ಹೋದಾಗ ಅವರು ಇದು ನನ್ನ ಕೈಯಲ್ಲಿಲ್ಲ ಎಂದು ಕೈಚೆಲ್ಲಿದಾಗ ಅವರು ನನ್ನ ಬಳಿಗೆ ಬಂದರು. ನಾನು ಪತ್ರ ವ್ಯವಹಾರ ಮಾಡಿ ನ್ಯಾಯ ಒದಗಿಸಿಕೊಟ್ಟೆ.

೫೭. ಚುನಾವಣೆಗೆ ನಿಲ್ಲುವ ಅಭ್ಯರ್ಥಿಗೆ ಏನು ಅರ್ಹತೆಗಳು ಇರಬೇಕು? ಏಕೆಂದರೆ ಅನಕ್ಷರಸ್ಥರೂ ಚುನಾವಣೆಗೆ ನಿಲ್ಲುತ್ತಾರೆ? ಚುನಾಯಿತ ಸಭೆಗಳಲ್ಲಿ ಸದಸ್ಯರು ನಡೆದುಕೊಳ್ಳುತ್ತಿರುವ ರೀತಿಯನ್ನು ಬದಲಾಯಿಸಲು ಏನು ಮಾಡಬೇಕು?

ಚುನಾವಣೆಗೆ ನಿಲ್ಲುವ ಅಭ್ಯರ್ಥಿಗೆ ಹೀಗೆ ವಿದ್ಯಾರ್ಹತೆ ಇರಬೇಕೆಂದು ಹೇಳಲು ಸಾಧ್ಯವಿಲ್ಲ. ಆತ ಜನರ ಕಷ್ಟ ಸುಖ ಅರ್ಥ ಮಾಡಿಕೊಂಡು ತಾನು ಹೋಗುವ ಸಭೆಗಳಲ್ಲಿ ಅದನ್ನು ಚರ್ಚೆ ಮಾಡಿ ನ್ಯಾಯ ಕೊಡಿಸುವವನಾಗಬೇಕು. ಆಗ ಕ್ಷೇತ್ರಕ್ಕೆ ಲಾಭ ಆಗುತ್ತದೆ. ಆದ್ದರಿಂದ ವಿದ್ಯಾರ್ಹತೆ ಇರುವುದು ಒಳ್ಳೆಯದು. ಇದನ್ನು ಬಹಳಷ್ಟು ಜನ ಒಪ್ತಾರೆ. ಒಮ್ಮೆ ಈ ವಿಚಾರವನ್ನು ಲೋಕಸಭೆಯಲ್ಲಿ ಮಂಡಿಸಿದಾಗ ಒಬ್ಬ ಸದಸ್ಯ ಹೇಳ್ತಾನೆ 'ಸ್ವಾಮಿ ನಾವು ರಾಜನೀತಿ ಪಡೆದಾಗ ನಮಗೆ ಭರವಸೆ ಕೊಟ್ಟಿದ್ದರು. ಜನರಿಂದ, ಜನರಿಗಾಗಿ ಜನರಿಗೋಸ್ಕರ ಅಂತಾ, ಎಲ್ಲಾ ಭಾರತೀಯರಿಗೂ ಈ ಸ್ವಾತಂತ್ರ್ಯ ಸಮಾನವಾಗಿ ಸಿಗಬೇಕೆಂದು ತೋರಿಸಿಕೊಟ್ಟಿರಿ. ೧೯೪೭ರಲ್ಲಿ ಭಾರತದ ಜನಸಂಖ್ಯೆ ೪೦ ಕೋಟಿ ಇತ್ತು. ಆ ೪೦ ಕೋಟಿಯಲ್ಲಿ ೮೦% ಜನ ವಿದ್ಯಾರ್ಹತೆ ಇದ್ದವರಲ್ಲ. ಈಗ ಚುನಾವಣೆಯಲ್ಲಿ ನಿಲ್ಲಲು ವಿದ್ಯಾರ್ಹತೆ ಫಿಕ್ಸ್ ಮಾಡಿದರೆ ನಮ್ಮ ಪ್ರಜಾಪ್ರಭುತ್ವ ೨೦% ಪ್ರಜಾಪ್ರಭುತ್ವ ಆಗುತ್ತದೆ. ಇದು ಸರಿಯೇ?' ಎಂದು ಕೇಳಿದರು. ಆಗ ಯಾರು ವಿದ್ಯಾರ್ಹತೆ ಬೇಕೆಂದು ಕೇಳಿದ್ದರೋ ಅವರೇ 'ನನ್ನಿಂದ ತಪ್ಪಾಯ್ತು, ನನಗೆ ೨೦% ಪ್ರಜಾಪ್ರಭುತ್ವ ಬೇಡ, ೧೦೦% ಪ್ರಜಾಪ್ರಭುತ್ವ ಬೇಕು. ಆದ್ದರಿಂದ ನನ್ನ ಸಲಹೆ ವಾಪಸ್ ತೆಗೆದುಕೊಳ್ಳುತ್ತೇನೆ' ಎಂದರು. ಅದು ಅಂದಿನ ಸಭೆಯ ಗಾಂಭೀರ್ಯ. ಇವತ್ತು ಸಭೆಯಲ್ಲಿ ಅವಾಚ್ಯ ಶಬ್ದ ಬಳಸುತ್ತಾರೆ, ಮಿಸ್ಸೈಲ್ ಬಿಡ್ತಾರೆ, ವಾಕ್ಔಟ್ ಸಾಮಾನ್ಯ. ೨೦೧೦ರ ಅಕ್ಟೋಬರ್‌ನಲ್ಲಿ ಕರ್ನಾಟಕದ ರಾಜ್ಯಪಾಲರು ಬಹುಮತ ಸಾಬೀತು ಮಾಡಿ ಎಂದು ಮುಖ್ಯಮಂತ್ರಿಗೆ ಹೇಳಿದರು. ಅಂದು ಸಭೆಯಲ್ಲಾದ ಘಟನೆಗಳನ್ನು ಮಾಧ್ಯಮಗಳಲ್ಲಿ ಗಮನಿಸಿದ್ದೀರಿ. ಸದನದಲ್ಲಿ ಮಾರ್ಷಲ್, ಪೊಲೀಸ್ ಕಮಿಷನ್‌ರ ಮೇಲೆ ಹಲ್ಲೆ ಮಾಡಿದರು. ಒಂದು ಛಾನೆಲ್‌ನಲ್ಲಿ ಈ ದೃಶ್ಯ ತೋರಿಸಿ ಇದೇನಾ ಸಂಸ್ಕೃತಿ, ಇದೇನಾ ಸಭ್ಯತೆ ಎಂದು ಹಾಡು ಹಾಕಿದ್ದರು. ಇವತ್ತಿನ ಸದಸ್ಯರಲ್ಲಿ ಬಹಳಷ್ಟು ಜನ ವಿದ್ಯಾರ್ಹತೆ ಉಳ್ಳವರು. ಆದರೆ ಅವರಿಗೆ ಸಂಸ್ಕೃತಿ ಇದೆಯೇ? ಮಾನವೀಯತೆ, ಪ್ರಾಮಾಣಿಕತೆ ಇದ್ದರೆ ಸಾಕು. ಇನ್ನು ಮುಂದೆ ಎಲೆಕ್ಷನ್‌ಗೆ ನಿಲ್ಲುವ ಅಭ್ಯರ್ಥಿಗಳಿಗೆ ೩ ಪಾಠ ಕಲಿಸಬೇಕಿದೆ. ೧. ಪ್ರಾಮಾಣಿಕತೆಯನ್ನು ಯಾವ ರೀತಿಯಲ್ಲಿ ಪಡೆದುಕೊಳ್ಳಬೇಕು ೨. ಮಾನವೀಯತೆಯನ್ನು ಯಾವ ರೀತಿ ಹೊಂದಬೇಕು ೩. ಮೊದಲಾಗಿ ನಮ್ಮ ಸಂವಿಧಾನದ ಕೆಲವು ಮೂಲಭೂತ ವಿಚಾರಗಳನ್ನು ಅವರಿಗೆ ತಿಳಿಸಬೇಕು. ಯಾವ ಜನತಾ ಪ್ರತಿನಿಧಿ ಭಾರತದ ಪ್ರಜೆಯನ್ನು ನೀವ್ಯಾರ್‍ರೀ ಎಂದರೆ

ಅವನಿಗೆ ಸಂವಿಧಾನದ ಪರಿಚಯವಿಲ್ಲಾಂತ ಭಾವಿಸುತ್ತೇನೆ. ಈ ದೇಶಕ್ಕೆ ಸಂವಿಧಾನ ಕೊಟ್ಟವರು ಭಾರತದ ಪ್ರಜೆಗಳು. ನಮ್ಮ ಸಂವಿಧಾನದ ಮೊದಲ ವಾಕ್ಯ We the people of India adopt this constitution. ಅಂತಹ ಸಂವಿಧಾನ ಹೊಂದಿದ ನಮ್ಮನ್ನು ಚುನಾಯಿತ ವ್ಯಕ್ತಿಗಳು ನೀವ್ಯಾರ್ರೀ ಎಂದು ಕೇಳುವುದು ಸರಿಯಲ್ಲ. ವಿದ್ಯಾರ್ಹತೆಗಿಂತ ಚುನಾವಣೆಗೆ ನಿಲ್ಲುವ ೨-೩ ತಿಂಗಳಿಗೆ ಮೊದಲು short term courseಗಳನ್ನು ಕೊಡಬೇಕಿದೆ ಅಷ್ಟೆ. ನಾವು ಜನತೆಯ ಮಾಲೀಕರಲ್ಲ ಅವರ ಸೇವಕರು ಅನ್ನೋದು ಅವರಿಗೆ ಗೊತ್ತಾಗಬೇಕಿದೆ.

೫೮. ಲೋಕಾಯುಕ್ತರಿಲ್ಲದೆ ೧೪,೦೦೦ ಕೇಸ್ ಪೆಂಡಿಂಗ್‌ನಲ್ಲಿದ್ದರೂ ಲೋಕಾಯುಕ್ತರ ನೇಮಕ ಮಾಡದಿರಲು ಕಾರಣವೇನು?

ಲೋಕಾಯುಕ್ತ ಸಂಸ್ಥೆಯಿಂದ ಕುತ್ತು ಬರೋದು ಯಾರಿಗೆ, ಜನರಿಗಲ್ಲ. ಅಧಿಕಾರದಲ್ಲಿರುವವರು ತಮ್ಮ ಕೊರಳಿಗೆ ತಾವೇ ನೇಣು ಹಾಕಿಕೊಳ್ಳಲು ಸಿದ್ಧರಿಲ್ಲದ್ದರಿಂದ ಈ ಹುದ್ದೆ ಭರ್ತಿ ಆಗ್ತಾ ಇಲ್ಲ. ಆದರೆ ಒಂದು ಮಾತು ನಿಮಗೆ ಖಂಡಿತಾ ಹೇಳ್ತೇನೆ, ಕರ್ನಾಟಕದ ೨೦೧೩ರ ಚುನಾವಣೆ ಬರುವ ಮೊದಲು ಆ ಹುದ್ದೆ ಭರ್ತಿ ಮಾಡ್ತಾರಾ, ಕೇಂದ್ರದಲ್ಲಿ ೨೦೧೪ರ ಚುನಾವಣೆಗೆ ಮೊದಲು ಲೋಕಪಾಲ್ ಸಂಸ್ಥೆ ಮಾಡ್ತಾರಾ ಎನ್ನುವುದರ ಬಗ್ಗೆ ಖಚಿತವಿಲ್ಲ. ಯಾಕೆಂದರೆ ಇವರಲ್ಲಿ ಯಾರೊಬ್ಬರಿಗೂ ಚುನಾವಣೆಗೆ ಹೋಗುವ ಮೊದಲು ಇದನ್ನು ಮಾಡದಿದ್ದರೆ ಜನ ಮತ ಹಾಕಬಾರದು.

೫೯. ಚುನಾವಣೆಯಲ್ಲಿ ಯಾರು ಪ್ರಾಮಾಣಿಕರು ಎಂದು ತಿಳಿದು ಮತದಾನ ಮಾಡೋದು ಹೇಗೆ?

ನಿಜ, ಇದೊಂದು ದೊಡ್ಡ ಸಮಸ್ಯೆ. ನಾನು ಕೂಡಾ ಬಹಳಷ್ಟು ಕಡೆ ಈ ಪ್ರಶ್ನೆ ಎದುರಿಸಿದ್ದೇನೆ. ಇಂದಿನ ಪರಿಸ್ಥಿತಿಯಲ್ಲಿ ಏನೇ ಇದ್ದರೂ ನಾವು ಮತಗಟ್ಟೆಗೆ ಹೋಗಬೇಕು. ಅಭ್ಯರ್ಥಿಗಳ ಹಿನ್ನೆಲೆ ತಿಳಿದು, ಇದ್ದವರಲ್ಲಿ ಯಾರು ಉತ್ತಮ ಎಂದು ತಿಳಿದು ಅವರಿಗೆ ಜಾತಿ, ಪಕ್ಷ ಮೀರಿ ಮತ ಹಾಕಬೇಕಿದೆ. ಅಣ್ಣಾ ಟೀಂ ಚುನಾವಣೆಯಲ್ಲಿ ಕೆಲವು ಪದ್ಧತಿಗಳನ್ನು ಬದಲಿಸಬೇಕಿದೆ ಎನ್ನುವುದನ್ನು ಗ್ರಹಿಸಿದೆ. ಈ ಪಟ್ಟಿಯಲ್ಲಿನ ಯಾವ ಅಭ್ಯರ್ಥಿಯೂ ನಮಗೆ ಬೇಡವೆಂದು ಹೇಳುವ ಕಾಲಂ ಕೂಡಾ ಇರಬೇಕು. ಆಗ ಅವರಿಗೆ ಅರ್ಥ ಆಗ್ತದೆ ಇಂತಹ ಅಭ್ಯರ್ಥಿ ಅವರಿಗೆ ಬೇಕಿಲ್ಲ ಅನ್ನೋದು. ಇವತ್ತು ರೂಲ್ ೪೯(೪) ಪ್ರಕಾರ ಅರ್ಜಿ ಹಾಕಿ ಮತ ಹಾಕಿದವನು ಯಾರು ಎಂದು ಕಂಡು ಹಿಡಿಯಬಹುದು.

೬೦. ದೊಡ್ಡ ವ್ಯಕ್ತಿಗಳ ವಿರುದ್ಧ ಸಾಕ್ಷಿಗಳಿದ್ದರೂ ಇವತ್ತು ಶಿಕ್ಷೆ ಆಗುತ್ತಿಲ್ಲ ಯಾಕೆ? ಅದನ್ನು ಮುಂದೂಡುತ್ತಿದ್ದಾರೆ ಯಾಕೆ?

ಇವತ್ತಿನ ನ್ಯಾಯಾಂಗ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳು ಆಗಬೇಕಿದೆ. ಒಂದು ಕೇಸ್ ಕೋರ್ಟಿಗೆ ಹೋದರೆ ಒಂದು ವರ್ಷದಲ್ಲಾದರೂ ತೀರ್ಮಾನ ಬರಬೇಕಿದೆ ಎಂದು ಆದೇಶ ಬರಬೇಕಿದೆ.

* * *

ಹಳ್ಳಿ ಹಳ್ಳಿಯಾಗಿ ಉಳಿದಲ್ಲಿ ಉಳಿದೆಲ್ಲ

– ನಾರಾಯಣ ಶೇವಿರೆ

ಹಳ್ಳಿ ಬದಲಾಗುತ್ತಿದೆ ಎಂಬೊಂದು ಆತಂಕದ ಧ್ವನಿ ದೀರ್ಘ ಕಾಲದಿಂದ ಕೇಳಿಬರುತ್ತಿದ್ದರೂ ಅದರಲ್ಲಿನ ಆತಂಕ ಹಾಗೂ ಧ್ವನಿಯ ಪ್ರಮಾಣ ಎರಡೂ ವರ್ಧನೆಗೊಂಡು ಕೇಳಿಸುತ್ತಿರುವುದು ಇತ್ತಿತ್ತಲಾಗಿನ ವಿದ್ಯಮಾನ. ಬದಲಾವಣೆ ಜಗತ್ತಿನ ನಿಯಮ ಎಂಬ ತಾತ್ತ್ವಿಕ ಮಾತಿನ ನೆನಪು ಸದಾ ಇರುತ್ತಲೇ ಹಳ್ಳಿ ಬದಲಾಗುವುದನ್ನು ಒಪ್ಪಿಗೆಯಾಗದೆ ನೋಡುತ್ತಿದ್ದೇವೆ.

ಹಳ್ಳಿ ಬದಲಾಗುವಲ್ಲಿ ಬದಲಾಗಬಾರದೆನ್ನುವವರ ಪಾತ್ರವೂ ಮಹತ್ತ್ವದ್ದೇ ಇದೆ. ಏನು, ಹಳ್ಳಿ ಬದಲಾಗಬಾರದೇ? ಅಥವಾ ಹಳ್ಳಿಯ ಕೆಲವು ಸಂಗತಿಗಳು ಮಾತ್ರ ಬದಲಾಗಬಾರದೆ? ಅಥವಾ ಈಗ ಬದಲಾಗುತ್ತಿರುವಂತೆ ಬದಲಾಗಬಾರದೆ?

ಇರುವಂತೆ ಯಾವುದೂ ಇರಲಾರದು. ಇಷ್ಟೆಂದರೆ ವಾಕ್ಯ ಪೂರ್ತಿಯಾದಂತೆನಿಸುವುದಿಲ್ಲ. ಬದಲಾಗುತ್ತ ಇರುವುದಕ್ಕೆ ಬದಲಾಗದಿರುವ ಒಂದರ ಆಸರೆಯೋ ಆಧಾರವೋ ಇರಬೇಕೆನಿಸುತ್ತದೆ. ಹೇಗೆಂದರೆ, ತಿರುಗುತ್ತಿರುವ ಚಕ್ರಕ್ಕೆ ಅದರ ಕೇಂದ್ರದಲ್ಲಿ ತಿರುಗದೇ ಇರುವ ಕೋಲಿನಂಥ ವಸ್ತು ಇರುವಂತೆ, ಇದು ಭದ್ರ ಇದ್ದಷ್ಟು ಚಕ್ರದ ತಿರುಗಾಟ ನಿರಂತರ ನಿರಾತಂಕವಾಗಿ ನಡೆದೀತು. ಮಧ್ಯದ ಕೋಲೇ ತಿರುಗ ಹೊರಟರೆ ಚಕ್ರದ ತಿರುಗಾಟ ನಿಯಂತ್ರಣ ತಪ್ಪಿದಂತೆ. ತಿರುಗುವ ಚಕ್ರ ಪ್ರಗತಿ ಕಾಣುವುದೂ ಮುಂದೆ ಹೋಗುವುದೂ ನಿಶ್ಚಲವೊಂದರ ಆಧಾರದಿಂದಾಗಿಯೇ. ಬದಲಾವಣೆ ಜಗತ್ತಿನ ನಿಯಮವಾದರೂ ಬದಲಾಗುವುದಕ್ಕೆ ಬದಲಾಗದ್ದರ ಆಸರೆ ಬೇಕು. ಬದಲಾಗದ್ದು ಬದಲಾಗುವುದು ಪಾರಸ್ಪರಿಕವಾಗಿರುವುದೂ ಜಗತ್ತಿನ ನಿಯಮವೇ. ಬದಲಾಗುವುದಕ್ಕೆ ಬದಲಾಗದ್ದರ ಬಗ್ಗೆ ಹಂಗಿದೆ. ಬದಲಾಗದ್ದಕ್ಕೆ ಬದಲಾಗುವುದರ ಹಂಗಿಲ್ಲ. ಹಾಗಾಗಿ ಬದಲಾಗದ್ದೇ ಮೂಲ. ಬದಲಾಗುವುದು ಮೂಲಕ್ಕೆ ನಿಷ್ಠವಾಗಿರುವಲ್ಲಿಯ ತನಕ ಬದಲಾವಣೆ ನಿರಂತರ, ನಿರಾತಂಕ, ಆರೋಗ್ಯಕರ. ಮೂಲಕ್ಕೆ ನಿಷ್ಠೆ ತಪ್ಪಿದ ಬದಲಾವಣೆ ಅಪಾಯಕಾರಿ.

ಬದುಕಿನ ಮೂಲ ಹಳ್ಳಿ. ಅದು ಜೈವಿಕ ಬದುಕು ಇರಬಹುದು, ಸಾಂಸ್ಕೃತಿಕ ಬದುಕು ಇರಬಹುದು, ನಾಗರಿಕ ಬದುಕೇ ಇರಬಹುದು, ಒಟ್ಟಾರೆಯಾಗಿ ಮಾನುಷ ಬದುಕು. ಜೈವಿಕ ಬದುಕಿಗೆ ಬೇಕಾದ ಆಹಾರಾದಿ ದ್ರವ್ಯಗಳನ್ನು ಹಳ್ಳಿಯೇ ಉತ್ಪಾದಿಸಬೇಕು. ಸಾಂಸ್ಕೃತಿಕ ಬದುಕಿನ ಪರಿಸರಗಳನ್ನು ಸೃಷ್ಟಿಸುವ ಸೃಷ್ಟಿಶೀಲ ಸಾಮರ್ಥ್ಯ–ಸನ್ನಿವೇಶಗಳು ಇರುವುದು ಹಳ್ಳಿಯಲ್ಲಿಯೇ. ಹಳ್ಳಿಯ ಬದುಕನ್ನು ಆಶ್ರಯಿಸಿಯೇ ಜನಪದರು ಜಾನಪದ ಲೋಕವನ್ನೇ ನಿರ್ಮಿಸಿದರಲ್ಲ!

ನಾಗರಿಕತೆ ನದಿ ಬದಿ ಹುಟ್ಟಿತು, ಬೆಳೆಯಿತು, ಸರಿ. ಆ 'ನದಿ' ಹಳ್ಳಿಯಲ್ಲೇ ಇರಲಿಕ್ಕೆ ಬೇಕು. ನಿರ್ಮಲ ಸ್ವಚ್ಛ ನದಿಯಿಂದಷ್ಟೆ ಮಾನುಷ ಬದುಕು – ನಾಗರಿಕತೆ ಅರಳಲು ಸಾಧ್ಯ. ತನ್ನ ಬೆಳವಣಿಗೆಯಲ್ಲಿ ಮೂಲಕ್ಕೆ ನಿಷ್ಠೆ ತೋರದ ನಾಗರಿಕತೆ

ಮೊದಲು ಹಾಳುಗೆಡಹುವುದು, ಮಲಿನ ಗೊಳಿಸುವುದು ನದಿಯನ್ನೇ.

'ನದಿ ಬದಿ ನಗರ ಬೆಳೆಯಿತು.'

'ನಗರದ ಬದಿಯ ನದಿ ಮಲಿನಗೊಂಡಿತು.'

ಈ ಎರಡು ವಾಕ್ಯಗಳಲ್ಲಿನ ವಿರೋಧಾಭಾಸವನ್ನು ಗಮನಿಸಿ. ಪಾರಸ್ಪರಿಕ ವಾಕ್ಯಗಳು ಹುಟ್ಟಲಿಕ್ಕೇ ಬೇಕೆನ್ನುವಲ್ಲಿ ಪರಸ್ಪರ ವಿರುದ್ಧ ವಾಕ್ಯಗಳು! ನದಿ, ನಗರ ಪಾರಸ್ಪರಿಕವಾಗಬೇಕಿತ್ತು. ಈ ಪಾರಸ್ಪರಿಕತೆಗೆ ತೊಡಕು ಬಂದಿರುವುದು ನಗರದ ಹಂಗಿರದ ನದಿಯಿಂದಲ್ಲ. ಸದಾ ನದಿಯ ಹಂಗಿನಲ್ಲೇ ಇರುವ ನಗರದಿಂದ. ನಿರಪಾಯಕಾರಿಗಳಾಗುವುದಕ್ಕಾಗೇ 'ಯಾರ ಹಂಗಲ್ಲೂ ಇರಬಾರದು' ಎಂಬ ಮಾತು ಬಂತೇ? ತನ್ನ ಹುಟ್ಟಿಗೆ ಕಾರಣವಾಗಿರುವ ನದಿಗೆ ಅಪಾಯ ತಂದಿಕ್ಕುವ ನಗರ – ಇದು ಮಾತೃದ್ರೋಹ. ಮಾತೃದ್ರೋಹ ಅಂದರೆ ಅಕ್ಷಮ್ಯ ದ್ರೋಹ. ಯಾವುದರ ಋಣವನ್ನು ತೀರಿಸಲಸಾಧ್ಯವೋ ಅದಕ್ಕೆ ಗೈವ ದ್ರೋಹವನ್ನು ಕ್ಷಮಿಸಲೂ ಅಸಾಧ್ಯ. ತಾಯಿಗೆ, ಅಂದರೆ ತನ್ನ ಮೂಲಕ್ಕೆ ನಿಷ್ಠೆಯಿಂದಿದ್ದಾಗ ಇಂಥ ಅಕ್ಷಮ್ಯಗಳು ನಡೆಯವು.

ಬದಲಾವಣೆ ಎಂದರೆ ಇಂದಿನ ನಾಗರಿಕತೆಯ ಭಾಷೆಯಲ್ಲಿ ಹೇಳುವುದಾದರೆ ಬೆಳವಣಿಗೆ ಮತ್ತು ಜಗದ ನಿಯಮಕ್ಕೆ ಅನುಕೂಲಿಯಾದ ಬದಲಾವಣೆ. ಬದಲಾವಣೆ ನಿರಂತರವಾಗಿರಬೇಕೆಂದು ತಾನೇ ಜಗತ್ತಿನ ನಿಯಮ. ಬದಲಾವಣೆ ಆರೋಗ್ಯಕರವಾಗಿದ್ದಾಗ ಮಾತ್ರ ತಾನೇ ಅದು ನಿರಂತರವಾಗಿರಲು ಸಾಧ್ಯ. ಜಗತ್ತನ್ನೇ ವಿನಾಶದೆಡೆಗೆ ನೂಕೊಯ್ಯುವ ಆಧುನಿಕ ನಾಗರಿಕತೆಯ ನಾಗಾಲೋಟವು ಕೊನೆಗೆ ತಾನೂ ನಿಂತುಬಿಡಬೇಕಾಗಿ ಬರುವುದರಿಂದ ಈ ಬದಲಾವಣೆ ನಿರಂತರವಲ್ಲ, ನಿರಾತಂಕವಂತೂ ಅಲ್ಲವೇ ಅಲ್ಲ. ಆರೋಗ್ಯಕರ ಬದಲಾವಣೆಯಷ್ಟು ನಿರಾಂತಕವಾಗೂ, ನಿರಂತರವಾಗೂ ಇರಲು ಸಾಧ್ಯ, ಆರೋಗ್ಯ –ಮೂಲಕ್ಕೆ ನಿಷ್ಠೆ ಇದ್ದಾಗ. ಹಾಗೆಯೇ ಬೆಳವಣಿಗೆ ಕೂಡಾ. ಅದೂ ನಿರಂತರವಾಗಿರಬೇಕಾದರೆ ಅನಾರೋಗ್ಯದ ಒಂದು ಸಣ್ಣ ಬೀಜವನ್ನೂ ತನ್ನೊಳಗಿಟ್ಟುಕೊಂಡಿರಕೂಡದು. ಮೂಲಕ್ಕೆ ನಿಷ್ಠೆ ಇದ್ದಾಗಷ್ಟೆ ಇದು ಸಾಧ್ಯ. ಮೂಲಕ್ಕೆ ನಿಷ್ಠೆ ಇರುವುದೇ ಮೌಲ್ಯ.

ಮೂಲ ಒಂದು ನಿಶ್ಚಲ ವಸ್ತು. ಉಳಿದವನ್ನು ಚಲಿಸುವಂತೆ ಮಾಡುವುದು ಎಷ್ಟು ಗಟ್ಟಿ ಇದ್ದರೂ ಸಾಲದು ಎನ್ನುವಷ್ಟು ಗಟ್ಟಿತನ ಹೊಂದಿರುವ ವಸ್ತು. ಈ ಗಟ್ಟಿತನ ಹೊಂದಿರುವ ತನಕ ಅದು ಮೂಲ ಎನಿಸಿಕೊಳ್ಳಲು ಸಾಧ್ಯ. ಈಗ ಬದುಕಿನ ಮೂಲ ಎನಿಸಿರುವ ಹಳ್ಳಿ ಗಟ್ಟಿತನ ಹೊಂದಿದೆಯೆ? 'ಹಳ್ಳಿ ಬದಲಾಗುತ್ತಿದೆ' ಎಂಬಲ್ಲಿ ಈ ಗಟ್ಟಿತನ ಕಳಕೊಳ್ಳುತ್ತಿರುವ ಭೀತಿ ಕಾಣುತ್ತಿದೆ. ಒಂದು ಸ್ಪಷ್ಟನೆ: ಜಗತ್ತಿನಲ್ಲಿ ಎಲ್ಲವೂ ಬದಲಾಗುವುದು ಅನಿವಾರ್ಯ. ಅದೇ ಜಗತ್ತಲ್ಲೇ ಎಲ್ಲ ಹಳ್ಳಿಗಳೂ ಇರುತ್ತ, ಅದರ ಬದಲಾವಣೆ ಸಲ್ಲದೆಂಬ ಧ್ವನಿ ಹಳ್ಳಿಗಳು ಬದಲಾಗುತ್ತಿವೆ ಎಂಬ ಆತಂಕದಲ್ಲಿರುವದಲ್ಲ. ಹಳ್ಳಿ ಬದುಕಿನ ಮೂಲ ಎಂದಾಗ, ಅದು ಯಾವ ಯಾವ ಬದುಕಿಗೆಲ್ಲ ಮೂಲವೋ ಅವೆಲ್ಲ ಬದಲಾದಂತೆ ಹಳ್ಳಿ ಬದಲಾಗಕೂಡದು. ನಗರಕ್ಕೆ ಹಳ್ಳಿ ಮೂಲ ಎಂದಾಗ, ನಗರ ಬದಲಾದಂತೆ ಹಳ್ಳಿ ಬದಲಾಗಕೂಡದು. ಹಳ್ಳಿ ಆಧಾರಿತವಾಗಿ ನಗರ ಬದಲಾವಣೆ/ಬೆಳವಣಿಗೆ ನಿಷ್ಠೆ ಹೊಂದಬೇಕು ಎಂದಾಗ,

ನಗರ ತನ್ನ ಮೂಲಕ್ಕೆ ಅಂದರೆ ಹಳ್ಳಿಗೆ ನಿಷ್ಠೆ ಹೊಂದಲು, ಹಳ್ಳಿ ಆ ನಿಷ್ಠೆಯ ತೂಕವನ್ನು ಹೊತ್ತುಕೊಳ್ಳಬಲ್ಲ ಸಾಮರ್ಥ್ಯವನ್ನು ಹೊಂದಿರಬೇಕು. ನಗರದಂತೆ ತಾನೂ ಆಗಹೊರಟರೆ ಆಗ ಹಳ್ಳಿ ಹಳ್ಳಿಯಾಗುಳಿ ಯುವುದಿಲ್ಲ. ಎಂದರೆ, ಆಗ ಎದುರಾಗುವುದು ಮೂಲವೇ ಹೊರಟುಹೋದಂಥ ಸಂಕಟ.

ಮಾನುಷ ಬದುಕು ಹುಟ್ಟಿ ಬೆಳೆದುದೇ ಹಳ್ಳಿಯಿಂದ. ಹಳ್ಳಿ ಕೂಡ ಬೆಳೆಯುತ್ತ ಹೋಯಿತು. ಅದು ಬೆಳೆಯಬೇಕಾದುದು ತನಗೆ ನಿಷ್ಠೆ ಇಟ್ಟುಕೊಂಡು; ನಗರಕ್ಕೆ ನಿಷ್ಠೆ ಇಟ್ಟುಕೊಂಡಲ್ಲ. ನಗರದ ನಿಷ್ಠೆಯೂ ಇರಬೇಕಾದುದು ಹಳ್ಳಿಗೆ, ನಗರಕ್ಕಲ್ಲ. ಗ್ರಹೀತ ಇಷ್ಟೇ: ಹಳ್ಳಿ ಬದಲಾಗಬಾರದೆಂದರೆ, ನಗರಕೇಂದ್ರಿತವಾಗಿ ಬದಲಾಗಬಾರದು. ನಗರಕೇಂದ್ರಿತವಾಗಿ ಬದಲಾದಾಗ ಅದು ಹಳ್ಳಿಯ ನಗರೀಕರಣವಾಗುತ್ತದೆ. ಹಳ್ಳಿ ಕೇಂದ್ರಿತವಾಗೇ ಹಳ್ಳಿ ಬೆಳೆಯಬೇಕು. ತನ್ನನ್ನು ಕೇಂದ್ರವಾಗಿಟ್ಟುಕೊಂಡು ಬೆಳೆದಾಗ ಹಳ್ಳಿಯ ಗಟ್ಟಿತನ ಉಳಕೊಳ್ಳುತ್ತದೆ. ಹಳ್ಳಿ ನಗರೀಕರಣವಾದಂತೆ ನಗರಕ್ಕೆ ಕೊಡಲು ಬೇಕಾದ ಸಂಗತಿಗಳನ್ನು ಅದು ಕಳಕೊಂಡಂತೆ. ಹಳ್ಳಿಯ ಗಟ್ಟಿತನ ಇರುವುದು ಹಳ್ಳಿಯಾಗೇ ಇರುವುದರಲ್ಲಿ. ಹಳ್ಳಿಯಾಗೇ ಬೆಳೆಯುವುದರಲ್ಲಿ. ಹಳ್ಳಿಯಾಗೇ ಇರುವುದು, ಹಳ್ಳಿಯಾಗೇ ಬೆಳೆಯುವುದು ಎಂಬುದನ್ನು ಅರ್ಥೈಸಿಕೊಳ್ಳಲು ದೃಷ್ಟಾಂತಕ್ಕಾಗಿ ಕೃಷಿಕಾರ್ಯವನ್ನು ಅವಲೋಕಿಸೋಣ. ಕೃಷಿಯಿಲ್ಲದ ಹಳ್ಳಿಯನ್ನು ಕಲ್ಪಿಸಿಕೊಳ್ಳಲಾಗದು. ಹಳ್ಳಿ ಜೈವಿಕ ಬದುಕಿನ ಮೂಲವೆನಿಸಿಕೊಳ್ಳುವುದು ಕೃಷಿಯಿಂದಾಗಿ. ಆಹಾರದ ಬೆಳೆ ಬೆಳೆಯುವ ಕೃಷಿ. ಹಿಂದೆ ಕೃಷಿ ಎಂದರೆ ಆಹಾರದ ಬೆಳೆಯೇ ಆಗಿತ್ತು. ಕೃಷಿಕಾರ್ಯದ ಹುಟ್ಟು ಆಹಾರವನ್ನು ಬೆಳೆಯುವುದಕ್ಕಾಗಿಯೇ ಆಯಿತು. ವಾಣಿಜ್ಯ ಬೆಳೆ ತೀರಾ ಗೌಣವಾಗಿತ್ತು. ಕೃಷಿ, ಎಂದರೆ ಆಹಾರ ಬೆಳೆಯುವುದು ರೈತನ ಬದುಕಾಗಿತ್ತು. ರೈತನನ್ನು ಆತನ ಬದುಕಿನಿಂದ ಕದಲಿಸಲು ಪ್ರಪಂಚದ ಯಾವುದೇ ಶಕ್ತಿಗೂ ಅಸಾಧ್ಯವಿತ್ತು. ಅವನಿಗೆ ಆ ಕೃಷಿಯಲ್ಲಿ ನಷ್ಟವಾಗಲಿ, ಸೋಲಾಗಲಿ ಅಥವಾ ಹಾನಿಯೇ ಆಗಲಿ, ಎದೆಗುಂದದೆ, ಬಂದುದೆಲ್ಲವನ್ನೂ ದೇವರೊಡ್ಡಿದ ಪರೀಕ್ಷೆಯೆಂದು ಭಾವಿಸಿ, ಅದರಲ್ಲಿ ಉತ್ತಮವಾಗಿ ತೇರ್ಗಡೆಯಾಗಲು ಸರ್ವಶಕ್ತಿಯನ್ನು ಹಾಕಿ ಕೃಷಿಯನ್ನು ಮಾಡಲಿಕ್ಕೇ ಬೇಕು ಎಂದು ಛಲಗೈದು ಮಾಡುತ್ತಿದ್ದ. 'ಕೃಷಿಗೈಯದೆ ಹೊಲವನ್ನು ಪಾಳುಬಿಟ್ಟರೆ ಪಾಪ' ಎಂಬ ಭಾವ ಇತ್ತು. ಈ ಭಾವವನ್ನು ಬೆಳೆಸಿದ್ದು ಅಂಥ ಗಟ್ಟಿತನವುಳ್ಳ ಕೃಷಿಕರೇ. ಇಂಥ ಗಟ್ಟಿತನವುಳ್ಳ ರೈತನನ್ನೇ 'ನೇಗಿಲ ಯೋಗಿ' ಎಂದರು ಕುವೆಂಪು. ರಾಜರು ಬರಲಿ, ಹೋಗಲಿ; ರಾಜ್ಯಗಳು ಅಳಿಯಲಿ, ಹೊಸದು ಉದಿಸಲಿ; ಲಾಭವೇ ಬರಲಿ, ನಷ್ಟವೇ ಉಂಟಾಗಲಿ; ಈ ನೇಗಿಲಯೋಗಿ ಕೃಷಿ ಮಾಡುವುದನ್ನು ಬಿಡುವುದೇ ಇಲ್ಲ. ಆಹಾರದ ಬೆಳೆ ಮಾತ್ರ ಬೆಳೆಯುತ್ತಾನೆ ಮತ್ತು ನಿಷ್ಕಾಮ ಭಾವದಿಂದ ಬೆಳೆ ಬೆಳೆಯುತ್ತಾನೆ ಎಂಬೆರಡೂ ಧ್ವನಿ 'ನೇಗಿಲ ಯೋಗಿ' ಶಬ್ದದಲ್ಲಿ ನಮಗೆ ಸ್ಪಷ್ಟವಾಗಿ ಕೇಳಿಸುತ್ತಿದೆ.

ಗೀತೋಪದೇಶದ ಕರ್ಮಯೋಗ ಇಲ್ಲಿ ನೆನಪಾಗುತ್ತದೆ. ಸ್ವಭಾವಕ್ಕೆ ಸಂಬಂಧಿಸಿದ ಕರ್ಮವನ್ನು ಯಾವುದೇ ಫಲಾಪೇಕ್ಷೆ ಇಲ್ಲದೆ ಮಾಡೆನ್ನುತ್ತದೆ ಕರ್ಮಯೋಗ. ಪ್ರಸ್ತುತ ಸನ್ನಿವೇಶದಲ್ಲಿ ಸ್ವಧರ್ಮವನ್ನು ಸ್ವಂತ ವಿವೇಚನೆಗೇ ಬಿಡುವುದೊಳಿತು. ಕರ್ಮವನ್ನು ಫಲಾಪೇಕ್ಷೆ ಇಲ್ಲದೆ ಮಾಡಬೇಕೆನ್ನುವುದು ಇಂದಿನ

ಸನ್ನಿವೇಶದಲ್ಲಂತೂ ಆ ಕರ್ಮಕ್ಕೆ ಸಲ್ಲಿಸುವ ಅತಿ ದೊಡ್ಡ ನ್ಯಾಯ ಅನ್ನಿಸುತ್ತದೆ. ಅದು ಹೇಗೆಂದರೆ: ನೋಡಿ, ಯಾವುದೇ ಕರ್ಮಕ್ಕೆ ಫಲ ಇದ್ದೇ ಇದೆ. ಕರ್ಮ ಮಾಡುತ್ತ ಮಾಡುತ್ತ, ಸಿಗುವ ಫಲದ ನಿರೀಕ್ಷೆ ಹೆಚ್ಚಾಗುತ್ತ ಹೋಗುತ್ತದೆ. ಕರ್ಮದ ಬಗೆಗಿನ ಕರ್ಮ ಆಗ್ರಹ ಫಲದ ಕಡೆಗೆ ಕ್ರಮೇಣ ಹೊರಳುತ್ತದೆ. ಕರ್ಮದಿಂದ ಫಲ ಬಂತು ಎಂಬ ವಾಸ್ತವ ಮರೆಯಾಗಿ ಫಲಕ್ಕಾಗಿ ಕರ್ಮ ಎಂಬ ಅನಾದರ್ಶ ಮುನ್ನೆಲೆಗೆ ಬರುತ್ತದೆ. ಬೇರೊಂದು ಕರ್ಮದಿಂದ ಆರ್ಥಿಕ ಫಲ ಸಿಗುವುದಾದರೆ ಆಗ ಈ ಅನಾದರ್ಶ ಕರ್ಮಾಂತರಕ್ಕೆ ಪ್ರೇರೇಪಿಸುತ್ತದೆ. ಆಹಾರದ ಬೆಳೆ ಬೆಳೆಯುವುದರಿಂದ ಸಿಗುವ ಬೆಳೆಯ ಆರ್ಥಿಕ ಬೆಲೆಯ ಕಡೆಗೇ ಗಮನ ಹೋದರೆ, ಆಗ ಆರ್ಥಿಕ ಬೆಲೆ ಹೆಚ್ಚಿಸಿಕೊಳ್ಳುವುದೇ ಉದ್ದೇಶವಾಗಿ ರೈತ ಅಧಿಕ ಬೆಳೆ ಬೆಳೆಯುವುದಕ್ಕಾಗಿ ರಾಸಾಯನಿಕ-ಕೀಟನಾಶಕಗಳ ಮೊರೆ ಹೊಗುತ್ತಾನೆ; ಯಾಂತ್ರಿಕತೆಗೆ ಮನಸ್ಸು ಮಾಡುತ್ತಾನೆ; ಕ್ರಮೇಣ ವಾಣಿಜ್ಯ ಬೆಳೆಗೆ ಶರಣುಹೋಗುತ್ತಾನೆ. ಅಧಿಕ ಬೆಲೆ ಬರುವುದಾದರೆ ಜಮೀನಿನ ಮಾರಾಟಕ್ಕೂ ಸಿದ್ಧನಾಗುತ್ತಾನೆ. ಆಹಾರದ ಬೆಳೆ ಬೆಳೆವ ಜಮೀನಿನಲ್ಲಿ ಮನೆ-ಕಟ್ಟಡ, ರಸ್ತೆ, ಕಾರ್ಖಾನೆಗಳು ಎದ್ದುನಿಲ್ಲುವುದಕ್ಕೆ ಸಹರ್ಷ ಕಾರಣನಾಗುತ್ತಾನೆ.

ಫಲವೇ ಮುಖ್ಯ ಅಂದಾಗ ಕೇವಲ ಕರ್ಮದ ನಾಶ ಮಾತ್ರ ನಡೆಯುವುದಿಲ್ಲ; ಯಾವುದರ ನಾಶಕ್ಕೂ, ಅಂತಿಮವಾಗಿ ಆತ್ಮನಾಶಕ್ಕೂ ಹೇಸದ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಹಾಗಾಗಿಯೇ ನೀರು, ಆಹಾರ ಇತ್ಯಾದಿ ಅತಿ ಅನಿವಾರ್ಯ ಪರಿಕರಗಳನ್ನು ಮಲಿನಗೊಳಿಸುತ್ತಿದ್ದೇವೆ, ವಿಷಯುಕ್ತಗೊಳಿಸುತ್ತಿದ್ದೇವೆ.

ಸುಖದ ಹುಡುಕಾಟ ಲಾಗಾಯ್ತಿನಿಂದ ನಡೆದಿದೆ. ಸುಖ ಯಾರಿಗೆ ಬೇಡ? ಯಾವುದಕ್ಕೆ ಬೇಡ? ನೇರ ಬೆಳೆವ ತೆಂಗು-ಕಂಗಿನಂಥ ಮರಗಳೂ ತಮ್ಮ ಮೇಲೆ ಬೀಳುವ ಪಕ್ಕದ ಮರಗಳ ನೆರಳನ್ನು ಸಹಿಸಲಾರದೆ ಬೆಳಕನ್ನರಸುತ್ತ, ಬೆಳಕನ್ನರಸುವುದರಲ್ಲೇ ಬೆಳಕಿನಲ್ಲಿರುವುದರಲ್ಲೇ ಸುಖವನ್ನು ಕಾಣುತ್ತ ಸ್ವೇಚ್ಛೆಯಾಗಿ ಬೆಳೆಯುತ್ತವೆ. ಈ ಅತಂತ್ರ ಸ್ಥಿತಿಯಲ್ಲಿ ಬದುಕಿಡೀ ಇರಬೇಕಾಗಿ ಬರುವುದು ಅವಕ್ಕೆ ಶ್ರಮವೇ. ಸುಖಕ್ಕಾಗಿ ಇವು ಇಂಥ ಶ್ರಮಕ್ಕೆ ಸಿದ್ಧ. ಮನುಷ್ಯ ಗೈವ ಯೋಜಿತ ಭಾರೀ ಸುರಕ್ಷಾ ವ್ಯವಸ್ಥೆಯನ್ನು ಭೇದಿಸಿಯೂ ಸಿಹಿ ಪದಾರ್ಥವಿರುವಲ್ಲಿ ಇರುವೆಗಳು ಹಾಜರಾಗುತ್ತವೆ. ಮನುಷ್ಯನಿಗೆ ಸೋಜಿಗವೆನಿಸುವ ಇಂಥ ಸಾಹಸವನ್ನು ಮಾಡಲು ಅವಕ್ಕೆ ಪ್ರೇರಣೆ ಸಿಹಿಯ ಸುಖ. ಉಣ್ಣುತ್ತಿರುವ ನಾಯಿಗೆ ಯಾವುದೇ ಬಗೆಯಲ್ಲಿ ಅಡ್ಡಿ ಪಡಿಸಿದರೆ ಅದು ತನ್ನ ಯಜಮಾನ ಎಂಬುದನ್ನೂ ಗಣನೆಗೆ ತೆಗೆದುಕೊಳ್ಳದೆ ಕಚ್ಚಿಬಿಡುವ ಅಪಾಯ ಇರುತ್ತದೆ. ಉಣ್ಣುವ ಸುಖಕ್ಕಾಗಿ ನಾಯಿ ತನ್ನ ಮೂಲ ಸ್ವಭಾವದ ಸ್ವಾಮಿನಿಷ್ಠೆಯನ್ನೇ ಕ್ಷಣಕಾಲಕ್ಕಾದರೂ ಪಕ್ಕಕ್ಕಿರಿಸಲು ತಯಾರಾಗುತ್ತದೆ. ಆಹಾರ ನಿದ್ದೆ ಮೈಥುನಾದಿ ಸಂಗತಿಗಳೇ ಪ್ರಾಣಿಪ್ರಪಂಚಕ್ಕೆ ಸುಖದ ಪರಿಕರಗಳು. ಮನುಷ್ಯ ತನ್ನನ್ನು ಪ್ರಾಣಿಗಳಿಗಿಂತ ಭಿನ್ನ ಎಂದು ಸಮರ್ಥಿಸಿಕೊಳ್ಳುತ್ತಿರುತ್ತಾನೆ. ಯಾವುದರಲ್ಲಿ ಭಿನ್ನ ಎಂಬುದರಲ್ಲಿ ಮಾತ್ರ ಗೊಂದಲವಿದ್ದಂತಿದೆ. ಬಹುಶಃ ಪಶ್ಚಿಮದ ಚಿಂತನೆಯ ಘಾಟು ಇರಬೇಕು; ತಾನು ಮಾತಿನಿಂದಾಗಿ ಪ್ರಾಣಿಗಳಿಗಿಂತ ಭಿನ್ನ ಎಂಬ ತರ್ಕವನ್ನು ಒಡ್ಡುತ್ತಾನೆ. ಕೆಲವೊಮ್ಮೆ ಬುದ್ಧಿಯಿಂದಾಗಿ ತಾನವುಗಳಿಗಿಂತ

ಬೇರೆ ಎಂಬ ತರ್ಕ. ಯೋಚಿಸುವ ಸಾಮರ್ಥ್ಯವೇ ತನ್ನನ್ನು ಪ್ರಾಣಿಪ್ರಪಂಚದಿಂದ ಭಿನ್ನವಾಗಿಸಿದೆ, ಪ್ರಾಣಿಗಳಿಗಿಂತ ಶ್ರೇಷ್ಠವಾಗಿಸಿದೆ ಎಂಬ ತರ್ಕವನ್ನೂ ಇನ್ನು ಕೆಲವೊಮ್ಮೆ ಆತ ಮುಂದಿಡುತ್ತಾನೆ. ಭಿನ್ನತೆಗೆ ಮತ್ತು ಶ್ರೇಷ್ಠತೆಗೆ ಒಂದಲ್ಲ ಒಂದು ವಿಧದ ಇಂದ್ರಿಯ ಸಾಮರ್ಥ್ಯವೇ ಕಾರಣ ಎಂಬುದಿಲ್ಲಿ ವ್ಯಕ್ತವಾಗಿದೆ. ಮನುಷ್ಯ ತಾನು ಇಂದ್ರಿಯ ಸಾಮರ್ಥ್ಯದಿಂದಾಗಿ ಭಿನ್ನ ಎನ್ನುತ್ತಲೇ, ಇಂದ್ರಿಯಗಳಿಗಿಂತ ಭಿನ್ನವಲ್ಲ ಎಂದೂ ಹೇಳಿದಂತಾಯಿತು. ಇದರ ಮೂಲಕ ಆತ ಇಂದ್ರಿಯಗಳನ್ನು ಕೃತಜ್ಞತೆಯಿಂದ ಕಂಡದ್ದೋ ಅಥವಾ ತನ್ನ ಮೇಲಿನ ಇಂದ್ರಿಯಗಳ ಶ್ರೇಷ್ಠತೆಯನ್ನು ಸಾರಿದ್ದೋ? ಎರಡೂ ಬೇಕಾಗಿರಲಿಲ್ಲ ಎಂಬುದು ಬೇರೆ ಮಾತು. ನಿಜಕ್ಕಾದರೆ, ಇಂದ್ರಿಯಸಾಮರ್ಥ್ಯವನ್ನು ಎಷ್ಟು ಬಳಸಿದೆ ಎಂಬುದರಲ್ಲಲ್ಲ, ಯಾಕಾಗಿ ಬಳಸಿದೆ ಎಂಬುದರಲ್ಲಿ ಮನುಷ್ಯ ಭಿನ್ನತೆಯನ್ನು ಕಾಣಹೊರಡಬೇಕಿತ್ತು, ಕಾಣಲೇಬೇಕೆಂದಾದರೆ. ಯಾಕೆಂದರೆ, ತಾನು ಸೃಷ್ಟಿಯಲ್ಲಿ ಭಿನ್ನ, ವಿಶೇಷ, ಶ್ರೇಷ್ಠ ಎಂದುಕೊಳ್ಳುವುದೇ ಒಂದು ಅನಾರೋಗ್ಯಕರ ಮನಃಸ್ಥಿತಿ. ಇರಲಿ. ಇಂದ್ರಿಯಸಾಮರ್ಥ್ಯವನ್ನು ಯಾಕಾಗಿ ಬಳಸಿದೆ ಎಂಬ ಪ್ರಶ್ನೆ ಮೌಲ್ಯಸಂಬಂಧಿಯಾದದ್ದು. ಅದನ್ನೆಷ್ಟು ಬಳಸಿದೆ ಎಂಬ ಮಾತು ತಳಕುಹಾಕಿಕೊಳ್ಳುವುದು ಕೊನೆಗೂ ಆಹಾರ ನಿದ್ರಾದಿ ಸಂಗತಿಗಳಿಗೇ. ಮತ್ತವು ಪ್ರಾಣಿಪ್ರಪಂಚದಿಂದ ಮನುಷ್ಯನನ್ನು ಭಿನ್ನವಾಗಿಸದ ಸಂಗತಿಗಳು. ಇಂದ್ರಿಯಸಾಮರ್ಥ್ಯವೆಷ್ಟು ಬಳಸಿದೆ ಎಂಬ ಪ್ರಶ್ನೆ ಮತ್ತದರ ಉತ್ತರಗಳೆರಡೂ ಅಹಂಕಾರಭಾವದಿಂದ ಹೊರಟವುಗಳು. ಯಾಕಾಗಿ ಬಳಸಿದೆ ಎಂಬ ಪ್ರಶ್ನೆ ಅವಲೋಕನ ಇಚ್ಛೆಯುಳ್ಳದ್ದು. ಈ ಪ್ರಶ್ನೆಯ ಮುಂದೆ, ಹಾಗಾಗಿ, ಆಹಾರ ನಿದ್ರಾದಿಗಳು ಸಂಕೋಚಕ್ಕೊಳಗಾಗಿ ಗೌಣವಾಗುತ್ತವೆ. ಸ್ವಕಾಮವನ್ನು ಸಾಧಿಸುವ ಇಂದ್ರಿಯಸಾಮರ್ಥ್ಯ ಗೌಣವಾದಾಗಲೇ, ಸಂಕೋಚಕ್ಕೊಳಗಾದಾಗಲೇ ಮೌಲ್ಯಕ್ಕೆ ಎಡೆಯಾಗುವುದು. ಮೌಲ್ಯಕ್ಕೆ ಇರುವ ಹಲವು ಮುಖಗಳಲ್ಲಿ ಮುಖ್ಯವಾದ ಎರಡನ್ನು ಉಲ್ಲೇಖಿಸುವುದಾರೆ ಒಂದು, ಸ್ವವ್ಯಕ್ತಿತ್ವ ಉತ್ಥಾನ; ಎರಡು, ಪರಹಿತಸಾಧನೆ. ಇವರಡನ್ನೂ ಆಗಗೊಡಲು ಸ್ವಕಾಮ ಗೌಣವಾಗಲೇಬೇಕು. ಸ್ವಕಾಮ ಒತ್ತಟ್ಟಿಗಿರಲಿ, ಧರ್ಮದಿಂದಾಗಿಯೇ ಮನುಷ್ಯ ಭಿನ್ನನೆನಿಸಿಕೊಳ್ಳುತ್ತಾನೆ ಎಂಬುದು ಶಾಸ್ತ್ರದ ಮಾತೂ ಹೌದು. ಅಂದರೆ ಈಗ ಒಟ್ಟಾರೆಯಾಗಿ ಏನಾಯಿತೆಂದರೆ, ಇಂದ್ರಿಯ ಸಾಮರ್ಥ್ಯದ ಕುರಿತ ಅಹಂಕಾರದಿಂದ ವ್ಯಕ್ತಿತ್ವಪತನ. ಇಂದ್ರಿಯ ಸಾಮರ್ಥ್ಯ ಕುರಿತ ಅವಲೋಕನದಿಂದ ಮೌಲ್ಯಸಾಧನೆ. ಇಂದ್ರಿಯಸಾಮರ್ಥ್ಯ ಕುರಿತ ಅಹಂಕಾರವೇ ಸುಖದ ಬೆನ್ನರಸುವ ದ್ರವ್ಯ. ಸುಖಕ್ಕಾಗಿ ಏನೂ ಮಾಡಲು ಸಿದ್ಧವಾಗುವ ದ್ರವ್ಯ. ಸುಖದ ಮುಂದೆ ಸಂಕೋಚಕ್ಕೆ ನಾಚಿಕೆಗೆ ಕೆಲಸವಿಲ್ಲ. ಮೌಲ್ಯ ಅತ್ತ ಸುಳಿಯುವುದೂ ಇಲ್ಲ. ಮೌಲ್ಯವೇ ಬದುಕಾದಾಗ ಇಂದ್ರಿಯ ಸಾಮರ್ಥ್ಯ ಗುಲಾಮನಂತೆ, ಮೌಲ್ಯದ ಸೇವಕನಂತೆ ಸಾರ್ಥಕ ದುಡಿಮೆ ಗೈಯುತ್ತದೆ. ಹಣ ಇತ್ಯಾದಿ ಇಂದ್ರಿಯಗಳನ್ನು ಆಕರ್ಷಿಸುವ ಸಂಗತಿಗಳಾವುವೂ ಮೌಲ್ಯಸೇವಕರಾದ ಇಂದ್ರಿಯಗಳನ್ನು ಸೆಳೆಯವು. ಆಗ ಮೌಲ್ಯಕ್ಕಾಗಿ ದುಡಿಯುವುದರಲ್ಲೇ ಇಂದ್ರಿಯಗಳಿಗೆ ಸುಖ. ಇದು ಸುಖದ ಉನ್ನತ ಸ್ಥಿತಿ. ಇಲ್ಲೂ, ಅಂದರೆ ಮೌಲ್ಯಕ್ಕಾಗಿನ ಇಂದ್ರಿಯಗಳ ದುಡಿಮೆಯಲ್ಲೂ, ಹಣ ಇತ್ಯಾದಿ ಆಕರ್ಷಕವೆಂದು ತಾರ್ಕಿಕ ಪ್ರಪಂಚಕ್ಕೆ ಅನಿಸುವ ಫಲಗಳು ಲಭ್ಯವಾಗುತ್ತವೆ.

ಆದರೆ ಈ ಫಲಗಳಿಗಾಗಿ ಹಪಾಪಿಕೆ ಇಲ್ಲ. ಯಾಕೆಂದರೆ ಇಂದ್ರಿಯಗಳ ಉದ್ದೇಶ ಮೌಲ್ಯ. ಮೌಲ್ಯವನ್ನು ಸಾಧಿಸುವ ಕ್ರಿಯೆಯಲ್ಲಿ ಸಂಪತ್ತು ಮತ್ತಿತರ ಸ್ವರೂಪದ ಫಲಗಳು ಬರುತ್ತವೆ. ಅವು ಉಪಫಲಗಳಷ್ಟೇ. ಮುಖ್ಯ ಫಲವೇನಿದ್ದರೂ ಮೌಲ್ಯವೇ. ಕೃಷಿ ಅನ್ನುವುದು ಮೌಲ್ಯ. ಅದು ಮಣ್ಣಿನೊಂದಿಗೆ ಜೀವಂತಿಕೆಯಿಂದ ಬದುಕುವ ಒಂದು ದಾರಿ. ಮಣ್ಣಿನೊಂದಿಗೆ ಕೃಷಿಕನಿಗೆ ಒಂದು ಸಾವಯವ ಸಂಬಂಧ, ಒಂದು ಬೇರ್ಪಡಿಸಲಾಗದ ಭಾವಸಂಬಂಧ ಬೆಳೆದುಬಿಡುತ್ತದೆ. ಇಂಥ ಸಂಬಂಧ ಬೆಳೆದ ಅನುಭವದಿಂದಲೇ ಇರಬೇಕು ತಾಯ್ನಾಡು, ಮಾತೃಭೂಮಿ ಇತ್ಯಾದಿ ಭಾವಸಂಪನ್ನ ಶಬ್ದಗಳು ಹುಟ್ಟಿದ್ದು. ಮೌಲ್ಯಕ್ಕೆ ಬೆಲೆ ಎಂಬ ಒಂದು ಅರ್ಥವೂ ಇದೆ. ನಿಜಕ್ಕಾದರೆ ಮೌಲ್ಯವೆಂದರೆ ಬೆಲೆ ಕಟ್ಟಲಾಗದ ಬೆಲೆ. ಬೆಲೆಕಟ್ಟಹೊರಟರೆ ಮೌಲ್ಯ ಇಲ್ಲವಾದಂತೆ. ಮೂಲವನ್ನು ಕುರಿತ ನಿಷ್ಠೆ ಹೊರಟಾಗಲೇ ಬೆಲೆಕಟ್ಟಹೊರಡಲು ಸಾಧ್ಯ. ಅದು ಮೌಲ್ಯಕ್ಕೆ ನಿಷ್ಠೆ ತಪ್ಪಿದ ಸ್ಥಿತಿ. ಕೃಷಿಕ ತನ್ನ ಕೃಷಿಯನ್ನು ಹಣದಿಂದ ತೂಗಹೊರಟರೆ ಆಗುವ ದುರಂತ ಇದು. ಇಂದ್ರಿಯಪ್ರಪಂಚ ಸೇವಕನಾಗುವ ಬದಲು ಮಾಲಿಕನಾದ ಕಥೆ ಇದು.

ಮೌಲ್ಯ ಎಂದೂ ಬದಲಾಗಬಾರದ ಬದುಕನ್ನು – ಬದುಕಿನುದ್ದೇಶವನ್ನು ನಿರ್ದೇಶಿಸುವ ಒಂದು ದ್ರವ್ಯ. ಮೌಲ್ಯ ಬದಲಾಗುವುದು ಎನ್ನುವುದು ಗೂಟ ಅಲ್ಲಾಡುವುದಕ್ಕೆ, ಅಡಿಪಾಯ ಕುಸಿಯುವುದಕ್ಕೆ ಸಮನಾದ ಕ್ರಿಯೆ. ಮೌಲ್ಯವನ್ನು ಸಾಧಿಸುವ ಪರಿಕರಗಳನ್ನು ಸನ್ನಿವೇಶ – ಸಂದರ್ಭಗಳಿಗೆ ತಕ್ಕಂತೆ ಬದಲಾದರೆ ಅಡ್ಡಿ–ಆಕ್ಷೇಪಗಳಿರದು. ಆದರೆ ಇದು ಮೌಲ್ಯಕ್ಕೆ ನಿಷ್ಠೆಯನ್ನು ಹೊಂದಿದ ಬದಲಾವಣೆ ಆಗಿರಬೇಕು. ಬದಲಾದ ಪರಿಕರ ಬದಲಾಗದ ಮೌಲ್ಯವನ್ನೇ ಸಾಧಿಸುವಂತಿರಬೇಕು. ಹಳ್ಳಿ ಬದಲಾಗಬಾರದು ಎನ್ನುವುದು ಮೌಲ್ಯದ ಹಿನ್ನೆಲೆಯಲ್ಲಿ. ಬದಲಾಗಬೇಕು ಎನ್ನುವುದು ಪರಿಕರಗಳ ಹಿನ್ನೆಲೆಯಲ್ಲಿ. ಈ ಮಾತು ದಿಲ್ಲಿಗೂ ಅನ್ವಯವಾಗುವಂಥದ್ದೇ. ಆದರೆ, ವಿನ್ಯಾಸದಲ್ಲೇ, ಹಳ್ಳಿ ಮೌಲ್ಯ ಪ್ರಧಾನವಾಗಿದೆ; ದಿಲ್ಲಿ ಪರಿಕರ ಪ್ರಧಾನವಾಗಿದೆ. ಕೃಷಿಯನ್ನು ಮೌಲ್ಯವಾಗಿ ಸ್ವೀಕರಿಸಿದಾಗ ಕೃಷಿಭೂಮಿ ತಾಯಿಯ ಸ್ಥಾನವನ್ನೇರುತ್ತದೆ. ಪಾಳೂ ಬೀಳದೆ, ಪರಭಾರೆಯೂ ಆಗದೆ ಜೀವಪೋಷಕವಾಗಿ ವ್ಯಾವಹಾರಿಕ ನೆಲೆಗಟ್ಟಲ್ಲೂ ತಾಯ ಸ್ಥಾನವನ್ನಲಂಕರಿಸುತ್ತದೆ. ಅದೇ ಕೃಷಿಯನ್ನು ಪರಿಕರವಾಗಿ ಭಾವಿಸಿದಾಗ ಅನಾಯಾಸವಾಗಿ ಆರ್ಥಿಕ ವಲಯವೆನಿಸಿ ಉದ್ಯಮಪತಿಗಳ, ವಿದೇಶೀಯರ ಭೋಗ್ಯಕ್ಕೋ ಕೈಗೋ ಹೋಗುವುದಷ್ಟೆ ಅಲ್ಲ, ಸಮಾಜ ದ್ರೋಹಿಗಳ ಅರಾಷ್ಟ್ರೀಯರ ಕೈಗೂ ಅಷ್ಟೇ ಅನಾಯಾಸವಾಗಿ ಹೋಗುತ್ತದೆ. ವಿಶೇಷವಾಗಿ ಕರಾವಳಿ ಮತ್ತು ಮಲೆನಾಡುಗಳಲ್ಲಿನ ಕೃಷಿಭೂಮಿ ಇಂದು ಈ ಅಪಾಯವನ್ನು ಎದುರು ಹಾಕಿಕೊಂಡಿದೆ. ಕೃಷಿ ಮೌಲ್ಯವಾಗಿದ್ದರಿಂದ ಕೃಷಿ ಆಧಾರಿತವಾಗಿ ಹಲವು ಮೌಲ್ಯಗಳು ಅಭಿವ್ಯಕ್ತಿ ಪಡೆದಿದ್ದವು. ದೃಷ್ಟಾಂತಕ್ಕೆ ಹೇಳುವುದಾದರೆ ಉತ್ತರಕನ್ನಡ ಜಿಲ್ಲೆಯ ಆಲೆಮನೆ. ಕಬ್ಬಿನಿಂದ ಬೆಲ್ಲ ತೆಗೆವ ಆಲೆಮನೆಯ ದಿನಗಳು ಕೇವಲ ಮನೆ ಯಜಮಾನ ಅಥವಾ ಸಂಬಂಧಿತ ಮನೆಗಷ್ಟೆ ಹಬ್ಬವಲ್ಲ, ಇಡಿಯ ಊರಿಗೇ ಹಬ್ಬ ಇದ್ದಂತೆ. ಅದಕ್ಕೆ ನೆಂಟರಿಷ್ಟರನ್ನೆಲ್ಲ ಮದುವೆ ಮನೆಗೆಂಬಂತೆ ಆಮಂತ್ರಿಸುತ್ತಾರೆ. ದಾರಿಹೋಕ ಅಪರಿಚಿತರಿಗೂ ಅಲ್ಲಿ ಆತ್ಮೀಯ ಆತಿಥ್ಯ ನಡೆಯುತ್ತದೆ. ಆರ್ಥಿಕ

ಕಾರಣಕ್ಕಾಗಿ ಇಂದು ಈ ಆಲೆಮನೆ ಸಂಸ್ಕೃತಿ ಕ್ಷೀಣಿಸುತ್ತಿದೆ. ಹೊಲಗದ್ದೆಗಳಲ್ಲಿ ಸಮೂಹದಲ್ಲಿ ಭತ್ತದ ಕೃಷಿಕಾರ್ಯ ಮಾಡುತ್ತಲೇ ಅನೇಕ ಕಥೆ-ಕಾವ್ಯಗಳು ಪದ್ಯ-ನುಡಿಗಟ್ಟುಗಳು ಹುಟ್ಟುತ್ತಿದ್ದವು. ಅವುಗಳಲ್ಲಿ ಗಟ್ಟಿ ಇದ್ದದ್ದು ಉಳಿದು, ಉಳಿದೆಡೆಗೂ ಹರಡಿ ಕೆಲವೊಮ್ಮೆ ಕೆಲವೊಂದು ಪರಿಷ್ಕಾರಗೊಂಡು ಜಾನಪದ ಸಾಹಿತ್ಯವೆಂದು ಪರಿಗಣಿತವಾಗಿ ಪೀಳಿಗೆಪೀಳಿಗೆ ದಾಟಿ ಬಂದದ್ದಿದೆ. ಮೌಲ್ಯವಾಗಿ ದಾರಿ ತೋರಿದ್ದಿದೆ. ಗಾದೆ ಮಾತಾಗಿ ಜನಸಾಮಾನ್ಯರ ವೇದವೆನಿಸಿದ್ದಿದೆ. ಮನೆಯಲ್ಲಿ ನಡೆವ ಆತಿಥ್ಯದಿಂದ ತೊಡಗಿ ಹಬ್ಬ ಹರಿದಿನಗಳ ಆಚರಣೆ ತನಕ ಎಲ್ಲದರಲ್ಲೂ ಮಹತ್ತ್ವದ್ದು ಕೃಷಿ. ಒಂದು ಆರ್ಥಿಕ ದೃಷ್ಟಿಕೋನವನ್ನು ಪಡೆಯುತ್ತಲೇ ಇವೆಲ್ಲವೂ ತೊಂದರೆ ಗೊಳಗಾಗುವುದು ಸಹಜ. ಈ ತೊಂದರೆಯನ್ನು ಇಂದು ಹಳ್ಳಿಗಳಲ್ಲಿ ಕಾಣಲು ಸಾಧ್ಯ. ಹಳ್ಳಿ ಬದಲಾಗುತ್ತದೆ ಎಂಬ ಧ್ವನಿ ಆತಂಕದಿಂದ ಬರುತ್ತಿರುವುದು ಬಹುತೇಕ ಈ ನೆಲೆಯಲ್ಲೇ.

ಈ ಬದಲಾವಣೆ ಆಧುನಿಕ ನಾಗರಿಕತೆಯಿಂದ ಪ್ರೇರಿತವಾದದ್ದು. ವಿಜ್ಞಾನಕ್ರಾಂತಿಯಿಂದುಂಟಾದ ನಾಗರಿಕತೆಯಿದು. ನಮಗಿದರ ಸಂಪರ್ಕ ಯೂರೋಪಿನಿಂದ, ಮುಖ್ಯವಾಗಿ ಬ್ರಿಟಿಷರಿಂದ. ಈ ನಾಗರಿಕತೆ ನಗರಕೇಂದ್ರಿತವಾದುದು. ಅದು ಯಾವುದೇ ಸೃಷ್ಟಿ-ರಚನೆ-ವಿನ್ಯಾಸಗಳನ್ನು ನಗರಕ್ಕನುಕೂಲವಾಗುವಂತೆ ನೋಡಿಕೊಳ್ಳುತ್ತದೆ. ಬ್ರಿಟಿಷರ ಕಾರಣದಿಂದ, ನಾಗರಿಕತೆಯ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗದೆ ನಾವೂ ನಮ್ಮೆಲ್ಲ ನಿರ್ಮಾಣಗಳನ್ನೂ ವ್ಯವಸ್ಥೆಗಳನ್ನೂ ನಗರಕೇಂದ್ರಿತವಾಗಿಸಿದ್ದೇವೆ. ಇದರ ಒಂದು ಅಪಸವ್ಯ ಎಂದರೆ - ನಗರಗಳಂತಾಗಿಸಿದಾಗ ಹಳ್ಳಿಗಳ ಅಭಿವೃದ್ಧಿ ಎಂಬ ಸನ್ನಿವೇಶ ನಿರ್ಮಾಣವಾಗಿರುವುದು. ಈ ನಾಗರಿಕತೆ ಕಂಡುಕೊಂಡ ನಗರದ ವಿನ್ಯಾಸ ನಗರಕ್ಕೇ ಪೂರಕವಾಗಿಲ್ಲ. ಈ ವಿನ್ಯಾಸದಿಂದಾಗಿ ನಗರಗಳಲ್ಲಿ ಸಮಸ್ಯೆ ದಿನೇದಿನೇ ವೃದ್ಧಿಯಾಗುತ್ತಿದೆ. ಅಂಥಲ್ಲಿ ಹಳ್ಳಿಗಳನ್ನು ನಗರದಂತೆ ಮಾಡಹೊರಟರೆ ಇಲ್ಲದ ಸಮಸ್ಯೆ ಉಂಟಾಗಿಬಿಡುವ ಸನ್ನಿವೇಶವಷ್ಟೆ ಸೃಷ್ಟಿಯಾದೀತು. ನೆಮ್ಮದಿಯಿಂದಿದ್ದ ಹಳ್ಳಿಜನ ಅಭಿವೃದ್ಧಿಯಿಂದಾಗಿ ಕಂಗಾಲಾಗಿರುವ ಸ್ಥಿತಿ ಈಗ ನಿರ್ಮಾಣವಾಗಿದೆ. ಒಟ್ಟಿನಲ್ಲಿ ಈಗ ಹೀಗೆಂದುಕೊಳ್ಳಬಹುದು-ನಗರ, ನಾಗರಿಕತೆ, ಆರ್ಥಿಕ ಲಾಭ, ವಾಣಿಜ್ಯ ಬೆಳೆ, ಇಂದ್ರಿಯಸಾಮರ್ಥ್ಯದ ಕುರಿತ ಅಹಂಕಾರ ಇವೆಲ್ಲ ಒಂದೇ ಬುಟ್ಟಿಯಲ್ಲಿರುವ ಆತ್ಮೀಯ ಸಂಬಂಧಿಗಳು. ಹಳ್ಳಿ, ಮೌಲ್ಯ, ಆಹಾರದ ಬೆಳೆ, ಕೃಷಿ, ಆತಿಥ್ಯ, ಸೇವಕನಾಗಿರುವ ಇಂದ್ರಿಯ ಸಾಮರ್ಥ್ಯ ಇವು ಇನ್ನೊಂದು ಬುಟ್ಟಿಯಲ್ಲಿರುವ ಆತ್ಮೀಯ ಸಂಬಂಧಿಗಳು.

ಒಂದನೆಯ ಬುಟ್ಟಿಯಲ್ಲಿರುವವರನ್ನು ಎರಡನೆಯ ಬುಟ್ಟಿಯಲ್ಲಿರುವವರು ಹತೋಟಿಗೆ ತಂದುಕೊಂಡು ಉಪಯೋಗಿಸಹೊರಟರೆ ಇಬ್ಬರದ್ದೂ ಉತ್ಥಾನ. ಒಂದನೆಯ ಬುಟ್ಟಿಯಲ್ಲಿರುವವರು ಎರಡನೆಯ ಬುಟ್ಟಿಯಲ್ಲಿರುವವರನ್ನು ಹತೋಟಿಗೆ ತಗೊಂಡು ಬಳಸಹೊರಟರೆ ಇಬ್ಬರದ್ದೂ ಪತನ!

(ಸಾಭಾರ : ಉತ್ಥಾನ)

ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟಿನ 'ಹೊಸ ಜೀವನ ದಾರಿ ಕೇಂದ್ರ' ಸ್ಥಾಪಿತವಾದಾಗಿನಿಂದಲೂ ಅದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಹಂತದಲ್ಲಿ ಯುವಕರ ಆಕರ್ಷಣೆಯ ಕೇಂದ್ರವಾಗಿದೆ. ಅಲ್ಲಿಯ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾದ ಯುವಕರು ತಮ್ಮ ಜೀವನಕ್ಕೆ ಹೊಸ ಆಯಾಮ ಜೋಡಿಸಲು ಪ್ರಯತ್ನಿಸಿದ್ದಾರೆ. ಇಂಥ ಒಂದು ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನ ನಾಗಾರ್ಜುನ ಕಾಲೇಜಿನ ೨೧ ವಿದ್ಯಾರ್ಥಿನಿಯರು ಮತ್ತು ೯ ವಿದ್ಯಾರ್ಥಿಗಳು ಬಂದಿದ್ದರು. ಪರಿಸರ ಮತ್ತು ಗ್ರಾಮಜೀವನದ ಬಗ್ಗೆ ತಿಳುವಳಿಕೆ ಪಡೆಯಲು ಎರಡೂವರೆ ದಿನಗಳ ಕಾಲ ಶಿಬಿರ ನಡೆಸಿದರು. ತಾರೀಖಿನವರೆಗೆ ನಡೆಯಿತು. ಶಿಬಿರದಲ್ಲಿ ಕಾಲೇಜ್‌ನ ಪ್ರಾಂಶುಪಾಲರಾದ ಮನೋಹರ್ ಮತ್ತು ಮೂವರು ಅಧ್ಯಾಪಕರು ಇದ್ದರು. ಬೆಂಗಳೂರು ಬಳಿ ಇರುವ ಹೊಸೂರಿನಲ್ಲಿರುವ ಟಿ.ವಿ.ಎಸ್ ಸಂಸ್ಥೆಯ ಮಾಧ್ಯಮಿಕ ಶಾಲೆಯ ಮಕ್ಕಳು ಸಹ ಎರಡು ದಿನ ಶಿಬಿರ ನಡೆಸಿದರು.

ಬೆಂಗಳೂರಿನಲ್ಲಿರುವ ಎನ್.ಎಮ್.ಕೆ.ಆರ್.ವಿ ಮಹಿಳಾ ಕಾಲೇಜ್ ಸಭಾಂಗಣದಲ್ಲಿ ನಡೆದ ಶಾಶ್ವತೀ ಪ್ರಶಸ್ತಿಯ ಒಂದು ಅಂಗವಾದ ಗಾರ್ಗಿ ಪ್ರಸಸ್ತಿಯನ್ನು ೨೦೧೦-೧೧ನೇ ಸಾಲಿಗೆ ಶ್ರೀಮತಿ ಗಿರಿಜಾ ಕೌಲಗಿಯವರಿಗೆ ನೀಡಲಾಯಿತು. ಪ್ರಶಸ್ತಿ ಸ್ಮರಣ ಫಲಕದೊಂದಿಗೆ ಹತ್ತು ಸಾವಿರ ರುಪಾಯಿ ನಗದನ್ನು ಹೊಂದಿದೆ.

ದತ್ತು ಕೇಂದ್ರದ ಪೋಷಣೆಯಲ್ಲಿದ್ದ ಎರಡು ವರ್ಷದ ಶ್ರೀನಿವಾಸ ಎಂಬ ಮಗುವನ್ನು ದತ್ತು ಕೊಡಲಾಯಿತು. ದತ್ತು ಕೇಂದ್ರಕ್ಕೆ ಹೊಸದಾಗಿ ಬಂದ ಗಂಡು ಮಗುವೊಂದನ್ನು ತಕ್ಷಣದ ತುರ್ತು ಆರೋಗ್ಯದ ಅವಶ್ಯಕತೆಗಾಗಿ ಆಸ್ಪತ್ರೆಯೊಂದಕ್ಕೆ ಸೇರಿಸಲಾಯಿತು. ಮಗುವಿನ ಆರೋಗ್ಯ ಸುಧಾರಿಸಿದ ನಂತರ ಕೇಂದ್ರಕ್ಕೆ ಕರೆತರಲಾಯಿತು. ಮಗು ಜನಿಸಿ ಈಗ ನಾಲ್ಕು ವಾರಗಳಾಗಿವೆ.

ಟ್ರಸ್ಟಿನ ಅಭಿಮಾನಿ ಮಿತ್ರರಾದ ಬೆಂಗಳೂರಿನ ಕೆ.ಸುಬ್ಬರಾವ್ ಮತ್ತು ಬಂಧುಗಳು ಹಾಗೂ ಮೈಸೂರಿನ ಕೆ.ಆರ್.ಮೋಹನ್ ದಂಪತಿಗಳು ಟ್ರಸ್ಟಿಗೆ ಭೇಟಿಕೊಟ್ಟರು.

ಜನಪದ ನಿಲಯದ ಅಂತರಂಗದಲ್ಲಿ.. ೧೨೦

– *ಸುರೇಂದ್ರ ಕೌಲಗಿ*



ಜನಪದ ಸೇವಾ ಟ್ರಸ್ಟ್‌ನ ಕಾರ್ಯವ್ಯಾಪ್ತಿ ಇಡೀ ರಾಜ್ಯವೇ ಆಗಿದೆಯಾದರೂ ಅದರ ಪ್ರಾಪಂಚಿಕ ಇತಿಮಿತಿಗಳ ಕಾರಣದಿಂದಾಗಿ ಮಂಡ್ಯ ಜಿಲ್ಲೆಯ ಮೇಲುಕೋಟೆ ಗ್ರಾಮ ಮತ್ತು ಸುತ್ತಲಿನ ಪ್ರದೇಶಕ್ಕೆ ಸೀಮಿತವಾಗಿದೆ. ವೈಚಾರಿಕ ಮತ್ತು ತಾತ್ವಿಕ ಕಾರ್ಯಕ್ರಮಗಳಿಂದಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯವೂ ಆಗಿದೆ. ಇಷ್ಟು ವ್ಯಾಪ್ತಿಯುಳ್ಳ ಜನಪದ ಸೇವಾ ಟ್ರಸ್ಟಿನ ಪೂರ್ಣ ಸಮಯದ ಕಾರ್ಯದರ್ಶಿಯವರಿಗೆ ಮತ್ತು ಟ್ರಸ್ಟಿನ ಆಡಳಿತಾತ್ಮಕ ವ್ಯವಹಾರಗಳಿಗೆ ತನ್ನದೇ ಆದ ಕಟ್ಟಡವನ್ನಾಗಿ ಸದ್ಯದ ಮನೆ ಪಿ.ಆರ್.ದೇಶಿಕಾಚಾರ್ಯರವರಿಂದ ಖರೀದಿಸಲ್ಪಟ್ಟ ಮೇಲೆ ಆ ಮನೆ '**ಜನಪದ ನಿಲಯ**'ವೆಂದು ನಾಮಕರಣಗೊಂಡಿತು. ದೇಶದೆಲ್ಲೆಡೆಯಿಂದ ಹಾಗೂ ವಿದೇಶದ ಕೆಲವು ಅಭಿಮಾನಿ ಸ್ನೇಹಿತರಿಂದ ಸಂಗ್ರಹವಾಗಿದ್ದ ಹಣದಲ್ಲಿ ಮನೆಯನ್ನು ಕಂತುಗಳ ಪ್ರಕಾರ ಮೂರು ಲಕ್ಷ ರುಪಾಯಿಗಳಲ್ಲಿ ಖರೀದಿಸಲಾಯಿತು. ಜನಪದ ನಿಲಯವೆಂದು ನಾಮಕರಣಗೊಳ್ಳುವ ಮೊದಲೇ ಟ್ರಸ್ಟಿನ ಕಾರ್ಯದರ್ಶಿ ಈ ಮನೆಯಲ್ಲಿ ಇದ್ದುದ್ದರಿಂದ ಹಾಗೂ ವಿವಿಧ ಪ್ರಕಾರದ ರಚನಾತ್ಮಕ ಕಾರ್ಯಗಳು ಪ್ರಾರಂಭವಾದುದರಿಂದ ಜನಪದ ನಿಲಯಕ್ಕೆ ಭೇಟಿಕೊಡುವ ಅಭಿಮಾನಿಗಳು ಹೆಚ್ಚುತ್ತಲೇ ಹೋದರು.

ಈಗ ಜನಪದ ಸೇವಾ ಟ್ರಸ್ಟ್ ತನ್ನ ಅಸ್ತಿತ್ವದ ೫೪ ವರ್ಷಗಳನ್ನು ಮುಗಿಸಿ ೫೫ನೇ ವರ್ಷಕ್ಕೆ ಕಾಲಿಡುತ್ತಿರುವ ಸಂಸರ್ಭದಲ್ಲಿ ಜನಪದ ನಿಲಯಕ್ಕೆ ಒಂದಲ್ಲ ಒಂದು ಕಾರಣದಿಂದ ಭೇಟಿಕೊಟ್ಟ ಮಹನೀಯರನ್ನು ನೆನೆಯುವುದು ಅಗತ್ಯವೆನಿಸುತ್ತದೆ. ಅವರಲ್ಲಿ ಕೆಲವರು ಈಗ ಇರುವುದಿಲ್ಲವಾದರೂ ಅವರು ಪ್ರಾತಃಸ್ಮರಣೀಯರಾಗಿದ್ದಾರೆ ಮತ್ತು ಟ್ರಸ್ಟ್ ಅವರನ್ನು ಸದಾ ಕಾಲ ಕೃತಜ್ಞತೆಯಿಂದ ನೆನೆಯುತ್ತಲೇ ಇರುತ್ತದೆ. ಭೇಟಿ ಕೊಟ್ಟ ಅಂಥ ಮಹನೀಯರ ಹೆಸರುಗಳು ಈ ಕೆಳಗಿನಂತಿವೆ.

ಜನಪದ ಸೇವಾ ಟ್ರಸ್ಟ್ ಸ್ಥಾಪನೆಗೆ ಪ್ರೇರಣೆ ಕೊಟ್ಟ ಮತ್ತು ಮಾರ್ಗದರ್ಶಕರಾಗಿದ್ದ ಹಿರಿಯ ಗಾಂಧೀ ವಿಚಾರದ ವ್ಯಕ್ತಿ ಅರ್ಥಶಾಸ್ತ್ರಜ್ಞ ಪ್ರೊ॥ಬಿ.ಆರ್.ಪ್ರಾಣೇಶ್‌ರಾವ್ ಮತ್ತು ಅವರ ಪತ್ನಿ ಶ್ರೀಮತಿ ಸೇತುಸಾವಿತ್ರಿ; ಗಾಂಧೀ ಗ್ರಂಥಮಾಲೆಯಲ್ಲಿ ಸಂಪಾದಕರಾಗಿದ್ದ ಮತ್ತು ತುಮಕೂರು ಜಿಲ್ಲೆ ಚಿಕ್ಕನಾಯ್ಕನಹಳ್ಳಿಯಲ್ಲಿ ದೇಶೀಯ ವಿದ್ಯಾಪೀಠದ ಸಂಸ್ಥಾಪಕರು, ಸ್ವಾತಂತ್ರ ಹೋರಾಟಗಾರರು ಆಗಿದ್ದ ಶ್ರೀ ಜಿ.ವಿ.ನಾರಾಯಣಮೂರ್ತಿ; ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಪುರುಷೋತ್ತಮಾನಂದಜಿ (ಇವರು ಕರುಣಾಗೃಹದ ಮನೆಯ ಪ್ರವೇಶೋತ್ಸವವನ್ನು ನಡೆಸಿಕೊಟ್ಟರು); ಸ್ವಾಮಿ ಸುರೇಶಾನಂದಜಿ; ಸ್ವಾಮಿ ಜಗದಾತ್ಮಾನಂದಜಿ; ಅನ್ನಾ ಗೊಯೆರಾ–ಅಮೇರಿಕಾ; ಭಾರತೀಯ ತತ್ವಶಾಸ್ತ್ರ ಪ್ರಾಧ್ಯಾಪಕ ಮತ್ತು ಗಾಂಧೀಗ್ರಂಥಮಾಲೆಯ ಸಂಪಾದಕ ಮೈಸೂರಿನ ಶ್ರೀ ಎಮ್.ಯಾಮುನಾಚಾರ್ಯ; ಇಂಗ್ಲೆಂಡಿನ ಸಾರಾ ಹಾಬ್ಸನ್ ಮತ್ತು ಟೋನಿ ಮೇಯರ್(ಕರುಣಾಗೃಹದ ಬಗ್ಗೆ '**ಹೂ ಕೇರ್ಸ್**' ಎಂಬ ಸಾಕ್ಷ್ಯಚಿತ್ರ ತಯಾರಿಸಿದವರು); ಜಾನಪದ ಸಾಹಿತಿ ಗೊ.ರು.ಚನ್ನಬಸಪ್ಪ; ನಾಗಮಂಗಲದ ಶ್ರೀ ಎಂ.ಆರ್.ಎನ್.ಶಾಸ್ತ್ರಿ; ಸಮಾಜ ಕಲ್ಯಾಣ ಮಂತ್ರಿಯಾಗಿದ್ದ

ಯಶೋಧರಮ್ಮ ದಾಸಪ್ಪ; ಮಂತ್ರಿಯಾಗಿದ್ದ ಶ್ರೀ ಎಸ್.ಸಿದ್ಧವೀರಪ್ಪ; ಬೆಂಗಳೂರಿನ ಶಾಂತಿ ಪ್ರತಿಷ್ಠಾನದ ಶ್ರೀ ಕೆ.ಎಸ್.ನಾರಾಯಣಸ್ವಾಮಿ; ರಾಜ್ಯಪಾಲರಾಗಿದ್ದ ಶ್ರೀ ಧರ್ಮವೀರ; ಆಕ್ಸ್‌ಫ್ಯಾಮ್ ಸಂಸ್ಥೆಯ ಶ್ರೀ ಜಾನ್ ಸ್ಟೇಲಿ; ಭೂದಾನ ಆಂದೋಲನದ ಪ್ರವರ್ತಕರಾದ ಆಚಾರ್ಯ ವಿನೋಬಾ ಭಾವೆ(೧೯೫೭); ಲೋಕನಾಯಕ ಜಯಪ್ರಕಾಶ ನಾರಾಯಣ; ಮುಖ್ಯಮಂತ್ರಿಯಾಗಿದ್ದ ಎಸ್.ಆರ್.ಕಂಠಿ; ರಾಮಕೃಷ್ಣ ಹೆಗಡೆ; ಮಂತ್ರಿಯಾಗಿದ್ದ ಲೀಲಾವತಿ ಮಾಗಡಿ; ೧೯೬೪ರ ಸುಮಾರಿನಲ್ಲಿ ಜಪಾನ್ ದೇಶದ ರಾಯಭಾರಿ; ಮೈಸೂರಿನ ಕೈಗಾರಿಕೋದ್ಯಮಿ ಎಫ್.ಕೆ.ಇರಾನಿ ಮತ್ತು ಅವರ ಪತ್ನಿ ಶೀಲಾ ಇರಾನಿ; ಸೀತಾರಾಘವ ವೈದ್ಯಶಾಲೆಯ ಪಿ.ಆರ್.ಸೀತಾರಾಮ್ ಮತ್ತು ಲಲಿತಾ ಸೀತಾರಾಮ್; ಮಹಾಜನ ವಿದ್ಯಾಸಂಸ್ಥೆಯ ವಾಸುದೇವಮೂರ್ತಿ; ನಾರಾಯಣಸ್ವಾಮಿ; ಸಾಹಿತಿ ಎಸ್.ವಿ.ರಂಗಣ್ಣ; ಹ.ಮಾ.ನಾಯಕ್; ಪ್ರಭುಶಂಕರ; ದೇ.ಜವರೇಗೌಡ; ಪು.ತಿ.ನರಸಿಂಹಾಚಾರ್; ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಶಶಿಧರ್; ಗೊರೂರು ರಾಮಸ್ವಾಮಿ ಅಯ್ಯಂಗಾರ್; ಸಾಹಿತಿ ಸುಜನಾ; ವಿದ್ವಾನ್ ಗೊರೂರು ನರಸಿಂಹಾಚಾರ್; ರಹಮತ್ ತರೀಕೆರೆ; ಪಿ.ಲಂಕೇಶ್; ಪೂರ್ಣಚಂದ್ರ ತೇಜಸ್ವಿ; ಎಸ್.ಎಲ್.ಭೈರಪ್ಪ; ಕೆ.ರಾಮದಾಸ್; ಯು.ಆರ್.ಅನಂತಮೂರ್ತಿ; ಸ್ವಾತಂತ್ರ್ಯ ಹೋರಾಟಗಾರರಾದ ಜೋಯಿಸ್; ಎಸ್.ಆರ್.ಆರಾಧ್ಯ; ಎಚ್.ಎಸ್.ದೊರೆಸ್ವಾಮಿ; ಸತ್ಯವ್ರತ; ಗಾಂಧೀಸ್ಮಾರಕನಿಧಿ ಅಧ್ಯಕ್ಷರಾದ ಹೊ.ಶ್ರೀನಿವಾಸಯ್ಯ; ಭಾರತ ಸೇವಾದಳದ ಐ.ಎನ್.ಎ.ರಾಮರಾವ್; ಮೈಸೂರು ವಿಶ್ವವಿದ್ಯಾನಿಲಯದ ಪ್ರೊ.ಕುಪ್ಪುಸ್ವಾಮಿ; ಪತ್ರಿಕೋದ್ಯಮಿ ಖಾದ್ರಿ ಶಾಮಣ್ಣ; ಸರ್ವೋದಯ ನಾಯಕರಾದ ಸುಂದರಲಾಲ್ ಬಹುಗುಣ; ಶ್ರೀಮತಿ ವಿಮಲಾ ಬಹುಗುಣ; ಸ್ವಾತಂತ್ರ್ಯ ಹೋರಾಟಗಾರ್ತಿ ಉಷಾ.ಕೆ.ಮೆಹತಾ; ಎಸ್.ಎನ್.ಸುಬ್ಬರಾವ್; ತಮಿಳುನಾಡಿನ ಎಸ್.ಜಗನ್ನಾಥನ್; ಪ್ರೊ.ಠಾಕೂರದಾಸ್ ಬಂಗ್; ಸರ್ವಸೇವಾ ಸಂಘದ ಅಧ್ಯಕ್ಷ ಸುಗುಣ್ ಭರಂಟ್; ಯಶಪಾಲ್ ಮಿತ್ತಲ್; ವಿನೋಬಾರ ಶಿಷ್ಯ ವಲ್ಲಭಸ್ವಾಮಿ; ಬಿಹಾರದ ಜಯಪ್ರಕಾಶ್ ನಾರಾಯಣರ ಗ್ರಾಮ ನಿರ್ಮಾಣ ಮಂಡಲದ ಅಧ್ಯಕ್ಷ ತ್ರಿಪುರಾರಿ ಶರಣ ಸಿನ್ಹ; ಸಮಾಜವಾದಿ ನಾಯಕ ಗಂಗಾ ಶರಣ ಸಿಂಗ್; ಗುರುಪಾದಸ್ವಾಮಿ; ಅಂತಾರಾಷ್ಟ್ರೀಯ ಪಾದಯಾತ್ರಿ ಇ.ಪಿ.ಮೆನನ್; ಸಮಾಜವಾದಿ ಚಿಂತಕ ಪ.ಮಲ್ಲೇಶ್; ಡಿ.ಎಸ್.ನಾಗಭೂಷಣ; ಮಹಿಳಾ ಸಾಹಿತಿ ಸವಿತಾ ನಾಗಭೂಷಣ; ಮೈಸೂರು ನಗರದ ಜವಳಿ ಕೈಗಾರಿಕೋದ್ಯಮಿ ಸೋಮಾನಿ; ಪತ್ರಿಕೋದ್ಯಮಿ ಎಸ್.ಪಟ್ಟಾಭಿರಾಮನ್ ಮತ್ತು ಕೃಷ್ಣವಟ್ಟಂ; ಬೆಂಗಳೂರಿನ ಅಂಗವಿಕಲರ ಸಂಸ್ಥೆ ಎ.ಪಿ.ಎಚ್ ಸಂಸ್ಥಾಪಕರಾದ ಹೇಮಾ ಅಯ್ಯಂಗಾರ್; ರಂಗಕರ್ಮಿ ಪ್ರಸನ್ನ; ಸಾಹಿತಿ ಮತ್ತು ಚಿಂತಕ ಜಿ.ಕೆ.ಗೋವಿಂದರಾವ್; ಸಾಹಿತಿ ದೇವನೂರು ಮಹಾದೇವ; ಸುಮಿತ್ರಾಬಾಯಿ; ಗಾಂಧೀ ಸಾಹಿತ್ಯ ಅನುವಾದಕ ಮತ್ತು ಸಿದ್ಧವನಹಳ್ಳಿ ಕೃಷ್ಣಶರ್ಮರ ಶಿಷ್ಯ ನೀಲತ್ತಹಳ್ಳಿ ಕಸ್ತೂರಿ; ಗದುಗಿನ ಮಠದ ಸ್ವಾಮೀಜಿ; ಸೋಸಲೆ ಮಠದ ಸ್ವಾಮೀಜಿ; ಕನ್ನಡ ಚಲನಚಿತ್ರರಂಗದ ಬಿ.ಸರೋಜಾದೇವಿ; ಶ್ರೀ ಕೆ.ಎಸ್.ಅಶ್ವಥ್; ವಿಷ್ಣುವರ್ಧನ್; ಮಿಥುನ್ ಚಕ್ರವರ್ತಿ; ಶಂಕರ್‌ನಾಗ್; ಅನಂತನಾಗ್; ನೃತ್ಯಪಟು ಶ್ರೀಧರ್; ಅರುಂಧತಿನಾಗ್; ಸಿನಿಮಾ ನಿರ್ದೇಶಕ ಕೃಷ್ಣಸ್ವಾಮಿ; ನಿರ್ದೇಶಕ ಸತ್ಯು; ಛಾಯಾಗ್ರಾಹಕ ಟಿ.ಎನ್.ಸತ್ಯನ್; ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಅಮೇರಿಕಾ ಮತ್ತು ಜಪಾನ್ ದೇಶಗಳ ಸ್ವಯಂಸೇವಕರು, ಮುಂತಾದ ಮೇಲ್ಕಾಣಿಸಿದ ಮಹನೀಯರ ಪಾದಧೂಳಿ ಜನಪದ ನಿಲಯವನ್ನು ಐತಿಹಾಸಿಕಗೊಳಿಸಿದೆ. ಇನ್ನೂ ಹಲವಾರು ಮಹನೀಯರ ಹೆಸರುಗಳು ಜ್ಞಾಪಕಕ್ಕೆ ಬರದೆ ಹಾಗೆಯೇ ಉಳಿದಿದೆ. ಎಲ್ಲ ಮಹನೀಯರಿಗೆ ಜನಪದ ಸೇವಾ ಟ್ರಸ್ಟ್ ತನ್ನ ಹೃದಯಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಖಾದಿ ವಿಚಾರ

ಕರ್ನಾಟಕದ ಹಿರಿಯ ಖಾದಿ ಸಂಸ್ಥೆಗಳಲ್ಲಿ ಒಂದಾದ ಬೆಂಗಳೂರಿನಲ್ಲಿರುವ ಕರ್ನಾಟಕ ಸರ್ವೋದಯ ಸಂಘದ ೫೫ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಕಳೆದ ಫೆಬ್ರವರಿ ತಿಂಗಳಲ್ಲಿ ನಡೆಯಿತು. ಈ ಸಂಘವೂ ಖಾದಿ ದಾರ ಮತ್ತು ಖಾದಿ ಬಟ್ಟೆಯ ಉತ್ಪಾದನೆ ಮತ್ತು ಸರ್ವೋದಯ ಆಂದೋಲನಕ್ಕೆ ನೆರವಾಗುತ್ತಾಬಂದಿದೆ. ಕಳೆದ ೨೦೧೨-೧೩ನೇ ಸಾಲಿನಲ್ಲಿ ೨೬ಲಕ್ಷದ ೮೪ಸಾವಿರ ರೂಪಾಯಿಯಷ್ಟು ಖಾದಿ ಉತ್ಪತ್ತಿಯಾಗಿದೆ. ರೇಷ್ಮೆ ಖಾದಿ ೪೦ಲಕ್ಷದ ೫೦ಸಾವಿರದಷ್ಟಾಗಿದೆ. ಖಾದಿ ಮಾರಾಟ ೮೫ಲಕ್ಷದ ೭೪ಸಾವಿರ. ಗ್ರಾಮೋದ್ಯೋಗ ಉತ್ಪನ್ನಗಳು ೬ಲಕ್ಷದ ೫೮ಸಾವಿರ. ಸಂಘದ ಎಲ್ಲ ಖರ್ಚನ್ನು ಕಳೆದು ಬಂದ ನಿವ್ವಳ ಲಾಭಾಂಶ ರೂ.೭೩ಲಕ್ಷಗಳನ್ನು ಮೂಲ ಬಂಡವಾಳಕ್ಕೆ ಸೇರಿಸಲಾಗಿದೆ. ಜನಶ್ರೀ ವಿಮಾ ಯೋಜನೆಯಡಿ ಸಂಘದ ಕಾರ್ಯಕರ್ತರ ೩೦ ಮಕ್ಕಳಿಗೆ ವಿದ್ಯಾರ್ಥಿವೇತನ ಕೊಡಲಾಗಿದೆ. ಖಾದಿ ಆಯೋಗದಿಂದ ೧೮ಲಕ್ಷದ ೯೮ಸಾವಿರ ಮತ್ತು ಖಾದಿ ಮಂಡಳಿಯಿಂದ ೩೪ಲಕ್ಷ ರೂಪಾಯಿ ರಿಬೇಟ್ ಹಣ ಬರಬೇಕಾಗಿದೆ. ಸಂಘದ ಅಧ್ಯಕ್ಷರಾಗಿ ಶ್ರೀ ಕೆ.ರಾಮಣ್ಣನವರೇ ಮುಂದುವರೆದಿದ್ದಾರೆ.

ತಿರುವು ಮುರುವಾಗಿ ಶೋಧನೆ :

ನಮ್ಮ ರಚನಾತ್ಮಕ ಕಾರ್ಯದಲ್ಲೂ ಕೂಡ ಜ್ಞಾನದ ಶೋಧನೆಯಾಯಿತು. ಈಗ ಸ್ವರಾಜ್ಯದ ನಂತರ ಕರ್ಮಯೋಗದ ಆರಂಭವಾಗುತ್ತಲಿದೆ. ಜನತೆಯಲ್ಲಿ ಜಾಗೃತಿಯುಂಟಾಗದೆ ಸ್ವರಾಜ್ಯ ಅಸಂಭವವೆಂದು ಆ ದಿನಗಳಲ್ಲಿ ಯೋಚಿಸಲಾಗುತ್ತಿತ್ತು. ಅದ್ದರಿಂದ ಜನಜಾಗೃತಿ ಅವಶ್ಯವೆಂದು ಭಾವಿಸಿ ಅದರ ಮಾರ್ಗಗಳ ಹುಡುಕಾಟ ಶುರುವಾಯಿತು. ಅದರಿಂದಾಗಿ ಸರ್ವ ಪ್ರಥಮ ೧) ರಾಷ್ಟ್ರೀಯ ಶಿಕ್ಷಣ; ೨) ವಿದೇಶಿ ವಸ್ತುಗಳ ಬಹಿಷ್ಕಾರ ಮತ್ತು ೩) ಸ್ವದೇಶಿ ಈ ಮೂರು ಸಾಧನಗಳು ದೊರೆತವು. ವಾಸ್ತವದಲ್ಲಿ ಸ್ವದೇಶಿ ಮತ್ತು ಬಹಿಷ್ಕಾರ ಒಂದೇ ವಿಷಯದ ಎರಡು ಮಗ್ಗಲು. ಒಂದು ನಿಷೇಧಾತ್ಮಕವಾದರೆ ಎರಡನೆಯದು ಸಕಾರಾತ್ಮಕ. ಆಧ್ಯಾತ್ಮಿಕ ಭಾಷೆಯಲ್ಲಿ ಒಂದು ವೈರಾಗ್ಯವಾದರೆ, ಇನ್ನೊಂದು 'ಅಭ್ಯಾಸ'. ಎರಡೂ ಸೇರಿ ಒಂದೇ ವಿಷಯ.

ಗಾಂಧೀಜಿ ಇದಕ್ಕೆ 'ಶುದ್ಧ ಸ್ವದೇಶಿ' ಎಂಬ ಹೆಸರು ಕೊಟ್ಟರು. ನಾವು ಖಾದಿ ಕಾರ್ಯಕರ್ತರು ಅದರ ಹುಡುಕಾಟಕ್ಕಾಗಿ ಹೊರಟೆವು. ಕೋಚರಬ್ ಆಶ್ರಮದಲ್ಲಿ ಮೊದಮೊದಲು ಮಿಲ್‌ದಾರವನ್ನು ಖರೀದಿಸಿಯೇ ನೇಯ್ಗೆ ಮಾಡಲಾಗುತ್ತಿತ್ತು. ಹುಡುಕಾಟ ನಡೆಯುತ್ತಲೇ ಹೋಯಿತು. ಪ್ರತಿಯೊಂದು ಕಷ್ಟಕ್ಕೂ ಪರಿಹಾರ ಸಿಗುತ್ತಾಹೋಯಿತು. ಚರಖಾದಿಂದ ಹಿಡಿದು ಹಂಜಿ ಮಾಡುವವರೆಗೆ ಹುಡುಕಾಟ ನಡೆಯಿತು. ಆದರೆ ಅರಳೆಯನ್ನು ಮಿಲ್‌ನಿಂದ ಕೊಳ್ಳಲಾಗುತ್ತಿತ್ತು. ಅದು ಸ್ವಚ್ಛವಾಗಿರುತ್ತಿರಲಿಲ್ಲ. ಆದ್ದರಿಂದ ಹೊಲದಲ್ಲಿ ಹತ್ತಿ ಬೆಳೆದು ನೇರವಾಗಿ ರೈತರಿಂದಲೇ ಒಳ್ಳೆಯ ಹತ್ತಿಯನ್ನು ತೆಗೆದುಕೊಳ್ಳಬೇಕೆಂಬ ಶೋಧನೆಯಾಯಿತು. ಈ ರೀತಿ ಇಡೀ ಶೋಧನೆ ತಿರುವುಮುರುವಾದ ರೀತಿಯಲ್ಲಿ ಆಗುತ್ತಾಹೋಯಿತು. ಹತ್ತಿಯವರೆಗೆ ತಲುಪಿ ನಂತರದಲ್ಲಿ ನಮಗೆ ಹೊಲದ ಸಂಪರ್ಕವುಂಟಾಯಿತು. ಈ ಮಧ್ಯ ನಮಗೆ ಸ್ವರಾಜ್ಯ ಸಿಕ್ಕಿತು. ತದನಂತರ ಭೂಮಿಯ ಮಾತು ಬಂತು. ಮತ್ತು ಭೂದಾನ ಗ್ರಾಮದನ ಆಂದೋಲನ ನಡೆಯಿತು. ಈ ವಿವರಣೆಯಿಂದ ನಾವು ಯಾವ ಪ್ರಕಾರ 'ಊರ್ಧ್ವಮೂಲ ಮಧಃ ಶಾಖಂ'ವರೆಗೆ ತಲುಪಿದೆವೆಂಬುದು ಗಮನಕ್ಕೆ ಬರುತ್ತದೆ.

ಸರ್ವೋದಯ ಆಂದೋಲನದ ಮುನ್ನಡೆ

ಕರ್ನಾಟಕ ಸರ್ವೋದಯ ಮಂಡಲದ ವಿನಂತಿಯ ಮೇರೆಗೆ ರಾಜ್ಯ ಸರ್ಕಾರವು ಈ ವರ್ಷ ಜನವರಿ ಮಾಹೆಯನ್ನು 'ಸರ್ವೋದಯ ಮಾಸ'ವೆಂದು ಆಚರಿಸಲು ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಸೂಚಿಸಿತ್ತು. ಈ ಮೊದಲು ಇಂಥ ಆಚರಣೆ ನಡೆಸುವ ಕಾರ್ಯಕ್ರಮ ಶೈಕ್ಷಣಿಕ ಸಂಸ್ಥೆಗಳು ಕೈಗೊಂಡಿರಲಿಲ್ಲ. ಇದೊಂದು ಒಳ್ಳೆಯ ಬೆಳವಣಿಗೆ. ಈ ಮಾಸಾಚರಣೆಯ ಸಂದರ್ಭದಲ್ಲಿ ಗಾಂಧೀಜಿಯವರ ಜೀವನ ಮತ್ತು ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದಕಷ್ಟೆ ಮೀಸಲಾಗಿಡದೆ ಗಾಂಧೀಜಿ ಬಯಸಿದ್ದ ಸರ್ವೋದಯ ಸಿದ್ಧಾಂತಾಧಾರಿತ ರಚನೆಗೆ ಪೂರಕವಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ವಿಶೇಷ ತಿಳುವಳಿಕೆಯನ್ನು ಕೊಡುವುದಕ್ಕೆ ಉಪಯೋಗಿಸಲಾಯಿತು. ಪ್ರಚಲಿತವಿರುವ ಎಲ್ಲ ಬಗೆಯ ಸಿದ್ಧಾಂತಗಳಿಗಿಂತಲೂ ಜಾಗತಿಕ ಸಮಸ್ಯೆಗಳ ಪರಿಹಾರಕ್ಕೆ ಸರ್ವೋದಯ ಸಿದ್ಧಾಂತ ಹೇಗೆ ತಾರಕ ಮಂತ್ರವಾಗಿದೆ ಎಂಬುದನ್ನು ತಿಳಿಸುವ ಪ್ರಯತ್ನಮಾಡಲಾಯಿತು. ಈ ಬಗೆಯ ಕಾರ್ಯಕ್ರಮಗಳು ಮಂಡ್ಯ, ತುಮಕೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಡೆದ ವರದಿಗಳು ಸರ್ವೋದಯ ಮಂಡಳಿಯ ಕಛೇರಿಗೆ ಬಂದಿವೆ. ಬರುವ ವರ್ಷ ಕೂಡ 'ಸರ್ವೋದಯ ಮಾಸಾಚರಣೆ' ಹೆಚ್ಚು ರಚನಾತ್ಮಕವಾಗಿ, ಸಕ್ರಿಯವಾಗಿ ಮತ್ತು ಅರ್ಥಪೂರ್ಣವಾಗಿ ನಡೆಸಬೇಕೆಂದು ಯೋಚಿಸಲಾಗಿದೆ.

ಪ್ರತಿವರ್ಷದಂತೆ ಈ ಸಲವೂ ಫೆಬ್ರವರಿ ೧೧ ಮತ್ತು ೧೨ರಂದು ಶ್ರೀರಂಗಪಟ್ಟಣದ ಬಳಿ ಪಶ್ಚಿಮವಾಹಿನಿಯಲ್ಲಿ ಸರ್ವೋದಯ ಮೇಳ ನಡೆಯಿತು. ಮೇಳದಲ್ಲಿ ಸುಮಾರು ೩೦೦ಜನ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ 'ಹೊಸ ಮನುಷ್ಯ' ಪತ್ರಿಕೆಯ ಸಂಪಾದಕ ಡಿ.ಎಸ್.ನಾಗಭೂಷಣ ಮಹಿಳಾ ಸಾಹಿತಿ ಸವಿತಾ ನಾಗಭೂಷಣ ಮತ್ತು ಸಾವಯವ ಕೃಷಿಕ ನಾರಾಯಣ ರೆಡ್ಡಿ ಭಾಗವಹಿಸಿದ್ದರು. ಮಂಡಿಸಲಾದ ವಿಚಾರಗಳ ಮೇಲೆ ಬಹುವಾಗಿ ಚರ್ಚೆ ನಡೆಯಿತು. ಮೇಳದ ಅಧ್ಯಕ್ಷತೆಯನ್ನು ಸಂವಿಧಾನತಜ್ಞ ಮತ್ತು ಚಿಂತಕ ಸಿ.ಕೆ.ಎನ್.ರಾಜಾ ವಹಿಸಿದ್ದರು. ಉಪನ್ಯಾಸಗಳೆಲ್ಲವೂ ವಿಚಾರಪೂರಿತವಾಗಿದ್ದವು.

ಇತ್ತೀಚೆಗೆ ಮಧ್ಯಪ್ರದೇಶದ ಸುಭೌಲ್ ಜಿಲ್ಲೆಯಲ್ಲಿ ಗ್ರಾಮಸ್ವರಾಜ್ಯ ಪ್ರಶಿಕ್ಷಣ ಶಿಬಿರ ನಡೆಯಿತು. ೧೫ ಮಹಿಳೆಯರು ಮತ್ತು ೩೫ ಯುವಕರು ಭಾಗವಹಿಸಿದ್ದರು. ಕೊನೆಯ ದಿನ ಭೂದಾನ ಪಡೆದ ರೈತರ ಸಮಸ್ಯೆಗಳ ಬಗ್ಗೆ ಸಾರ್ವಜನಿಕ ಸಭೆ ಏರ್ಪಡಿಸಲಾಗಿತ್ತು. ಆ ಸಭೆಯಲ್ಲಿ ೧೦ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಮುಖ್ಯವಾಗಿ ಹಳ್ಳಿಯ ಜಲ-ಜಂಗಲ್-ಜಮೀನ್ ಮೇಲೆ ಗ್ರಾಮ ಸಭೆಯ ಹಕ್ಕಿರಬೇಕೆಂಬುದು ಒಂದಾಗಿತ್ತು.

ಫೆಬ್ರವರಿ ೧೫ ರಿಂದ ೨೩ನೇ ತಾರೀಖಿನ ವರೆಗೆ ಹೊಸದಿಲ್ಲಿಯಲ್ಲಿ ನಡೆಯಲಿರುವ 'ವಿಶ್ವ ಪುಸ್ತಕ ಮೇಳ'ದಲ್ಲಿ ಅಖಿಲ ಭಾರತ ಸರ್ವೋದಯ ಮಂಡಳಿಯ ಪ್ರಕಾಶನದ ವಿಭಾಗವು ಭಾಗವಹಿಸಲು ತೀರ್ಮಾನಿಸಿದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಟಿ.ಜಿ.ಸತ್ಯನಾರಾಯಣ – ತಗಡೂರು
ಶ್ರೀ ಗುಂಡಪ್ಪ ಗೌಡರು – ಮೈಸೂರು
ಶ್ರೀ ಆರ್.ಚಂದ್ರಶೇಖರಯ್ಯ – ಪಾಂಡವಪುರ
ಶ್ರೀ ಕೆ.ಆರ್.ನೀಲಕಂಠಮೂರ್ತಿ – ನಂದಿಹಳ್ಳಿ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ದೇವರಾಜ್ – ಬೆಂಗಳೂರು
ಶ್ರೀ ಎನ್.ನಾಗರಾಜ್ – ಮೈಸೂರು
ಶ್ರೀ ಎಸ್.ಎನ್.ಶಂಕರ್ – ಮಾಯಸಂದ್ರ
ಶ್ರೀ ಎಸ್.ಎನ್.ಸುಬ್ರಮಣ್ಯ – ಬೆಂಗಳೂರು
ಶ್ರೀ ಸಾದರನಹಳ್ಳಿ ಪ್ರಭು – ತುಮಕೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

“ಜನಪದ ವಿಚಾರ” ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ ‘ಜನಪದ ವಿಚಾರ’ ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ--ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820



ಶ್ರೀಮತಿ/ ಶ್ರೀ......

ಶ್ರೀ ಜಿ. ಎನ್. ರಾಜಶೇಖರನಾಯ್ಡು
ರಾಜ್ಯ ಪ್ರಧಾನ ಕಾರ್ಯದರ್ಶಿ
ಕರ್ನಾಟಕ ಭೂ ಹಕ್ಕುದಾರರ
ವೇದಿಕೆ. ಪ್ಲಾಟ್ ನಂ 4/46
ಕೃಷ್ಣಾನಗರ,
ಎಂ. ಎ. ಎಂ. ಹಾಸ್ಟೇಲ್ ಹಿಂಭಾಗ
ಗುಲಬರ್ಗಾ-585103

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh Mudrana, Melkote.